ಕನ್ನಡ

ಪರಮಾರ್ಥ ಸೋಪಾನ

[Companion Volume to 'Pathway to God in Kannada Literature']

ಸಂಗ್ರಾಹಕರು :

ಡಾ|| ರಾ. ದ. ರಾನಡೆ, ಎಂ.ಎ., ಡಿ.ಲಿಟ್.

ಸಂಪಾದಕರು :

ಮು. ಶ್ರೀ. ದೇಶಪಾಂಡೆ, ಎಂ.ಎ.

ಕರ್ನಾಟಕ ವಿಶ್ವವಿದ್ಯಾಲಯ

ಧಾರವಾಡ

೧೯೬೯

ಕನ್ನಡ

ಪರಮಾರ್ಥ ಸೋಪಾನ

[Companion Volume to 'Pathway to God in Kannada Literature']

ಸಂಗ್ರಾಹಕರು :

ಡಾ|| ರಾ. ದ. ರಾನಡೆ, ಎಂ.ಎ., ಡಿ.ಲಿಟ್.

ಸಂಪಾದಕರು :

ಮು. ಶ್ರೀ. ದೇಶಪಾಂಡೆ, ಎಂ.ಎ.

ಕರ್ನಾಟಕ ವಿಶ್ವವಿದ್ಯಾಲಯ

ಧಾರವಾಡ

೧೯೬೯

ಕನ್ನಡ

ಪರಮಾರ್ಥ ಸೋಪಾನ

[Companion Volume to 'Pathway to God in Kannada Literature']

ಸಂಗ್ರಾಹಕರು :

ಡಾ|| ರಾ. ದ. ರಾನಡೆ, ಎಂ.ಎ., ಡಿ.ಲಿಟ್.

ಸಂಪಾದಕರು :

ಮು. ಶ್ರೀ. ದೇಶಪಾಂಡೆ, ಎಂ. ಎ.

ಕರ್ನಾಟಕ ವಿಶ್ವವಿದ್ಯಾಲಯ

ಧಾರವಾಡ

೧೯೬೯

ಪ್ರಥಮ ಮುದ್ರಣ : ೫೦೦ ಪ್ರತಿಗಳು—ಮೇ, ೧೯೬೨
ದ್ವಿತೀಯ ಮುದ್ರಣ : ೧೦೦೦ ಪ್ರತಿಗಳು—ಜುಲೈ, ೧೯೬೯

© ಎಲ್ಲ ಹಕ್ಕುಗಳನ್ನು ಕಾಯ್ದಿರಿಸಲಾಗಿದೆ.

ಬೆಲೆ : ರೂ. ೨–೫೦

ಮುದ್ರಕರು :
ಬಿ. ಜಿ. ಗುತ್ತಲ,
ಬಿ.ಎ., ಎಲ್‌ಎಲ್.ಬಿ.,
ಸಂಯುಕ್ತ ಕರ್ನಾಟಕ ಪ್ರೆಸ್,
ಕೊಪ್ಪಿಕರ ರೋಡ್
ಹುಬ್ಬಳ್ಳಿ

ಪ್ರಕಾಶಕರು :
ಎಸ್. ಎಸ್. ಒಡೆಯರ,
ಎಂ.ಎ., ಎಲ್‌ಎಲ್.ಬಿ.,
ರಜಿಸ್ಟ್ರಾರ್
ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ

ಮುನ್ನುಡಿ

ಕರ್ನಾಟಕ ವಿಶ್ವವಿದ್ಯಾಲಯದ ಆಶ್ರಯದಲ್ಲಿ, ದಿವಂಗತ ಡಾ|| ಆರ್. ಡಿ. ರಾನಡೆಯವರು 'ಕನ್ನಡ ಅನುಭಾವ ಮಾರ್ಗ'ವನ್ನು ಕುರಿತು ೧೯೫೪—೫೭ ಈ ಅವಧಿಯಲ್ಲಿ ಹದಿನಾಲ್ಕು ಉಪನ್ಯಾಸಗಳನ್ನು ಕೊಟ್ಟರು. ಅವುಗಳ ಸಾರವನ್ನು ಒಳಗೊಂಡ ' Pathway to God in Kannada Literature ' ಎಂಬ ಗ್ರಂಥವನ್ನು ಮುಂಬಯಿಯ ಭಾರತೀಯ ವಿದ್ಯಾಭವನದವರು ಕರ್ನಾಟಕ ವಿಶ್ವವಿದ್ಯಾಲಯದ ಜೊತೆಗೂಡಿ ೧೯೬೦ರಲ್ಲಿ ಪ್ರಕಟಿಸಿದರು. ಅದರ ಕನ್ನಡ ಅನುವಾದವನ್ನೂ 'ಕನ್ನಡ ಸಂತರ ಪರಮಾರ್ಥ ಪಥ' ಎಂಬ ಹೆಸರಿನಲ್ಲಿ ವಿಶ್ವವಿದ್ಯಾಲಯ ಇದೇ ವರುಷ ಬೆಳಕಿಗೆ ತಂದಿತು. ಶರಣರ, ದಾಸರ ಅನುಭಾವ ಸಾಹಿತ್ಯದಿಂದಲೂ, ತತ್ತ್ವಪದಗಳಿಂದಲೂ ಎತ್ತಿ ಕೊಂಡು ಉದಾಹರಿಸಿದ ಅನೇಕ ಪದ್ಯಭಾಗಗಳನ್ನು ಈ ಗ್ರಂಥದುದ್ದಕ್ಕೂ ನಾವು ಕಾಣುತ್ತೇವೆ. ಇವುಗಳ ಘನತೆಯನ್ನೂ, ಮಹತ್ವವನ್ನೂ ಅರಿತ ಓದುಗರು ಆಯಾ ಪದ-ಪದ್ಯಗಳನ್ನು ಇಡಿಯಾಗಿಯೇ ನೋಡಬಯಸುವದು ಸಹಜವಾಗಿದೆ. ಆಲ್ಲದೆ ಇಲ್ಲಿ ಉದಾಹೃತವಾದ ಹಾಡುಗಳಲ್ಲಿ ಕೆಲವು ಇನ್ನೂ ಪ್ರಕಟವಾಗದೆ ಇರುವಂಥವು. ಈ ಅಮೂಲ್ಯವಾದ ಸಾಹಿತ್ಯವನ್ನು ಡಾ|| ರಾನಡೆಯವರು ವಿಶೇಷ ಆಸ್ಥೆಯಿಂದ ಹಾಡುಗರ ಬಾಯಿಂದಲೇ ಕೇಳಿ, ಸಂಗ್ರಹಿಸಿದ್ದರಲ್ಲದೆ ಅವುಗಳಿಗೆ ಅಭ್ಯಾಸದ ಟಿಪ್ಪಣಿಗಳನ್ನೂ ಬರೆದಿಟ್ಟಿದ್ದರು. ಆದುದರಿಂದ 'ಕನ್ನಡ ಸಂತರ ಪರಮಾರ್ಥ ಪಥ'ಕ್ಕೆ ಈ ಹಾಡುಗಳ ಪೂರ್ತಿ ಪಾಠವನ್ನೂ, ಟಿಪ್ಪಣಿಗಳನ್ನೂ ಒಳಗೊಂಡ 'ಕನ್ನಡ ಪರಮಾರ್ಥ ಸೋಪಾನ'ವು ಒಳ್ಳೆಯ ಸಹಾಯಕ ಗ್ರಂಥವಾಗಿ (Companion volume) ಪರಿಣಮಿಸಬಹುದೆಂದು ಭಾವಿಸಿ ಅದನ್ನೂ ಈಗ ಓದುಗರಿಗೆ ಒದಗಿಸಲಾಗಿದೆ. ವಿಶ್ವವಿದ್ಯಾಲಯವು ಈ ದಿಸೆಯಲ್ಲಿ ಕೈಕೊಂಡ ಕಾರ್ಯ ಈ ಮೂರೂ ಗ್ರಂಥಗಳ ಪ್ರಕಟಣೆಯಿಂದ ಪೂರ್ತಿಗೊಳ್ಳಲು ಸಾಧ್ಯವಾದುದಕ್ಕಾಗಿ ನನಗೆ ಸಂತೋಷವೆನಿಸಿದೆ.

'ಕನ್ನಡ ಸಂತರ ಪರಮಾರ್ಥಪಥ'ವನ್ನು ಕನ್ನಡಕ್ಕೆ ಅನುವಾದಿಸಿಕೊಟ್ಟವರೂ, ಡಾ|| ರಾನಡೆಯವರ ಪರಮಶಿಷ್ಯರೂ ಆದ ಶ್ರೀ ಎಂ. ಎಸ್. ದೇಶಪಾಂಡೆಯವರೇ ಸ್ವಯಂಪ್ರೇರಣೆಯಿಂದ 'ಕನ್ನಡ ಪರಮಾರ್ಥ ಸೋಪಾನ'ವನ್ನು ಸಂಯೋಜಿಸಿ, ಶ್ರೀ ದಿವಾಕರ ಸಮಿತಿಯ ನೆರವಿನಿಂದ ಸಿದ್ಧಪಡಿಸಿಕೊಟ್ಟಿದ್ದಾರೆ. ವಿಶ್ವವಿದ್ಯಾಲಯದ ಪ್ರಕಟನಾ ಸಮಿತಿಯ ಸದಸ್ಯರಾದ ಡಾ|| ಎಸ್. ಸಿ. ನಂದೀಮಠ, ಪ್ರೊ. ಎಸ್. ಎಸ್. ಮಾಳವಾಡ ಹಾಗೂ ಶ್ರೀ. ವ್ಹಿ. ಬಿ. ನಾಯಕ ಅವರು ಇದರ ಹಸ್ತಪ್ರತಿಯನ್ನೊಮ್ಮೆ ನೋಡಿ, ಉಪಯುಕ್ತವಾದ ಸಲಹೆ ಸೂಚನೆಗಳನ್ನಿತ್ತು ನೆರವಾಗಿದ್ದಾರೆ. ಇವರೆಲ್ಲರಿಗೂ ವಿಶ್ವವಿದ್ಯಾಲಯ ತನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ : ೧-೫-೧೯೬೨

ಡಾ. ಚಿಂ. ಪಾವಟೆ
ಉಪಕುಲಪತಿ

ಪ್ರಸ್ತಾವನೆ

ಶ್ರೀ ಗುರುದೇವ ಡಾ॥ ರಾನಡೆಯವರು ಶ್ರೇಷ್ಠ ಅನುಭಾವಿಗಳು, ಪ್ರಕಾಂಡ ಪಂಡಿತರು. ಅವರ ಅಲೌಕಿಕ ಬುದ್ಧಿಯು ಜ್ಞಾನದ ಎಲ್ಲ ಕ್ಷೇತ್ರಗಳಲ್ಲಿ ಲೀಲೆಯಿಂದ ವಿಹರಿಸುತ್ತಿದ್ದಿತು. ಎಲ್ಲಿಯೂ ಅದು ತಡವರಿಸುತ್ತಿರಲಿಲ್ಲ. ಅದರ ಫಲವಾಗಿ ಅವರು ಅನೇಕ ಶಾಸ್ತ್ರಗಳನ್ನು ಸಹಜವಾಗಿ ಅರಿತರು. ದರ್ಶನವು ಅವರ ಅತ್ಯಂತ ಪ್ರೀತಿಯ ವಿಷಯ. ಗಣಿತ-ವಿಜ್ಞಾನಗಳಲ್ಲಿಯೂ ಅವರು ಪಾರಂಗತರು. ಅವರ ಭಾಷಾಪ್ರಭುತ್ವವೂ ಅವರ್ಣನೀಯವಾದುದು. ನಮ್ಮ ಪ್ರಾಚೀನ ಭಾಷೆಗಳಾದ ಸಂಸ್ಕೃತ-ಲ್ಯಾಟಿನ್ ಹಾಗೂ ಗ್ರೀಕ, ಆಧುನಿಕ ಪಾಶ್ಚಾತ್ಯ ಭಾಷೆಗಳಾದ ಇಂಗ್ಲಿಷ್ ಹಾಗೂ ಜರ್ಮನ್ ಮತ್ತು ಭಾರತೀಯ ಭಾಷೆಗಳಾದ ಮರಾಠಿ, ಕನ್ನಡ ಹಾಗೂ ಹಿಂದಿ—ಇವನ್ನು ಅವರು ಚೆನ್ನಾಗಿ ಅಭ್ಯಸಿಸಿ, ಅವುಗಳ ಮೇಲೆ ಒಳ್ಳೆಯ ಪ್ರಭುತ್ವವನ್ನು ಪಡೆದಿದ್ದರು. ಮರಾಠಿಯು ಅವರ ಮಾತೃಭಾಷೆ; ಕನ್ನಡವು ಅವರ ಪ್ರಾದೇಶಿಕ ಭಾಷೆ. ಅವರು ಜನಿಸಿದುದು, ಬೆಳೆದುದು ಜಂಬುಕಂಡಿಯಲ್ಲಿ, ಕನ್ನಡನಾಡಿನಲ್ಲಿ. ಆದುದರಿಂದ ಅವರಿಗೆ ಮೊದಲಿನಿಂದ ಕನ್ನಡವು ಕೊಂಚ ತಿಳಿಯುತ್ತಿತ್ತು. ಓದಲು, ಬರೆಯಲು ಬರುತ್ತಿರಲಿಲ್ಲ. ಆದರೆ ಮುಂದೆ ಕನ್ನಡ ನುಡಿಯನ್ನು ಸೂಕ್ಷ್ಮವಾಗಿ ಅಭ್ಯಸಿಸಬೇಕೆಂದು ಅವರಿಗೆ ಪ್ರಬಲವಾಗಿ ಹೊಳೆದ ಮೂಲಕ ಅವರು ತಮ್ಮದೇ ಆದ ಪದ್ಧತಿಯಿಂದ ಬೇಗನೆ ಅದನ್ನು ಕಲಿತರು ಮತ್ತು ಕನ್ನಡ ಲಿಪಿಯ ಪರಿಚಯವಿಲ್ಲದಿದ್ದರೂ, ಅದರಲ್ಲಿ ಪಾರಂಗತತೆಯನ್ನು ಪಡೆದರು,

ಕನ್ನಡ ನುಡಿ ಹಾಗೂ ಕನ್ನಡಿಗರ ಅನುಭಾವವು ಶ್ರೀ ಗುರುದೇವರ ಗಮನ ಸೆಳೆದ ಬಗೆಯು ತುಂಬ ಸ್ವಾರಸ್ಯವುಳ್ಳದ್ದಾಗಿದೆ. ಶ್ರೀ ಗುರುದೇವರ ಸದ್ಗುರುಗಳಾದ ಉಮದಿಯ ಶ್ರೀ ಭಾವೂಸಾಹೇಬ ಮಹಾರಾಜರವರು ಹಾಗೂ ಅವರ ಪರಾತ್ಪರ ಸದ್ಗುರುಗಳಾದ ನಿಂಬರಗಿಯ ಶ್ರೀ ನಾರಾಯಣರಾವ ಇಲ್ಲವೆ ಶ್ರೀ ಗುರುಲಿಂಗಜಂಗಮ ಮಹಾರಾಜರವರು ಕನ್ನಡಿಗರು. ಅವರು ಮರಾಠಿ ಭಾಷೆಯನ್ನೂ ಬಲ್ಲರು. ಆದರೆ ತಮ್ಮ ಪರಮಾರ್ಥ-ಪ್ರವಚನಗಳಿಗಾಗಿ ಅವರು ಆಗಾಗ ಕನ್ನಡವನ್ನೇ ಬಳಸುತ್ತಿದ್ದರು. ಆ ಸಮಯದಲ್ಲಿ ಅವರು ಕನ್ನಡ ಅನುಭಾವ ಪದಗಳನ್ನು ಹೇಳಿಸುತ್ತಿದ್ದರು. ಅವುಗಳ ಅರ್ಥವನ್ನು ವಿವರಿಸುತ್ತಿದ್ದರು. ಶ್ರೀ ಗುರುದೇವರಿಗೆ ಕನ್ನಡ ಮಾತು ತಿಳಿದರೂ ಪದಗಳ ಅರ್ಥ ತಿಳಿಯುತ್ತಿರಲಿಲ್ಲ. ಅವರ ಸದ್ಗುರುಗಳು ಒಮ್ಮೆ ಅವರನ್ನು ಈ ರೀತಿ ಎಚ್ಚರಿಸಿದರೆಂದು ಶ್ರೀ ಗುರುದೇವರೇ ತಮ್ಮ ಉಪನ್ಯಾಸವೊಂದರಲ್ಲಿ ಅರುಹಿರುವರು. "ಕನ್ನಡಿಗರ ಅನುಭಾವವು ತುಂಬ ವಿಶಾಲವಾದ ವಿಷಯ. ನನ್ನ ಗುರುಗಳಿಂದಲೂ, ಪರಾತ್ಪರ ಗುರುಗಳಿಂದಲೂ ನನಗದರ ಪರಿಚಯವಾದುದು ನನ್ನ

ಸುದೈವವೇ ಸರಿ. ನಾನು ಕನ್ನಡಿಗನಿರುವದು ನನಗೊಂದು ಅಭಿಮಾನದ ವಿಷಯ. ಯಾಕೆಂದರೆ ರಾಮದಾಸ, ತುಕಾರಾಮರ ಗ್ರಂಥಗಳನ್ನು ಬಿಟ್ಟರೆ, ನನ್ನ ಸದ್ಗುರುಗಳು ಕನ್ನಡದ ಮುಖಾಂತರವಾಗಿಯೆ ನನಗೆ ಅನುಭಾವದ ಸತ್ಯತೆಯನ್ನು ಮೊದಲು ಮನಗಾಣಿಸಿದರು. ಒಮ್ಮೆ ನಾವಿಬ್ಬರೂ ವಿಜಾಪುರ ಜಿಲ್ಲೆಯಲ್ಲಿಯ ಹೊರ್ತಿ ಎಂಬ ಗ್ರಾಮದಲ್ಲಿದ್ದೆವು. ಆಗ ಅಲ್ಲಿ ಒಬ್ಬರು ಪದವೊಂದನ್ನು ಹೇಳಿದರು. ನಾನದನ್ನು ಕೇಳುತ್ತಿರುವಾಗ ಸದ್ಗುರುಗಳು ಅದರ ಅರ್ಥವನ್ನು ಅರುಹಲು ನನ್ನನ್ನು ಆಜ್ಞಾಪಿಸಿದರು. ಆಗ ನಾನೆಂದೆ: "ಈ ಪದದಲ್ಲಿಯ 'ಗರುಡ' ಮತ್ತು 'ಉರಗ' ಎರಡು ಶಬ್ದಗಳನ್ನುಳಿದು ನನಗೆ ಏನೂ ಅರ್ಥವಾಗಲಿಲ್ಲ." ಅದಕ್ಕೆ ಅವರೆಂದರು: "ಇಂಥ ಅಲ್ಪತಿಳುವಳಿಕೆಯಿಂದ ನೀವು ತೃಪ್ತರಾಗಕೂಡದು. ನೀವು ಕನ್ನಡವನ್ನು ಚೆನ್ನಾಗಿ ಕಲಿಯಬೇಕು." ಅದೇ ಸಮಯಕ್ಕೆ ಲಿಪ್ಯಂತರದ ಹಾಗೂ ಭಾಷಾಂತರದ ಮುಖಾಂತರ ಅರ್ಥವನ್ನರಿಯುವದು, ಬೇರೆ ಭಾಷೆಯನ್ನು ಕಲಿಯುವ ಒಂದು ಉತ್ತಮ ಪದ್ಧತಿಯೆಂದು ನನ್ನ ಕೆಲ ಸ್ನೇಹಿತರು ನನಗೆ ಅರುಹಿದರು. ಇದನ್ನು ಕುರಿತು ನನ್ನ ವಿದ್ಯಾ-ಗುರುಗಳಾದ ಡೆಕ್ಕನ ಕಾಲೇಜಿನ ಪ್ರಿ. ಬೇನರವರು ಈ ರೀತಿ ಹೇಳುತ್ತಿದ್ದರು: "ಪರಕೀಯ ಭಾಷೆಯನ್ನು ಸಹಜ ಹಾಗೂ ಸುಲಭವಾಗಿ ಕಲಿಯಬೇಕಾದರೆ ಅದರಲ್ಲಿಯ ಒಂದು ಸುಲಭ ಹಾಗೂ ಪ್ರಮಾಣಭೂತವಾದ ಗ್ರಂಥವನ್ನು ತೆಗೆದುಕೊಳ್ಳಬೇಕು. ಭಾಷಾಂತರದ ಮುಖಾಂತರವಾಗಿ ಅದರ ಎಲ್ಲ ಅಂಶಗಳನ್ನು ಚೆನ್ನಾಗಿ ಅರಿತುಕೊಳ್ಳಬೇಕು. ಈ ರೀತಿ ಜರ್ಮನ್, ಫ್ರೆಂಚ್, ಲ್ಯಾಟಿನ್ ಹಾಗೂ ಗ್ರೀಕ ಭಾಷೆಗಳನ್ನೂ ಬಾಯಬಲವೊಂದನ್ನೆ, ಆಯಾ ಭಾಷೆಗಳಲ್ಲಿಯ ಅದರ ಭಾಷಾಂತರಗಳೊಡನೆ ಲಕ್ಷ್ಯಪೂರ್ವಕವಾಗಿ ಓದಿ ಕಲಿಯಬಹುದು." ನಾನು ಇಲ್ಲಿಯೂ ಅದೇ ಪದ್ಧತಿಯನ್ನು ಅನುಸರಿಸಿದೆ. ಶ್ರೀ ಬಾಬಾಚಾರ್ಯ ಕಾವ್ಯ ಎಂಬವರು ೧೯೦೮ರಲ್ಲಿ **'ಮಹಾರಾಜರವರ ವಚನ'** ಎಂಬ ಗ್ರಂಥವನ್ನು ವಿಜಾಪುರದಲ್ಲಿ ಪ್ರಸಿದ್ಧಿಸಿದರು. ಅದು ನಿಂಬರಗಿ ಮಹಾರಾಜರವರ ವಚನವನ್ನು ಒಳಗೊಂಡಿತ್ತು ವೀರಶೈವರಾದ ಅವರ ಬೋಧೆಯು, ಬ್ರಾಹ್ಮಣರಾದ ನನ್ನ ಸದ್ಗುರುಗಳ ಮುಖಾಂತರ ಪರಂಪರಾಗತವಾಗಿ ನಮಗೆ ಲಭಿಸಿತ್ತು. ಆ ಗ್ರಂಥವು ದೇವನಾಗರೀ ಲಿಪಿಯಲ್ಲಿ ಮುದ್ರಿತವಾಗಿತ್ತು. ಆದುದರಿಂದ ನನಗದು ತುಂಬ ಉಪಯುಕ್ತವಾಯಿತು."

ಈ ಬಗೆಯಾಗಿ ಶ್ರೀ ಗುರುದೇವರು ಕನ್ನಡವನ್ನು ಕಲಿಯಲು ಪ್ರಾರಂಭಿಸಿ, ಅದನ್ನು ಚೆನ್ನಾಗಿ ಆರಗಿಸಿಕೊಳ್ಳಲು ಯತ್ನಿಸಿ, ಅದರಲ್ಲಿ ಹುದುಗಿಕೊಂಡಿರುವ ಅನುಭಾವ ಜ್ಞಾನಭಂಡಾರದ ಸಂಪೂರ್ಣ ಲಾಭವನ್ನು ಪಡೆದರು.

'ಬೋಧಸುಧೆ'ಯೆಂಬುದು ಶ್ರೀ ಗುರುದೇವರ ಕನ್ನಡದಲ್ಲಿಯ ಮೊದಲನೆಯ 'ಹಿರಿಯ-ಕಿರಿಯ-ಗ್ರಂಥ'. ಗಾತ್ರ ಕಿರಿದು, ವಿಷಯ ಹಿರಿದು. ಅದರ

ರಚನಾಕ್ರಮವನ್ನು ರೂಪಿಸಿ, ಅದನ್ನವರು ತಮ್ಮ ಸ್ನೇಹಿತರಿಂದ ಬರೆಯಿಸಿದರು. ಅದರಲ್ಲಿ ಅವರ ಪರಾತ್ಪರ ಸದ್ಗುರುಗಳಾದ ಶ್ರೀ ನಿಂಬರಗಿ ಮಹಾರಾಜರವರ ನೈತಿಕ ಹಾಗೂ ಪಾರಮಾರ್ಥಿಕ ಬೋಧೆಯು ನೆಲೆಸಿರುವದು. -ಶ್ರೀ ಗುರುದೇವರು ಈ ಸಂತವರರನ್ನು ಆಧುನಿಕ ಕನ್ನಡನಾಡಿನ ಶ್ರೇಷ್ಠತಮ ಸಂತರೆಂತಲೂ, ಆಧುನಿಕ ಭಾರತದ ಶ್ರೇಷ್ಠತಮ ಸಂತರಲ್ಲಿ ಓರ್ವರೆಂತಲೂ ಭಾವಿಸಿದ್ದರು. ಅವರನ್ನು ಕುರಿತು ತಮ್ಮ ಉಪನ್ಯಾಸವೊಂದರಲ್ಲಿ, ಶ್ರೀ ಗುರುದೇವರು ಈ ರೀತಿ ಹೇಳಿದರು: "ಎರಡು ವರುಷಗಳ ಪೂರ್ವದಲ್ಲಿ ಲಚ್ಯಾಣ ಗ್ರಾಮದಲ್ಲಿ ಪಾರಮಾರ್ಥಿಕ ಪರಿಷತ್ತು ಸೇರಿದಾಗ, ಅದಕ್ಕೆ ನಾನು ಮುಂದಿನ ಸಂದೇಶವನ್ನು ಕಳುಹಿಸಿದೆ: "ಶ್ರೀ ನಿಂಬರಗಿ ಮಹಾರಾಜರ ಸಂಪ್ರದಾಯವೇ ಕರ್ನಾಟಕದಲ್ಲಿಯ ಧರ್ಮಪಂಥಗಳಲ್ಲಿ ಏಕತೆಯನ್ನು ನಿರ್ಮಿಸಬಲ್ಲ ತಳಹದಿ." ಅವರು ಹಿರಿಯ ವೀರಶೈವರು; ಹಾಗೂ ಅವರ ಶಿಷ್ಯರು ಹಿರಿಯ ಬ್ರಾಹ್ಮಣರು. ಅವರಿಬ್ಬರು ಕೂಡಿ ಪಾರಮಾರ್ಥಿಕ ಜೀವನಕ್ಕೆಯೆ ಹಿರಿಯ ಭೂಷಣಪ್ರಾಯರು. ನನ್ನ ಸ್ವಂತ ಪಾರಮಾರ್ಥಿಕ ಅನುಭವದಿಂದಷ್ಟೇ ಅಲ್ಲದೆ, ಮಹಾರಾಷ್ಟ್ರ, ಕರ್ನಾಟಕ ಹಾಗೂ ಪ್ರಪಂಚದಲ್ಲಿಯ ಬೇರೆ ಧರ್ಮಸಂಪ್ರದಾಯಗಳೊಡನೆ ಅವರ ಬರಹ-ಬೋಧನೆಗಳನ್ನು ಸರಿಹೋಲಿಸಿ, ನಾನಿದನ್ನು ತಮಗೆ ಅರುಹಬಲ್ಲೆ. ಮೇಲ್ಕಾಣಿಸಿದ ಸಂದೇಶದಲ್ಲಿ ನಾನು ಮತ್ತೂ ಹೇಳಿದ್ದೇನೆಂದರೆ: "ನಿಂಬರಗಿ ಗ್ರಾಮವು ವಿಜಾಪೂರ ಜಿಲ್ಹೆಯಲ್ಲಿ, ಒಂದು ತೀರ ದೂರದ ಮೂಲೆಯಲ್ಲಿದ್ದರೂ ಮತ್ತು ಶ್ರೀ ನಿಂಬರಗಿ ಮಹಾರಾಜರವರು ತೀರ ಅಪ್ರಸಿದ್ಧರಿದ್ದರೂ, ಅವರು ಉದ್ಯಾನದ ಮೂಲೆಯೊಂದರಲ್ಲಿ ನೆಡಲಾದ ಬಕುಲ ವೃಕ್ಷದಂತಿರುವರು. ಅದರ ಹೂಗಳ ಪಾರ್ಥಿವ ಪರಿಮಳವು ಇಡಿ ಉದ್ಯಾನವನ್ನು ತುಂಬಿಬಿಡುವಂತೆ, ಇವರ ಪಾರಮಾರ್ಥಿಕ ಪರಿಮಳವು ಇಡಿ ಕರ್ನಾಟಕದಲ್ಲಿ ಪಸರಿಸದಿರದು. ಪ್ರತಿಯೊಂದು ವಿಷಯದ ಬೆಲೆಯು ಅದರಲ್ಲಿಯ ಸತ್ಯತ್ವ ಹಾಗೂ ಅದರ ಸತ್ಪರಿಣಾಮ ಇವನ್ನವಲಂಬಿಸಿರುವದು. ಆದುದರಿಂದ ನಮ್ಮಲ್ಲಿಯ ಪ್ರತಿಯೊಬ್ಬರು ಚೆನ್ನಾಗಿ ಬಾಳುವದನ್ನು—ಕರ್ತವ್ಯತತ್ಪರವಾಗಿ ಬಾಳುವದನ್ನು—ಭಕ್ತಿಯುತರಾಗಿ ಬಾಳುವದನ್ನು—ನಿರ್ಣಯಿಸಿದರೆ, ನಮ್ಮ ಕೃತಿಗಳ ಹಿರಿಮೆಯೂ ನಮ್ಮ ಸದ್ಗುರುಗಳ ಹಿರಿಮೆಯು ಕುರುಹಾಗಬಲ್ಲದು. ಈ ದೃಷ್ಟಿಯಿಂದ ನಾನು ಶ್ರೀ ನಿಂಬರಗಿ ಮಹಾರಾಜರವರ ಸಂದೇಶವನ್ನು ಕಾಣಲಿರುವೆ."

'ಈ ಬೋಧಸುಧೆ'ಯ ತರುವಾಯ 'ಕನ್ನಡ ಸಂತರ ಪರಮಾರ್ಥ-ಪಥ' ಎಂಬ ಉದ್ಗ್ರಂಥದ ಸಿದ್ಧತೆಯು ನಡೆಯಿತು. 'ಪಾರಮಾರ್ಥಿಕ ಪ್ರಪಂಚದ ನಾಗರಿಕರಾದ' ಶ್ರೀ ಗುರುದೇವರು ಕನ್ನಡ ಅನುಭಾವ ಪದಗಳ ವಿಶಾಲ ಸಾಗರದಲ್ಲಿ, ತಮ್ಮ ಆಯ್ಕೆಯ ಜಾಳಿಗೆಯನ್ನು ಆಳವಾಗಿ ಎಸೆದು, ಕೆಲ ಅತ್ಯುತ್ತಮ ಪದಗಳನ್ನೂ ವಚನಗಳನ್ನೂ ಆರಿಸಿದರು. ಅವರ ಆಯ್ಕೆಯು ವಿಶಿಷ್ಟವಾದ

ಮತ-ಪಂಥಗಳಿಗೆ ಸೀಮಿತವಾಗಿರಲಿಲ್ಲ. ಎಲ್ಲ ಸಂತರು—ಅವರು ವೈಷ್ಣವರೇ ಇರಲಿ, ಶೈವರೇ ಇರಲಿ, ಇಲ್ಲವೆ ವೀರಶೈವರೇ ಇರಲಿ—ಶ್ರೀ ಗುರುದೇವರಿಂದ ಸಮಾನಾದ ಗೌರವವನ್ನು ಪಡೆದರು. ಅವರು ಓರ್ವ ಮಹಮ್ಮದೀಯ ಸಂತರ ಪದಗಳನ್ನೂ ಆಯ್ದರು. ಮೇಲಾಗಿ ಅವರು ಸುಪ್ರಸಿದ್ಧ ಸಂತರ ಪದಗಳನ್ನಷ್ಟೇ ಆರಿಸಲಿಲ್ಲ. ಹಲ ಅಪ್ರಸಿದ್ಧ ಸಂತರ ಪದಗಳನ್ನು ಕೂಡ ಸ್ವೀಕರಿಸಿದರು–ಸತ್ಕರಿಸಿದರು. ಅವನ್ನು ಸುಪ್ರಸಿದ್ಧ ಸಂತರ ಪದಗಳಂತೆಯೇ ಗೌರವಿಸಿದರು. ಈ ಬಗೆಯಾಗಿ ಅವರು ಆಯ್ದ ಪದಗಳ ಶೈಲಿಯಲ್ಲಿಯೂ ತುಂಬ ವಿವಿಧತೆಯು ಕಂಗೊಳಿಸುವದು. ಅವುಗಳಲ್ಲಿ ಸುಸಂಸ್ಕೃತರಾದ ಪಂಡಿತರ ಅಭಿಜಾತ–ಸಂಸ್ಕೃತಪ್ರಚುರ ಶೈಲಿಯಂತೆ ತೀರ ನಿರಕ್ಷರ ಹಳ್ಳಿಗರ ಉರುಟು ಮಾತಿನ ಶೈಲಿಯೂ ಕಾಣ ಬರುವದು. ಕನ್ನಡ ಅನುಭಾವದ ಹೂದೋಟದಿಂದ ಇಂಥ ವಿವಿಧ ಹೂವುಗಳನ್ನು ಈ ಅನುಭಾವಿ–ಮಾಲಾಕಾರನು ಆಯ್ದಿರುವನು. ಅವನ್ನು ನಾನು ಆಯ್ದುದು ಮುಖ್ಯವಾಗಿ "ಸ್ವಾಂತಃ ಸುಖಾಯ"—"ನನ್ನ ಪಾರಮಾರ್ಥಿಕ ಬೆಳವಣಿಗೆಗಾಗಿ, ಆನಂದಕ್ಕಾಗಿ." ಆದರೆ ಆದರಿಂದ ಅವು ಅನ್ಯರ ಪಾರಮಾರ್ಥಿಕ ಸಾಧನದ ಪೂರ್ಣತೆಗೆ ನೆರವಾದರೆ ನನಗೂ ಅದರಿಂದ ಆನಂದವಾಗದಿರದು" ಎಂದು ಶ್ರೀ ಗುರುದೇವರು ಉಸುರಿರುವರು.

ಈ ಅನುಭಾವ ಪದಗಳನ್ನು ಆರಿಸುವ ಶ್ರೀ ಗುರುದೇವರ ಪದ್ಧತಿಯು ಕೂಡ ತುಂಬ ಅಸಾಧಾರಣವಾದುದು. ಅವರದನ್ನು ತಮ್ಮ 'ಹಿಂದಿ ಪರಮಾರ್ಥ ಸೋಪಾನ'ದ ಮುನ್ನುಡಿಯಲ್ಲಿ ಈ ರೀತಿ ಅರುಹಿರುವರು (ಪು. ೩): "ಈ (ಹಿಂದಿ) ಪದಗಳ ವಿಶಾಲ ಭಾಂಡಾರದೊಳಗಿಂದ ಅವುಗಳ ಆಯ್ಕೆಯನ್ನು ಮಾಡುವದು ಅಷ್ಟೊಂದು ಸುಲಭಸಾಧ್ಯವಿರಲಿಲ್ಲ. ವೈಚಾರಿಕ ನಾವೀನ್ಯ ಹಾಗು ಪಾರಮಾರ್ಥಿಕ ಪ್ರಾಧಾನ್ಯ—ಇವು ನಮ್ಮ ಆಯ್ಕೆಯ ಮುಖ್ಯ ನಿಕಷಗಳು. ನಾವು ಈ ಪದಗಳನ್ನು ಸಾಹಿತ್ಯಗ್ರಂಥಗಳಿಂದ ಆರಿಸಲು ಯತ್ನಿಸಲಿಲ್ಲ. ಸ್ನೇಹಿತರೊಡನೆ ಹಾಗೂ ವಿದ್ಯಾರ್ಥಿಗಳೊಡನೆ ಓದುವ, ಇಲ್ಲವೆ ಚರ್ಚಿಸುವ ಕಾಲಕ್ಕೆ ಅವು ತಾವಾಗಿಯೇ ನಮ್ಮೆದುರು ಬಂದಾಗ, ನಾವವನ್ನು ಸ್ವೀಕರಿಸಿರುವೆವು."

ಕನ್ನಡ ಪದಗಳನ್ನು ಶ್ರೀ ಗುರುದೇವರು ಇದೇ ಬಗೆಯಾಗಿ ಆಯ್ದಿರುವರು. ಶ್ರೀ ಗುರುದೇವರ ಸಂಪ್ರದಾಯವು ಕನ್ನಡ ಸಂತರದಿರುವ ಮೂಲಕ, ಅದರಲ್ಲಿ ಕನ್ನಡ ಪದಗಳು ತುಂಬ ಬಳಕೆಯಲ್ಲಿದ್ದವು. ಅವನ್ನಿವರು ಸಹಜವಾಗಿ ಪಡೆದರು. ಎರಡನೆಯದಾಗಿ ಕನ್ನಡ ನಾಡು ಸಾಧುಸಂತರ ನೆಲೆವೀಡಾದ ಮೂಲಕ ಇಲ್ಲಿ ಇಂಥ ಪದಗಳು ಹೇರಳವಾಗಿ ಪ್ರಚಲಿತವಿರುವವು. ಹಳ್ಳಿ ಹಳ್ಳಿಗಳಲ್ಲಿ ವಾಸಿಸಿರುವ ಅನೇಕ ಸಂತರು ತಮ್ಮ ಪಾರಮಾರ್ಥಿಕ ಆರ್ತತೆಯನ್ನೂ ಅನುಭಾವವನ್ನೂ ಇಂಥ ಅಂದವಾದ ಪದರತ್ನಗಳಲ್ಲಿ ಅರುಹಿ, ಅವನ್ನು ನಮ್ಮ ನಾಡಿನ ಮೂಲೆಮೂಲೆಗಳಲ್ಲಿ ಹರುಹಿರುವರು. ಅಂಥ ಪದಗಳು ಅನೇಕ

ಶತಮಾನಗಳಿಂದ ಸಾಧಕರನೇಕರ ನಾಲಗೆಯ ಮೇಲೆ ನಲಿದಾಡುತ್ತಿರುವವು. ಅವರ ಜೀವನವನ್ನು ಚೆನ್ನಾಗಿ ರೂಪಿಸಿರುವವು. ನಿಂಬಾಳಕ್ಕೆ ಆಗಾಗ ಬರುವ ಅತಿಥಿಗಳೂ ಸಾಧಕರೂ ಶ್ರೀ ಗುರುದೇವರೆದುರು ಇಂಥ ಪದಗಳನ್ನು ಹೇಳುತ್ತಿದ್ದರು. ಈ ರೀತಿ ಹಲ ಅತ್ಯುತ್ತಮ ಪದಗಳು ಅರಸದಲೇ ಅವರೆಡೆ ಬರುತ್ತಿದ್ದವು. ಅವರಿಂದ ಆಯ್ಕೆಗೊಂಡು ಅವರ ಸಂಗ್ರಹದಲ್ಲಿ ಸೇರುತ್ತಿದ್ದವು.

ಈ ಪದಗಳ ಆಯ್ಕೆಯಂತೆ ಅವನ್ನು ಅಭ್ಯಸಿಸುವ ಹಾಗೂ ಅವುಗಳ ರಹಸ್ಯವನ್ನು ಅರಿಯುವ ಶ್ರೀ ಗುರುದೇವರ ಪದ್ಧತಿಯು ತುಂಬ ಅಪೂರ್ವವಾದುದು; ವಿಲಕ್ಷಣವಾದುದು. ಅವರ ಅಭ್ಯಾಸವು ಆಳವಾದುದು, ಸಾರಗ್ರಾಹಿಯಾದುದು; ಅಮೂಲಾಗ್ರವಾದುದು. ಅವರು ಮೊದಲು ಪದಗಳನ್ನು ಕೇಳುತ್ತಿದ್ದರು. ತರುವಾಯ ಅವುಗಳ ಅರ್ಥವನ್ನು ಹೇಳಿಸಿಕೊಳ್ಳುತ್ತಿದ್ದರು. ಆಮೇಲೆ ಅವನ್ನು ಎರಡನೆಯ ಸಲ ಹಾಡಲು ಹೇಳುತ್ತಿದ್ದರು. ಆಗ ಅವು ಅವರಿಗೆ ಸೇರಿದರೆ ತಮ್ಮ ಶಿಷ್ಯರೊಬ್ಬರಿಗೆ ಅವನ್ನು ದೇವನಾಗರೀ ಲಿಪಿಯಲ್ಲಿ ಬರೆದುಕೊಂಡು ತಮ್ಮ ಸಂಗ್ರಹದಲ್ಲಿ ಸೇರಿಸಲು ತಿಳಿಸುತ್ತಿದ್ದರು. ಇದು ಅವರ ಮೊದಲನೆಯ ಆಯ್ಕೆ. ಈ ಮೇರೆಗೆ ಆರಿಸಲಾದ ಪದಗಳನ್ನು ಅವರು ಆಗಾಗ ತಮ್ಮ ಧ್ಯಾನದ ಸಮಯದಲ್ಲಿ ಕೂಡ ಹೇಳಿಸಿಕೊಳ್ಳುತ್ತಿದ್ದರು. ಈ ಬಗೆಯಾಗಿ ಅವರ ಅಧ್ಯಯನವು—ಶ್ರವಣ ಮನನವು ಎಷ್ಟೋ ವರುಷ ನಡೆಯುತ್ತಿದ್ದಿತು. ಅದರ ಫಲವಾಗಿ ಅವರು ಆಯಾ ಪದಗಳ ತಿರುಳಿನೊಡನೆ ಸಮರಸರಾಗುತ್ತಿದ್ದರು. ಶ್ರೀ ಗುರುದೇವರ ಪಾರಮಾರ್ಥಿಕ ಅನುಭವಗಳು ಕೂಡ ವಿಲಕ್ಷಣವಾಗಿದ್ದವು. ಅವು ಅನಂತವಿರುವವು ಎಂದು ಅವರೇ ಹೇಳಿರುವರು. ತಮ್ಮ "ಭಗವದ್ಗೀತೆಯ ಸಾಕ್ಷಾತ್ಕಾರದರ್ಶನ" ಎಂಬ ಉದ್ಗ್ರಂಥದಲ್ಲಿ ಅವರು ಇದನ್ನು ಕುರಿತು ಹೇಳಿರುವದೇನೆಂದರೆ : "ಸಾಕ್ಷಾತ್ಕಾರಕ್ಕೆ ಕೊನೆಯಿಲ್ಲ, ಪೂರ್ಣತೆಯಿಲ್ಲ. ನಾವು ಪರತತ್ತ್ವವನ್ನು ಸಮೀಪಿಸುತ್ತ ಸಾಗುವೆವು ಆದರೆ ಅದನ್ನು ಸಾಕ್ಷಾತ್ತಾಗಿ ಎಂದೂ ಸೇರುವದಿಲ್ಲ." ಶ್ರೀ ಗುರುದೇವರ ಪಾರಮಾರ್ಥಿಕ ಅನುಭವಗಳ ಎತ್ತರವು ಅಲೌಕಿಕವಿದ್ದ ಮೂಲಕ ಅವರೆಡೆ ತಾವಾಗಿಯೇ ಬಂದ ಎಲ್ಲ ಪದಗಳ ರಹಸ್ಯವನ್ನು ಅವರು ಪೂರ್ತಿಯಾಗಿ ಅರಿಯಬಲ್ಲವರಾಗಿದ್ದರು. ಆದುದರಿಂದ ಕನ್ನಡ ಪಂಡಿತರೂ ಅರಿಯಲರಿಯದ ಪದಗಳನ್ನು ಕೂಡ ಅವರು ತಿಳಿಯಾಗಿ ವಿವರಿಸುತ್ತಿದ್ದರು. ಪರಮಾತ್ಮನ ಬೆಳಕಿನಿಂದ ಹೊಳೆಯುವ ಅವರ ಪ್ರಜ್ಞೆಯು ಈ ಪದಗಳ ಅಜ್ಞಾತ ಸ್ಥಲಗಳ ಮೇಲೆಯೂ ವಿಪುಲವಾದ ಹೊಸ ಬೆಳಕನ್ನು ಬೀರಿ, ಆಯಾ ಅನುಭಾವಿಗಳ ಭಾವ–ಅನುಭಾವಗಳನ್ನು ಅವರು ತಿಳಿಯಾಗಿ ವಿಶದಗೊಳಿಸುತ್ತಿದ್ದರು; ಆಧುನಿಕ ವಿಜ್ಞಾನಪ್ರಿಯ ಜನರು ಒಪ್ಪುವಂತೆ ಅವನ್ನು ಯುಕ್ತಿಯುಕ್ತವಾಗಿ ವಿವರಿಸುತ್ತಿದ್ದರು. ಈ ರೀತಿ ನಮ್ಮ ಹಿಂದಿನ ಹಿರಿಯ ಅನುಭಾವಿಗಳ ಪಾರಮಾರ್ಥಿಕ ಸಂದೇಶವನ್ನು ಇಂದಿನ ಪ್ರಪಂಚದಲ್ಲಿ

*

ಬೀರಲು, ಆವರಿಗೆ ಆಧುನಿಕ ಅನುಭಾವಿ ದಾರ್ಶನಿಕರೋರ್ವರು ಲಭಿಸಿದರೆನ್ನಲು ಅಡ್ಡಿಯಿಲ್ಲ.

ಧರ್ಮಪರಮಾರ್ಥಗಳನ್ನು ಕಾಣುವ ಶ್ರೀ ಗುರುದೇವರ ದೃಷ್ಟಿಯು ಈ ಬಗೆಯದಿತ್ತು. "ದರ್ಶನದ ಅಧ್ಯಯನದಲ್ಲಿ ನಲವತ್ತು ವರುಷ ಕಳೆದವನಾದ ನಾನು ಧರ್ಮ–ಧರ್ಮಗಳಲ್ಲಾಗಲಿ ಧರ್ಮದ ವಿವಿಧ ಶಾಖೆಗಳಲ್ಲಾಗಲಿ ಯಾವ ಬಗೆಯ ಭಿನ್ನತೆಯೂ ಇರುವದಿಲ್ಲ ಎಂಬುದನ್ನು ಚೆನ್ನಾಗಿ ಬಲ್ಲೆ. ಆದರೆ ಅವು ಭಗವಂತನನ್ನು ಮಾತ್ರ ಭಜಿಸಬೇಕು." "ಈ ಎಲ್ಲಾ ಧರ್ಮಗಳ ಅಂತರಂಗವನ್ನು ಸೇರಿ, ಅವುಗಳ ಸಮಾನ ಅಂಶವನ್ನು ಕಂಡುಹಿಡಿಯುವದು, ದಾರ್ಶನಿಕನ ಕರ್ತವ್ಯ.." "ದಾರ್ಶನಿಕನು ಪಾರಮಾರ್ಥಿಕ ಅನುಭವವನ್ನು ವಿವರಿಸುವಾಗ, ಅವನು ಹಿಂದು, ಮುಸ್ಲಿಮ ಇಲ್ಲವೇ ಕ್ರಿಶ್ಚಿಯನ್ ಯಾವ ಧರ್ಮದವನೂ ಇರುವದಿಲ್ಲ. ಅವನು ಪ್ರಪಂಚದ ನಾಗರಿಕನು, ವಿಶೇಷವಾಗಿ ಪಾರಮಾರ್ಥಿಕ ಪ್ರಪಂಚದ ನಾಗರಿಕನಿರುವನು."

ಈ ಗ್ರಂಥದ ಸಿದ್ಧತೆಯು ನಡೆದಾಗ ಶ್ರೀ ಗುರುದೇವರು ಕರ್ನಾಟಕ ವಿಶ್ವವಿದ್ಯಾಲಯದ ಆಶ್ರಯದಲ್ಲಿ ಕನ್ನಡ ಸಂತರ ಅನುಭಾವವನ್ನು ಕುರಿತು ಎರಡು ಉಪನ್ಯಾಸಗಳನ್ನು ಕೊಟ್ಟರು. ಮೊದಲನೆಯದು ಕ್ರಿ.ಶ. ೧೯೫೦ ಆಗಸ್ಟ್ ೨೬ನೆಯ ದಿನ ಧಾರವಾಡದಲ್ಲಿಯೂ, ಎರಡನೆಯದು ಕ್ರಿ.ಶ. ೧೯೫೧ ನವ್ಹಂಬರ ೨೫ನೆಯ ದಿನ ಬೆಳಗಾವಿಯಲ್ಲಿಯೂ ಕೊಡಲಾಯಿತು. ಮೊದಲನೆಯ ಉಪನ್ಯಾಸದ ವಿಷಯವು "ಕನ್ನಡಿಗರ ಅನುಭಾವದ ಪೀಠಿಕೆ" ಎಂಬುದಾಗಿಯೂ—ಎರಡನೆಯದರ ವಿಷಯವು "ಕನ್ನಡಿಗರ ಅನುಭಾವದ ಸಾರ ಸಂಗ್ರಹ" ಎಂಬುದಾಗಿಯೂ ಇದ್ದಿತು. ಎರಡೂ ಉಪನ್ಯಾಸಗಳು ಜನತೆಯ ಮನ್ನಣೆಯನ್ನು ಪಡೆದವು. ಅದನ್ನು ಕಂಡ, ಕರ್ನಾಟಕ ವಿಶ್ವವಿದ್ಯಾಲಯದ ಉಪಕುಲಗುರುಗಳು ಈ ವಿಷಯವನ್ನು ಕುರಿತು ಒಂದು ಉಪನ್ಯಾಸಮಾಲೆಯನ್ನೇ ಕ್ರಮಶಃ ರಚಿಸಲು ಶ್ರೀ ಗುರುದೇವರನ್ನು ಆಮಂತ್ರಿಸಿದರು. ಆದೇ ಮೇರೆಗೆ ಆ ಉಪನ್ಯಾಸಗಳನ್ನು ಏರ್ಪಡಿಸಲೂ ಅವನ್ನು ಗ್ರಂಥರೂಪದಲ್ಲಿ ಪ್ರಸಿದ್ಧಿಸಲೂ ವಿಶ್ವವಿದ್ಯಾಲಯದವರು ಒಪ್ಪಿಕೊಂಡರು. ಆ ಮೇರೆಗೆ ಶ್ರೀ ಗುರುದೇವರು ಒಟ್ಟಾರೆ ೨೦ ಉಪನ್ಯಾಸಗಳನ್ನು ಕೊಡುವದು ಗೊತ್ತಾಯಿತು. ಆದರೆ ಶ್ರೀ ಗುರುದೇವರು ಅವುಗಳಲ್ಲಿ ೧೪ ಉಪನ್ಯಾಸಗಳನ್ನು ಕೊಡುವದು ಸಾಧ್ಯವಾಯಿತು. ಈ ಉಪನ್ಯಾಸಗಳನ್ನು ಅವರ ಸ್ವಂತ ಧ್ವನಿ ಸಂಗ್ರಹದ ಪಟ್ಟಿಯ ಮೇಲೆ (Tape recorder) ಕ್ರಮಶಃ ಬರೆದಿಡಲಾಯಿತು. ಮತ್ತು ತರುವಾಯ ಅವರ ಲಘು ಲೇಖಕನಿಂದ ಅವನ್ನು ಟೈಪ್ ಮಾಡಲಾಯಿತು. ಅವರು ಉಳಿದ ೬ ಉಪನ್ಯಾಸಗಳನ್ನು ೩ ಧಾರವಾಡದಲ್ಲಿಯೂ ೩ ಬೆಂಗಳೂರಿನಲ್ಲಿಯೂ ಕೊಡುವವರಿದ್ದರು. ಆದರೆ ಭಗವಂತನ ಬಯಕೆಯು ಬೇರೆಯಾ-

ಗಿದ್ದಿತು. ಅವರ ಈ ಕಾರ್ಯವು ಪೂರ್ತಿಯಾಗುವ ಪೂರ್ವದಲ್ಲಿಯೇ ಭಗವಂತನು ತನ್ನ ಪ್ರೇಷಿತನನ್ನು ತನ್ನೆಡೆ ಮರಳಿ ಕರೆದೊಯ್ದನು. ಶ್ರೀ ಗುರುದೇವರು ಅಕಸ್ಮಾತ್ತಾಗಿ ಕ್ರಿ.ಶ. ೧೯೫೭ ಜೂನ್ ೬ನೆಯ ದಿನ ಸಮಾಧಿಸ್ಥರಾದರು. ಅದರ ಮೂಲಕ ಅವರು ಉಪನ್ಯಾಸಗಳನ್ನು ಕೊಡುವದು ಸಾಧ್ಯವಾಗಲಿಲ್ಲ. ಕೊನೆಯ ೬ ಉಪನ್ಯಾಸಗಳು ಬಹಳ ಬೆಲೆಯುಳ್ಳ ವಿಷಯಗಳನ್ನು ಒಳಗೊಂಡಿದ್ದುವು. ಅವರ ನಿಧನದಿಂದ ಕರ್ನಾಟಕವು ಇಂಥ ವಿಷಯವನ್ನು ಕುರಿತ ಅವರ ವಿಶದೀಕರಣವನ್ನು ಆರಿಯುವ ಸುಸಂಧಿಗೆ ಎರವಾಯಿತು. ಕನ್ನಡ ಸಂತರ ಹಿರಿಮೆಯು ಜಗತ್ತಿನಲ್ಲೆಲ್ಲ ಹರಡಬೇಕೆಂದು ಉಪನ್ಯಾಸಗಳು ಆಂಗ್ಲ ಭಾಷೆಯಲ್ಲಿ ಕೊಡಲಾದವು. ಗ್ರಂಥವೂ ಆದೇ ಭಾಷೆಯಲ್ಲಿ ರಚಿಸಲ್ಪಟ್ಟಿತು. ಇದು ಈ ಗ್ರಂಥದ ಸಿದ್ಧತೆಯ ಕಿರುಪರಿಚಯ.

ಪ್ರಸ್ತುತ ಗ್ರಂಥವಾದ 'ಪರಮಾರ್ಥ ಸೋಪಾನ'ವು ಮೇಲ್ನಾಣಿಸಿದ ಶ್ರೀ ಗುರುದೇವರ 'ಪರಮಾರ್ಥಪಥ'ದ ಆಧಾರಗ್ರಂಥವು. ಇದರಲ್ಲಿ ಶ್ರೀ ಗುರುದೇವರು ೫೨ ಸಂತ ಕವಿಗಳಿಂದ ಆಯ್ದ ೧೩೯ ಪದ–ವಚನಗಳನ್ನು ೧೯ ಪ್ರಕರಣಗಳಲ್ಲಿ ವಿಂಗಡಿಸಿ ಸಂಗ್ರಹಿಸಲಾಗಿದೆ. ಮೊದಲನೆಯದು ಪೀಠಿಕಾ ಪ್ರಕರಣವು. ಅದರಲ್ಲಿ 'ಪರಮಾರ್ಥಿಕ ಪಥ'ದ 'ದಾರ್ಶನಿಕ' ಪೀಠಿಕೆಯ ಸಾರವನ್ನು ಕೊಡಲಾಗಿದೆ. ಈ ೨೦ ಪ್ರಕರಣಗಳ ಕ್ರಮವು ಮೇಲ್ನಾಣಿಸಿದ ಆಂಗ್ಲ ಗ್ರಂಥದ ಕ್ರಮವನ್ನು ಅನುಸರಿಸುವದು ಪ್ರತಿಯೊಂದು ಪ್ರಕರಣದಲ್ಲಿ ಸುಮಾರು ೭ ರಿಂದ ೯ ಪದಗಳು ಬಂದಿರುವವು. ಪ್ರತಿಯೊಂದು ಪದಕ್ಕೂ—ವಚನಕ್ಕೂ—ಶ್ರೀ ಗುರುದೇವರು ಒಂದು ಆಂಗ್ಲ ಶೀರ್ಷಿಕೆಯನ್ನು ಕೊಟ್ಟಿರುವರು. ಅವುಗಳ ಭಾವಾನುವಾದವನ್ನು ಅವುಗಳ ಮೇಲ್ಭಾಗದಲ್ಲಿ ಮುದ್ರಿಸಲಾಗಿದೆ. ಮೂಲ ಆಂಗ್ಲ ಶೀರ್ಷಿಕೆಗಳನ್ನು ಗ್ರಂಥದ ಅನುಬಂಧವೊಂದಕ್ಕೆ ಕೊಡಲಾಗಿದೆ. ಈ ಪದ-ವಚನಗಳಿಗೆ ಶ್ರೀ ಗುರುದೇವರು ಕೆಲ ಟಿಪ್ಪಣಿಗಳನ್ನು ಆಂಗ್ಲ ಭಾಷೆಯಲ್ಲಿ ಬರೆದಿರುವರು. ಅವನ್ನು ಅನುಬಂಧದ ಮೊದಲು ಸೇರಿಸಲಾಗಿದೆ. ಈ ರೀತಿ ಈ ಪರಮಾರ್ಥ ಸೋಪಾನವು ಆಂಗ್ಲ ಹಾಗೂ ಕನ್ನಡ ಗ್ರಂಥದ ಓದುಗರಿಗೆ ಉಪಯುಕ್ತವಾಗುವಂತೆ ರಚಿಸಲಾಗಿದೆ.

ಇದು ಆಧಾರಗ್ರಂಥವಾದುದರಿಂದ ಇದರ ರಚನಾಕ್ರಮವು ಮೂಲಗ್ರಂಥದ ರಚನಾಕ್ರಮವನ್ನು ಅನುಸರಿಸಿರುವದು ತೀರ ಸಹಜ. ಆದುದರಿಂದ ಆ ಕ್ರಮವನ್ನೂ ಅದರ ತಿರುಳನ್ನೂ ಸಾಧ್ಯವಿದ್ದ ಮೇರೆಗೆ ಶ್ರೀ ಗುರುದೇವರ ಮಾತಿನಲ್ಲಿಯೇ ಅರುಹಿ ವಿವರಿಸುವೆ.

"ಮೊದಲನೆಯ ದಾರ್ಶನಿಕ ಪೀಠಿಕೆಯಲ್ಲಿ ಜ್ಞಾನಶಾಸ್ತ್ರ, ಮನಃಶಾಸ್ತ್ರ ಹಾಗೂ ಪರತತ್ತ್ವಶಾಸ್ತ್ರಗಳ ದೃಷ್ಟಿಯಿಂದ ಅನುಭಾವದ ಲಕ್ಷಣಗಳನ್ನು ಕೊಡಲಾಗಿದೆ ಮತ್ತು ಅವುಗಳ ನೆರವಿನಿಂದ ಪೂರ್ವ ಪಶ್ಚಿಮಗಳ ಹಿರಿಯ ದಾರ್ಶ

ನಿಕರೊಡನೆಯೂ ಅನುಭಾವಿಗಳೊಡನೆಯೂ ಕನ್ನಡ ಅನುಭಾವಿಗಳನ್ನು ಸರಿ ಹೋಲಿಸಲಾಗಿದೆ. ಆಮೇಲೆ ಪಾರಮಾರ್ಥಿಕ ಜೀವನದ ಬಗೆಗೆ ಆಸಕ್ತಿಯನ್ನುಂಟು ಮಾಡುವ ಪ್ರೇರಣೆಗಳನ್ನೂ ವಿವರಿಸಲಾಗಿದೆ. ಪರಮಾತ್ಮನ ಭಕ್ತಿಯಿಂದ ತುಂಬಿದ, ಬಾಳನ್ನು ಪ್ರೀತಿಸಹಜ್ಯವ ಅನೇಕ ಪ್ರೇರಣೆಗಳನ್ನೂ ಅರುಹಲಾಗಿದೆ. ತರುವಾಯ ಬಂದಿರುವದು ನೈತಿಕ ಸಿದ್ಧತೆಯ ವಿಚಾರ. ಪರಮಾತ್ಮನನ್ನು ಪಡೆಯಬಯಸುವ ಸಾಧಕನೂ, ತನ್ನ ಪಾರಮಾರ್ಥಿಕ ಸಾಧನದಲ್ಲಿಯ ಪ್ರಗತಿಗಾಗಿ ನೈತಿಕ ಸಿದ್ಧತೆಯನ್ನು ನಡೆಸಲೇಬೇಕು. ಆಮೇಲೆ ಸದ್ಗುರುಗಳ ಸ್ವರೂಪ ಹಾಗೂ ಶಿಷ್ಯನ ಪಾರಮಾರ್ಥಿಕ ಬೆಳವಣಿಗೆಗಾಗಿ ಅವನು ಮಾಡುವ ಕಾರ್ಯ ಇವನ್ನೂ ವಿವರಿಸಿದೆ. ಇದು ಓದುಗರನ್ನು ಗುರು–ಶಿಷ್ಯರ ಸಂಬಂಧದೆಡೆ ಒಯ್ಯುವದು. ತರುವಾಯ ಸಂತ–ದೇವರ ಸಂಬಂಧ ಹಾಗೂ ದೇವರ ಸ್ವರೂಪ ಈ ವಿಷಯಗಳು ಬಂದಿರುವವು. ದೇವರ ನಾಮದ ವಿಷಯವು ಅವನ್ನು ಹಿಂಬಾಲಿಸುವದು. ಉತ್ತರ ಭಾರತದ ಹಾಗೂ ಮಹಾರಾಷ್ಟ್ರದ ಸಂತರಂತೆ ಕನ್ನಡದ ಸಂತರೂ ದೇವರ ನಾಮಕ್ಕೆ ತುಂಬ ಪ್ರಾಧಾನ್ಯವನ್ನು ನೀಡಿರುವರು. ಆಮೇಲೆ ಧ್ಯಾನಪದ್ಧತಿಯನ್ನೂ ವಿವರಿಸಲಾಗಿದೆ. ಕನ್ನಡ ಸಂತರು ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಳ್ಳಲು ಬಳಸಿದ ಧ್ಯಾನಪದ್ಧತಿಯು ಅಪೂರ್ವವಾದುದು. ಇದಾದ ತರುವಾಯ ಪಾರಮಾರ್ಥಿಕ ಸಾಧನದ ಅಂತಿಮ ಗುರಿಯಾದ ಸಾಕ್ಷಾತ್ಕಾರವು ಚರ್ಚಿಸಲಾಗಿದೆ. ಈ ಸಾಕ್ಷಾತ್ಕಾರವನ್ನು ಸವಿವರವಾಗಿ ಸುಸ್ಪಷ್ಟವಾಗಿ ಬಣ್ಣಿಸುವಲ್ಲಿ ಕನ್ನಡ ಸಂತರು ತುಂಬ ಅನುಪಮರು, ಶ್ರೇಷ್ಠತಮರು. ಈ ಸಂದರ್ಭದಲ್ಲಿ ಸಾಕ್ಷಾತ್ಕಾರದ ಪ್ರಮಾಣಗಳನ್ನೂ ಅದರ ಪ್ರಾರಂಭದ ರೀತಿಯನ್ನೂ ರೂಪ, ತೇಜ, ನಾದ, ಸಮ್ಮಿಶ್ರ ಹಾಗೂ ಶ್ರೇಷ್ಠತಮ ಎಂಬ ಸಾಕ್ಷಾತ್ಕಾರದ ಬೇರೆ ಬೇರೆ ಪ್ರಕಾರಗಳನ್ನು ವಿವರಿಸಲಾಗಿದೆ. ಕೊನೆಗೆ ಪೂರ್ಣತೆಯನ್ನು ಪಡೆದ ಅನುಭಾವಿಯ ಮೇಲೆ ಪರಮಾತ್ಮನ ಸಾಕ್ಷಾತ್ಕಾರದಿಂದ ಉಂಟಾಗುವ ವಿವಿಧ ಪರಿಣಾಮಗಳನ್ನು ಅರುಹಲಾಗಿದೆ". ಇದು ಈ ಗ್ರಂಥದಲ್ಲಿಯ ಪದ-ವಚನಗಳ ಒಳತಿರುಳು. ವಿವರವನ್ನು ಪದಗಳಿಂದಲೇ ಅರಿತುಕೊಳ್ಳಬೇಕು.

ಶ್ರೀ ಗುರುದೇವರ ಅಭಿಮತದ ಮೇರೆಗೆ ಈ ಗ್ರಂಥವನ್ನು ಸಿದ್ಧಪಡಿಸಲು ಹಾಗೂ ಈ ಪ್ರಸ್ತಾವನೆಯನ್ನು ಬರೆಯಲು ಆಜ್ಞಾಪಿಸಿ, ಶ್ರೀ ಗುರುದೇವರಿಗೆ ಸೇವೆಸಲ್ಲಿಸಲು ನನಗೆ ಸುಸಂಧಿಯನ್ನು ಒದಗಿಸಿಕೊಟ್ಟದ್ದಕ್ಕಾಗಿ 'ಸಂಪಾದಕ ಸಮಿತಿ'ಯವರಿಗೂ, ಕರ್ನಾಟಕ ವಿಶ್ವವಿದ್ಯಾಲಯದವರಿಗೂ, ನನ್ನ ಅನಂತ ವಂದನೆಗಳು.

ಶಾಂತಿಕುಂಜ—ವಿಕ್ರಮಪುರ
ಅಥಣಿ
೩೦—೫—೧೯೬೨

ಮ. ಶ್ರೀ. ದೇಶಪಾಂಡೆ

ವಿಷಯಸೂಚಿಕೆ

		ಪುಟ
	ಮುನ್ನುಡಿ	೧
	ಪ್ರಸ್ತಾವನೆ	೩

ಪ್ರಕರಣ

೧.	ಪೀಠಿಕೆ	೧
೨.	ಪರಮಾರ್ಥ-ಪ್ರೇರಣೆಗಳು (ಭಾಗ ೧)	೫
೩.	ಪರಮಾರ್ಥ-ಪ್ರೇರಣೆಗಳು (ಭಾಗ ೨)	೧೦
೪.	ನೈತಿಕ ಸಿದ್ಧತೆ	೧೪
೫.	ಸದ್ಗುರುವಿನ ಸ್ವಭಾವ	೧೮
೬.	ಸದ್ಗುರುವಿನ ಕಾರ್ಯ	೨೩
೭.	ಗುರು-ಶಿಷ್ಯರ ಸಂಬಂಧ (ಭಾಗ ೧)	೨೭
೮.	ಗುರು-ಶಿಷ್ಯರ ಸಂಬಂಧ (ಭಾಗ ೨)	೩೩
೯.	ಸಂತರ ಲಕ್ಷಣಗಳು	೩೯
೧೦.	ದೇವ-ಭಕ್ತರ ಸಂಬಂಧ	೪೫
೧೧.	ಪರಮಾತ್ಮನ ಸ್ವರೂಪ	೫೦
೧೨.	ಪರಮಾತ್ಮನ ನಾಮ (ಭಾಗ ೧)	೫೬
೧೩.	ಪರಮಾತ್ಮನ ನಾಮ (ಭಾಗ ೨)	೬೦
೧೪.	ಧ್ಯಾನಪದ್ಧತಿ	೬೪
೧೫.	ಅನುಭಾವದ ಉಗಮವೂ ಪ್ರಮಾಣಗಳೂ	೭೧
೧೬.	ರೂಪ ತೇಜ ನಾದಾದಿಗಳ ಅನುಭಾವ	೭೭
೧೭.	ಸಮ್ಮಿಲಿತ ಅನುಭಾವ	೮೨
೧೮.	ಪರತರ ಅನುಭಾವ	೮೭
೧೯.	ಸಾಕ್ಷಾತ್ಕಾರದ ಪರಿಣಾಮಗಳು (ಭಾಗ ೧)	೯೨
೨೦.	ಸಾಕ್ಷಾತ್ಕಾರದ ಪರಿಣಾಮಗಳು (ಭಾಗ ೨)	೯೭

ಅನುಬಂಧ

೧.	ಕವಿಗಳ ಕಾಲ-ಗ್ರಂಥಗಳು	೧೦೩
೨.	ಟಿಪ್ಪಣಿಗಳು	೧೦೪
೩.	ಪದಗಳ ಮೂಲ ಆಂಗ್ಲ ಶೀರ್ಷಿಕೆಗಳು	೧೪೧
೪.	ಅಕ್ಷರಾನುಕ್ರಮ	೧೪೮

ಪ್ರಕರಣ ಒಂದು

ಪೀಠಿಕೆ

ಪೀಠಿಕೆಯಲ್ಲಿನ ಮುಖ್ಯಾಂಶಗಳು ಈ ಕೆಳಗಿನಂತಿವೆ ಎನ್ನಬಹುದು :

ಅನುಭಾವವು ಒಂದು ವಿಶಿಷ್ಟವಾದ ಸರ್ವವ್ಯಾಪಕ ಜೀವನಪದ್ಧತಿ. ಅದು ಇಡೀ ಮಾನವಕುಲವನ್ನು ಒಳಸೂತ್ರದಿಂದ ಹೊಂದಿಸಿ ಒಂದೆಡೆ ತರುವದು. ಪ್ರಪಂಚದಲ್ಲಿಯ ಎಲ್ಲ ತತ್ವಜ್ಞಾನಗಳನ್ನು ಒಳಹೊಕ್ಕು ಸೂಕ್ಷ್ಮವಾಗಿ ಪರೀಕ್ಷಿಸಿದರೆ ಅವೆಲ್ಲವುಗಳಲ್ಲಿ ಒಂದೇ ಮಾದರಿಯ ಬೋಧೆಯಿದ್ದುದು ಕಂಡು ಬರುವದು. ಡಾ| ರಾನಡೆಯವರು ಹೇಳುವುದೇನೆಂದರೆ "ಇದನ್ನು ನಾನು ನನ್ನ 'ಮಹಾರಾಷ್ಟ್ರದ ಅನುಭಾವ' ಹಾಗೂ 'ಹಿಂದೀ ಅನುಭಾವ' ಈ ಗ್ರಂಥಗಳಲ್ಲಿ ವಿಶದಮಾಡಿರುವೆನು. ಕನ್ನಡ ಅನುಭಾವಿಗಳಲ್ಲಿಯೂ ನಾವು ಅದನ್ನೇ ಕಾಣಬಹುದು. ಕಳೆದ ನಾಲ್ವತ್ತು ವರುಷಗಳಲ್ಲಿಯ ನನ್ನ ತತ್ವಜ್ಞಾನದ ಅಭ್ಯಾಸದ ಫಲವಾಗಿ, ನಾನು ಕಂಡುಹಿಡಿದ ಅನುಭಾವಶಾಸ್ತ್ರದ ಕೆಲ ಸಾಮಾನ್ಯ ಸಿದ್ಧಾಂತಗಳನ್ನು ನಾನೀಗ ಅರುಹಲಿರುವೆ. ಏಕೆಂದರೆ ಪ್ರಪಂಚದ ಅನುಭಾವಿಗಳಲ್ಲಿ ಕನ್ನಡ ಅನುಭಾವಿಗಳ ಸ್ಥಾನವನ್ನು ಗೊತ್ತುಪಡಿಸಲು ಅದರ ಪರಿಚಯವು ಅವಶ್ಯ.'

ಮೊದಲು ಅನುಭಾವವೆಂದರೇನು ಎಂಬುದನ್ನು ಅರಿತುಕೊಳ್ಳುವಾ. ಅನುಭಾವವು ಅಂತಃಪ್ರಜ್ಞೆಯ ಮೂಲಕ (Intuition) ಬಂದ ಅನುಭವ. ಈ ಅಂತಃಪ್ರಜ್ಞೆಯು ಸದ್ಗುರುಗಳ ಅನುಗ್ರಹದಿಂದ ಪಾರಮಾರ್ಥಿಕ ಸಾಧನದಿಂದ ನಮ್ಮಂತರಂಗದಲ್ಲಿ ಜನಿಸುವ ಶಕ್ತಿವಿಶೇಷ. ಅದು ಬುದ್ಧಿಯನ್ನೂ, ಭಾವನೆಯನ್ನೂ, ಕಲ್ಪನಾಶಕ್ತಿಯನ್ನೂ ಮೀರಿರುವದು. ಆದುದರಿಂದ ಅಂತಃಪ್ರಜ್ಞೆಯ ಮೂಲಕ ನಮಗೆ ಲಭಿಸಿದ ಪಾರಮಾರ್ಥಿಕ ಅನುಭವಗಳು ಅತೀಂದ್ರಿಯವಾದವುಗಳು. ಏಕೆಂದರೆ ಅವನ್ನು ಕುರಿತು ಅನುಭಾವಿಗಳು, 'ಕುರುಡನು ಕಂಡ, ಕಿವುಡನು ಕೇಳಿದ. ಕುಂಟನು ಹಿಂಬಾಲಿಸಿದ ಅನುಭವ' ಎಂದು ಬಣ್ಣಿಸಿರುವರು. ಆದ್ದರಿಂದ ಈ ಅನುಭಾವವು ಪರಮಾರ್ಥಸಾಧನೆಯಿಂದ ಅನುಗ್ರಹಜನ್ಯ, ಪ್ರಜ್ಞಾಜಾಗ್ರತಿಯಿಂದ ದೊರೆತ ಸತ್ಯವಸ್ತುವಿನ ಅತೀಂದ್ರಿಯ ಅನುಭವವೇ ಸರಿ!

ಅನುಭಾವದ ಬೇರೆ ಕೆಲ ಲಕ್ಷಣಗಳನ್ನು ಅರುಹಬಹುದು. ಅವುಗಳಲ್ಲಿ ಸಾತತ್ಯವು (Continuity) ಒಂದು. ಈ ಸಾತತ್ಯವು ನಿತ್ಯಪ್ರಗತಿಯಿಂದ ಬೆಳವಣಿಗೆಯಿಂದ ಕೂಡಿರಬೇಕು. ನಮ್ಮ ಅನುಭಾವವು ಕ್ಷಣಕ್ಷಣಕ್ಕೆ, ದಿನ

ದಿನಕ್ಕೆ ವರುಷವರುಷಕ್ಕೆ ಬೆಳೆಯುತ್ತಿರಬೇಕು; ಮತ್ತು ಆದರ ಫಲವಾಗಿ ಸಾಧಕನು ಬರಬರುತ್ತ ಪರಮಾತ್ಮನನ್ನು ಸಮೀಪಿಸುತ್ತಿರಬೇಕು. ಕೊನೆಗೆ ಅವನು ಪರಮಾತ್ಮನಲ್ಲಿ ಬೆರೆಯುವನೋ ಇಲ್ಲವೋ, ನಮಗೆ ಹೇಳಲು ಬರುವಂತಿಲ್ಲ! ಏಕೆಂದರೆ ಸಂತಶ್ರೇಷ್ಠರಾದ ಜ್ಞಾನೇಶ್ವರರು ಉಸುರುವ ಮೇರೆಗೆ, 'ಭಕ್ತ-ಭಗವಂತರಲ್ಲಿ ಕೆಲವೊಂದು ಭೇದವು ಕೊನೆಯ ವರೆಗೂ ಉಳಿದೇ ತೀರುವದು.' ಸಾರ್ವತ್ರಿಕತೆಯು (Universality) ಅಂದರೆ ಎಲ್ಲಾ ಮಾನವ ಬಳಗಗಳಲ್ಲಿಯ ಅಸ್ತಿತ್ವ, ಅನುಭಾವದ ಇನ್ನೊಂದು ಕುರುಹು. ವಿಶ್ವದ ಎಲ್ಲ ಅನುಭಾವಿಗಳ ಅನುಭಾವಗಳನ್ನು ಕಲೆಹಾಕುವುದು ಸಾಧ್ಯವಾದರೆ ಅವುಗಳಲ್ಲಿ ನೂರಕ್ಕೆ ಎಂಬತ್ತರಿಂದ ತೊಂಬತ್ತರಷ್ಟು ಸಾಮ್ಯವಿರುವದನ್ನು ಕಾಣಬಹುದು. ಆತ್ಮಾನಂದವು (Beatification) ಅನುಭಾವದ ಅತಿ ಮಹತ್ವದ ಕುರುಹು. ಈ ಆತ್ಮಾನಂದದ ವಿಷಯವಾಗಿಯೂ, ಒಂದು ತತ್ವಜ್ಞಾನದ ಪರಂಪರೆಯು ಬೆಳೆಯಲಿದೆ. "ಅದರ ತಾತ್ವಿಕ ವಿವೇಚನೆಯನ್ನೊಳಗೊಂಡ ಹೊಸ ಗ್ರಂಥವನ್ನು ಬರೆಯುವ ಅಪೇಕ್ಷೆಯು ಬಹುಕಾಲದಿಂದ ನನ್ನಲ್ಲಿ ನೆಲೆಸಿರುವದು" ಎಂದು ಡಾ| ರಾನಡೆಯವರು ಬರೆದಿರುವರು. ಜಗತ್ತಿನಲ್ಲಿಯ ಎಲ್ಲ ಅನುಭಾವಿಗಳು ತಮ್ಮೊದುರಿಸಿದ ಅತ್ಯುನ್ನತವಾದ ಧ್ಯೇಯವೆಂದರೆ ಆತ್ಮಾನಂದವೇ. ಈ ಆನಂದಾನುಭವವೇ ಎಲ್ಲ ಸತ್ಪುರುಷರನ್ನು ಒಂದೆಡೆ ತರುವದು. ಮತ್ತು ಅವರನ್ನು ಏಕಸೂತ್ರದಿಂದ ಕಟ್ಟುವದು.

ಕನ್ನಡ ಅನುಭಾವಿಗಳನ್ನು ಸಾಮಾನ್ಯವಾಗಿ ಎರಡು ಪಂಗಡಗಳಲ್ಲಿ ವಿಂಗಡಿಸಬಹುದು : ಶೈವರು ವೈಷ್ಣವರು ಎಂದು. ನಿಜವಾದ ಅನುಭಾವಿಯು ಶೈವನೂ ಅಲ್ಲ ವೈಷ್ಣವನೂ ಅಲ್ಲ. ಅವೆರಡೂ ಒಂದೇ ಅನುಭಾವದಲ್ಲಿ ಕೂಡಬಹುದು. ಎಲ್ಲ ಅನುಭಾವಿಗಳಿಗೆ ಕಾಣುವ ಶೇಷನು, ಶೈವರಿಗೂ ವೈಷ್ಣವರಿಗೂ ಒಂದೇ ಬಗೆಯಾಗಿ ಪೂಜ್ಯನು. ಶೇಷನು ಶಿವನ ಭೂಷಣನಾದರೆ ವಿಷ್ಣುವಿನ ಹಾಸಿಗೆಯಾಗಿರುವನು. ಅವನು ಅವರಿಬ್ಬರನ್ನೂ ಒಂದುಗೂಡಿಸುವನು. "ನಾನಿಲ್ಲಿ ಅವರೀರ್ವರ (ಶೈವ-ವೈಷ್ಣವರ) ಅನುಭಾವಗಳನ್ನು, ಇಬ್ಬರಿಗೂ ಆಗುವ ಅನುಭವಗಳನ್ನು ವಿವರಿಸಲಿರುವೆ; ಅವರಲ್ಲಿಯ ಭೇದಗಳನ್ನಲ್ಲ. ಅನುಭಾವದ ಬೆಳವಣಿಗೆಗೆ ಅವರಿತ್ತ ಕಾಣಿಕೆಯೇನು ಎಂಬುದೆ ನನ್ನೆದುರಿನ ಸಮಸ್ಯೆ!" ಹೀಗೆಂದಿರುವರು ಡಾ| ರಾನಡೆಯವರು.

ಈ ದೃಷ್ಟಿಯಿಂದ ಕನ್ನಡ ಅನುಭಾವಿಗಳಲ್ಲಿಯೂ ಜಗತ್ತಿನ ಬೇರೆ ಅನುಭಾವಿಗಳಲ್ಲಿಯೂ ತುಂಬಾ ಹೋಲಿಕೆ ಕಾಣುವದು. ಗ್ರೀಕ ತತ್ವಜ್ಞರನ್ನು ನೋಡುವಾ. ಪ್ರಭುದೇವನು ಸಾಕ್ರೆಟೀಸನನ್ನು, ಬಸವೇಶ್ವರನು ಪ್ಲೇಟೋನನ್ನು, ಚೆನ್ನಬಸವನು ಫೀಡೋನನ್ನು ಹೋಲುವನು ಎನ್ನಬಹುದು. ಅದೇ ರೀತಿ ಸರ್ವಜ್ಞನು ಹಿಡಾಕ್ಲಿಟಾಸನನ್ನು ಸರಿಗಟ್ಟಬಹುದು. ಕ್ರಿಶ್ಚನ್ ಸಂತರನ್ನು

ಸರಿಹೋಲುವ ಸಂತರೂ ಕನ್ನಡಿಗರಲ್ಲಿ ಇಲ್ಲದಿಲ್ಲ. ಪ್ರಭುವು ಕ್ರಿಸ್ತನನ್ನೂ, ಬಸವಣ್ಣನು ಸೇಂಟಪಾಲನನ್ನೂ, ಚೆನ್ನಬಸವನು ಲ್ಯೂಥರನನ್ನೂ ಹೋಲುವನು ಎನ್ನಲಡ್ಡಿಯಿಲ್ಲ. ಮಹಾರಾಷ್ಟ್ರದ ಸಂತರೆಡೆ ಸಾರಿದರೆ ಅಲ್ಲಿಯೂ ಈ ಬಗೆಯ ಹೋಲಿಕೆಯು ಕಾಣದಿರದು. ಬಸವನು ತುಕಾರಾಮನಿಗೆ ಸಮಾನನು. ಚೆನ್ನ-ಬಸವನ ಸಂಘಟನಾಶಕ್ತಿಯೂ, ಪ್ರಚಾರಪ್ರಭುತ್ವವೂ ರಾಮದಾಸರ ಆ ಬಗೆಯ ಸಾಮರ್ಥ್ಯವನ್ನು ಹೋಲುವದು. ಜಗನ್ನಾಥದಾಸರು ಹಾಗು ನಿಜ-ಗುಣಿಗಳು ಪಾಂಡಿತ್ಯದಲ್ಲಿಯೂ ಸಾಹಿತ್ಯದ ವಿಪುಲತೆಯಲ್ಲಿಯೂ ಏಕನಾಥರಿಗೆ ಸಮಾನರು. ಕನಕದಾಸನು ಒಂದು ಬಗೆಯಿಂದ ಜೋಖಾಮೇಳನನ್ನು ಹೋಲುವನು. ಅನುಭಾವದಲ್ಲಿ, ಕಾವ್ಯನಿರ್ಮಿತಿಯಲ್ಲಿ ಅವರೀರ್ವರಲ್ಲಿ ಅಂತರವಿದೆ ನಿಜ! ಆದರೂ ಅವರಿಬ್ಬರೂ ಒಳ್ಳೆಯ ಅನುಭಾವಿಗಳೆಂಬುದರಲ್ಲಿ ಸಂದೇಹವಿಲ್ಲ. ಕಾಖಂಡಿಕೆಯ ಮಹಿಪತಿಸ್ವಾಮಿಗಳು ಗ್ವಾಲ್ಹೀರದ ಮಹಿಪತಿಗಳನ್ನು ಹೋಲುವರು. ಇಬ್ಬರೂ ಹಿರಿಯ ವಿದ್ವಾಂಸರು, ದೊಡ್ಡ ಕವಿಗಳು, ಮಹಾನ್ ಅನುಭಾವಿಗಳು. ದುರ್ದೈವದಿಂದ ಇಬ್ಬರ ಸಾಹಿತ್ಯದ ಪ್ರಕಾಶನವೂ ಅಭ್ಯಾಸವೂ ಇನ್ನೂ ಸರಿಯಾಗಿ ಆಗಿರುವುದಿಲ್ಲ; ಆದುದರಿಂದ ಇಬ್ಬರೂ ತುಂಬ ಅಜ್ಞಾತರಾಗಿಯೇ ಉಳಿದಿರುವರು. ಇದೇ ಬಗೆಯ ಹೋಲಿಕೆಯನ್ನು ಹಿಂದೀ ಹಾಗೂ ಕನ್ನಡ ಸಂತರಲ್ಲಿಯೂ ಕಾಣಬಹುದು. ಹಿಂದೀ ಸಾಹಿತ್ಯದಲ್ಲಿ ತುಲಸೀದಾಸರಿಗಿರುವ ಸ್ಥಾನವು ಕನ್ನಡದಲ್ಲಿ ಪುರಂದರದಾಸರಿಗುಂಟು. ಸಾಹಿತ್ಯದ ದೃಷ್ಟಿಯಿಂದ ಇಬ್ಬರೂ ಸಮಾನರಿದ್ದರೂ, ಅನುಭಾವದಲ್ಲಿ ಪುರಂದರದಾಸರು ತುಲಸೀದಾಸರನ್ನೂ ಮೀರಿರುವರೆನ್ನಬಹುದು. ತುಲಸೀದಾಸರಂತೆ ಅವರು ಸಗುಣಭಕ್ತಿಯಿಂದ ತಮ್ಮ ಸಾಧನವನ್ನು ಪ್ರಾರಂಭಿಸಿದರೂ ಮುಂದವರು ಹಿರಿಯ ಯೋಗಿಗಳಾದರು. ವಿಜಯದಾಸರು ಸೂರದಾಸರನ್ನೂ, ಕನಕದಾಸರು ರೈದಾಸರನ್ನೂ, ಶರೀಫ ಸಾಹೇಬರು ಕೆಲ ಅಂಶಗಳಲ್ಲಿ ಕಬೀರದಾಸರನ್ನೂ, ಸರ್ಪಭೂಷಣರು ಚರಣದಾಸರನ್ನೂ ಹೋಲುವರು.

"ಈ ರೀತಿ ಕನ್ನಡ ಅನುಭಾವಿಗಳು ಜಗತ್ತಿನ ಅನುಭಾವಿಗಳಲ್ಲಿ ಬಹು ಉನ್ನತವಾದ ಸ್ಥಾನವನ್ನು ಪಡೆದಿರುವರು. ಜಗತ್ತಿನ ಅನುಭಾವಕ್ಕೆ ಒಳ್ಳೆಯ ಬೆಲೆಯುಳ್ಳ ಕಾಣಿಕೆಯನ್ನು ಸಲ್ಲಿಸಿರುವರು," ಎಂದು ಡಾ| ರಾನಡೆಯವರು ಸ್ಪಷ್ಟವಾದ ಅಭಿಪ್ರಾಯವನ್ನು ವ್ಯಕ್ತಮಾಡಿರುವರು.

ಪ್ರಕರಣ ಎರಡು

ಪರಮಾರ್ಥ-ಪ್ರೇರಣೆಗಳು (ಭಾಗ ೧)

೧

ಪರಮಾತ್ಮನ ವೈಭವದಲ್ಲಿ ಮೈಮರೆವ ಹಿರಿಯ ಪಾರಮಾರ್ಥಿಕ ಆದರ್ಶ

(ರಾಗ-ಭೈರವಿ, ತಾಲ-ದಾದರಾ)

ಬಹು ದೊಡ್ಡದೀ ಜನ್ಮ ಜಂಬುದ್ವೀಪಾಂತರದಿ
ಬಹು ದೊಡ್ಡದೀ ಜನ್ಮವು ॥ ಪ ॥
ಭಾಳಾಕ್ಷಹರನ ಸ್ತುತಿ ಬಿಡದೆ ಕೊಂಡಾಡಿದರೆ
ಬಹು ದೊಡ್ಡದೀ ಜನ್ಮವು ॥ ಅ. ಪ. ॥

ಮೂಡಲ ದಿಕ್ಕಿನೊಳು ಮೂಡಿತ್ತು ಈ ಚಿಕ್ಕ
ನಾಡೆಲ್ಲ ಬೆಳಕಾದಿತೊ ತಮ್ಮಾ ॥
ಎಡಬಲ ಮಧ್ಯದಿ ಶೋಭಿಸಿ ಕಂಡಿತಿದು
ಪಡೆದು ಬಂದವರಿಗೊ ತಮ್ಮಾ ॥ ೧ ॥

ಐದರೊಳಗೈದು ಹುದುಗಿಕೊಂಡಿಹುದು
ಐದರೊಳಗೈದು ಕಲಸೊ ತಮ್ಮಾ ॥
ಕಾಯವಿರಹಿತನಾಗಿ ಪ್ರಭುಮಹಿಮೆಯೊಳು ಸಿಲುಕಿ
ಲಯವಾಗಬೇಕೊ ತಮ್ಮಾ ॥ ೨ ॥

ಪಶ್ಚಿಮ ದಿಕ್ಕಿನಲಿ ಮಿಂಚಿ ಕೆಂಡವ ಕರೆದು
ಕಿಚ್ಚೆದ್ದು ಆಡಗಿತಲ್ಲೊ ತಮ್ಮಾ ॥
ಸಚ್ಚಿದಾನಂದನ ಧ್ಯಾನದೊಳು ಇರಲಿಕ್ಕೆ
ನಿಶ್ಚಿಂತನಾಗಬೇಕೊ ತಮ್ಮಾ ॥ ೩ ॥

ಹಸರು ಹಳದಿ ಕೆಂಪು ಹಸನಾಗಿ ತೋರುತ
ಋಷಿಗಿರಿಯಿಂದ ಉದುರಿತಲ್ಲೊ ತಮ್ಮಾ ॥
ಸೂಸುವ ಮನ ಒಬ್ಬುಳಿಯಾಗಿ ಗುರು-।
ಘೋಷದೊಳಗೆ ಲಯವಾಗಬೇಕೊ ತಮ್ಮಾ ! ॥ ೪ ॥

ಬೈಲಿಗೆ ಬೈಲು ನಿರ್ಬೈಲು ತೋರುತಲಿದೆ।
ಆದು ಮೂಲ ಬ್ರಹ್ಮ ತಿಳಿಯಬೇಕೊ ತಮ್ಮಾ ॥
ರೇವಗೀಪುರದ **ಶ್ರೀಸಿದ್ಧಲಿಂಗೇಶನ**।
ಶರಣನಿಸಬೇಕೊ ತಮ್ಮಾ ॥ ೫ ॥

೨

ಪರಮಾತ್ಮನ ಅರಿವು – ಮರವುಗಳಿಂದ ಮಗುವಿನಲ್ಲಿ ಉಂಟಾಗುವ ಪರಿಣಾಮಗಳನ್ನು ಕುರಿತ ಕವಿಕಲ್ಪನೆಗಳು

(ರಾಗ-ಭೈರವಿ, ತಾಲ-ದೀಪಚಂದಿ)

ಆಳುತಿದ್ಯಾ ಕಂದಾ ಆಳುತಿದ್ಯಾ । ನೀನು ।
ತಿಳಿಯದೆ ಮರ್ತ್ಯಕ್ಕೆ ಮರೆತು ಬಂದೆನೆಂದು ॥ ಪ ॥

ಮಾಯದ ತೊಟ್ಟಿಲೊಳು ಕೈಕಾಲು ಒತ್ತುತ ।
ಮೋಹದ ಸಿಂಬಿಯೊಳು ಹೊರಳಾಡುತ ॥
ಜೀವ ಮನಸು ಎಂಬ ತಗಣಿ ಉಂಗುಟಕ ಪತ್ತಿ
ದೇಹಕ್ಕೆ ಯಳ್ಳಷ್ಟು ಸುಖವಿಲ್ಲೆಂದು ॥ ೧ ॥

ತಂದೆತಾಯಿಗಳಿಂದ ಬಂಧನದೊಳು ಬಿದ್ದೆ
ಮುಂದೇನು ಗತಿಯೆಂದು ಕೆಡುವೆನೆಂದು ॥
ಆಂದಛಂದದಿ ಬಂದು ಮೊಲೆಕೊಟ್ಟು ಹಾಲೆರೆದು
ಬಂದಂಥ ವಿಷಯಕ್ಕೆ ಬಲಿಯು ಹಾಕುವರೆಂದು ॥ ೨ ॥

ನಾವು ಮಗನಿಗೆ ಮದುವೆ ಮಾಡುವೆವೆಂದು ।
ತಾವು ಬಿದ್ದ ಕುಣಿಯಲ್ಲಿ ಎನ್ನ ನೂಕುವರೆಂದು ॥
ಜಾವ ಜಾವಕೆ ಒಮ್ಮೆ ನೋಡಿ ಹಿಗ್ಗುತಲಿ ।
ದೇವ ಕೂಡಲೂರೇಶ ಕೂಡಿಕೊ ಎನುತಲಿ ॥ ೩ ॥

೩

ಬೇರೆ ಬೇರೆ ಇಂದ್ರಿಯಗಳು ವಿನಾಶದೆಡೆ ಸೆಳೆದೊಯ್ಯುವ ಬಗೆ

(ವಚನ)

ನೈನೇಂದ್ರಿಯ ವಿಷಯದಿಂದ
ಪತಂಗ ಕೆಡುವದು ದೀಪದ ಜ್ವಾಲೆಯಲ್ಲಿ.

ಶ್ರವಣೇಂದ್ರಿಯ ವಿಷಯದಿಂದ
ಎರಳೆ ಕೆಡುವದು ಬೇಟಿಗಾರನ ಸರಳಿನಲ್ಲಿ.

ಘ್ರಾಣೇಂದ್ರಿಯ ವಿಷಯದಿಂದ
ಭ್ರಮರವು ಕೆಡುವದು ಸಂಪಿಗೆಯ ಪುಷ್ಪದಲ್ಲಿ.

ರಸನೇಂದ್ರಿಯ ವಿಷಯದಿಂದ
ಮತ್ಸ್ಯ ಕೆಡುವದು ಜಲಗಾರನ ಬಲೆಯಲ್ಲಿ.
ತ್ವಗೇಂದ್ರಿಯ ವಿಷಯದಿಂದ
ಗಜ ಕೆಡುವದು ರಾಜನ ಕೃತಕದಲ್ಲಿ.
ಇಂತಿಷ್ಟು ಪ್ರಾಣಿಗಳು
ಒಂದೊಂದು ವಿಷಯಕ್ಕೆ ಬಂಧನಕ್ಕೊಳಗಾದವು.
ಇಂತಪ್ಪ ಪಂಚೇಂದ್ರಿಯ-
ವಿಷಯ-ವ್ಯಾಪಾರದಲ್ಲಿ ಹರಿದಾಡುವ
ಮಂದಮತಿ ಎನ್ನನ್ನು
ಸಲಹಿಕೊಳ್ಳಯ್ಯಾ ದೇವಾ **ಅಖಂಡೇಶ್ವರಾ.**

೪

ತನ್ನ ಅನೇಕ ವಿಧ ಪಾರಮಾರ್ಥಿಕ ರೋಗದ ನಿದಾನವನ್ನು ಅರುಹಲು ಸಾಧಕನು ಪರಮಾತ್ಮನಿಗೆ ಮಾಡಿದ ಪ್ರಾರ್ಥನೆ

(ರಾಗ–ಕಾಂಬೋಧಿ, ತಾಲ–ದಾಪರಾ)

ಅಪ ರೋಗವು ಎನಗೆ ದೇವ ಧನ್ವಂತರಿ।
ಸಾವಧಾನದಿ ಎನ್ನ ಕೈ ಹಿಡಿದು ನೋಡಯ್ಯ ॥ ಪ ॥

ಹರಿಯು ಮೂರ್ತಿಯು ಎನ್ನ ಕಣ್ಣಿಗೆ ಕಾಣಿಸದು।
ಹರಿಯ ಕೀರ್ತನೆಯು ಕೇಳಿಸದೆನ್ನ ಕಿವಿಗೆ॥
ಹರಿಮಂತ್ರಸ್ತೋತ್ರ ಬಾರದು ಎನ್ನ ನಾಲಿಗೆಗೆ।
ಹರಿಪ್ರಸಾದವು ಜಿಹ್ವೆಗೆ ಸವಿಯಾಗದಯ್ಯ ॥ ೧ ॥

ಹರಿಪಾದ ಸೇವೆಗೆ ಹಸ್ತಗಳು ಚಲಿಸವು।
ಗುರುಹಿರಿಯರಂಘ್ರಿಗೆ ಶಿರ ಬಾಗದು॥
ಹರಿಯ ನಿರ್ಮಾಲ್ಯವಾಘ್ರಾಣಿಸದು ನಾಸಿಕವು।
ಹರಿಯಾತ್ರೆಗೆನ್ನ ಕಾಲೇಳವಯ್ಯ ॥ ೨ ॥

ಅನಾಥಬಂಧು **ಗೋಪಾಲ ವಿಠಲರಾಯ**।
ಎನ್ನ ಭಾಗದ ವೈದ್ಯ ನೀನೆಯಾದಿ॥
ಅನಾದಿಕಾಲದ ಭವರೋಗ ಕಳೆಯಯ್ಯ।
ನಾನೆಂದಿಗೂ ಮರೆಯೆ ನೀ ಮಾಡಿದುಪಕಾರ ॥ ೩ ॥

೫

ಈ ಅನಾಥ ವಿಕಾಕಿ ಹತಭಾಗಿಯನ್ನು ಯಾಕೆ ತೊರೆದೆಯಯ್ಯ ಪ್ರಭೊ ?

(ರಾಗ-ಕಾಂಬೋಧಿ, ತಾಲ-ದಾದರಾ)

ಯಾಕೆನ್ನ ಈ ರಾಜ್ಯ ಕೆಳತಂದೆ ಹರಿಯೆ।
ಸಾಕಲಾರದೆ ಎನ್ನನೇಕೆ ಪುಟ್ಟಿಸಿದಿ॥ ॥ ಪ ॥

ಎನ್ನ ಕುಲದವರಿಲ್ಲ ಎನಗೊಬ್ಬ ಹಿತರಿಲ್ಲ।
ಮನ್ನಿಸುವ ದೊರೆಯಿಲ್ಲ ಮನಕೆ ಜಯವಿಲ್ಲ॥
ಹೊನ್ನು ರನ್ನಗಳಿಲ್ಲ ಕರುಣೆ ತೋರುವರಿಲ್ಲ।
ಇನ್ನಿಲ್ಲಿ ತರವಲ್ಲ ಇಂದಿರೇಶನೆ ಬಲ್ಲ॥ ॥ ೧ ॥

ದೇಶಪರಿಚಯವಿಲ್ಲ ಬೇಸರ ಕಳೆವರಿಲ್ಲ।
ಪರಮಾತ್ಮನಲ್ಲದೆ ಪರಗತಿಯು ಇಲ್ಲ॥
ಹರಣದಲಿ ಹುರುಡಿಲ್ಲ ಕರಣದಲಿ ದೃಢವಿಲ್ಲ।
ದೊರೆ **ಪುರಂದರ ವಿಠಲ** ತಾನೆ ಬಲ್ಲ॥ ॥ ೨ ॥

೬

ಭಕ್ತಿ, ವಿರತಿ, ಅರಿವು ಎಂಬ ಬಿಲ್ಲುಬಾಣಗಳಿಂದ, ಅಂತರಂಗದಲ್ಲಿಯ ಹುಲಿ, ಕರಡಿ, ಸಿಂಹಗಳನ್ನು ಕೊಲ್ಲಿರಯ್ಯ

(ರಾಗ-ಭೂಪ, ತಾಲ-ದೀಪಚಂದಿ)

ಕಾಯಕಾಂತಾರವ ಹೊಕ್ಕು ಬೇಟೆಯನಾಡಿ।
ಮಾಯ ಮೋಹದ ಮೃಗಗಳ ಕೊಲ್ಲಿರೊ ॥ ಪ ॥

ಕೋಪವೆಂಬುವ ಹಿರಿಯ ಹುಲಿಯುಂಟು।
ಪಾಪವೆಂಬ ಸೂಕರವುಂಟು॥
ಚಾಪಲ್ಯವೆಂಬ ಜಿಂಕೆಯುಂಟು।
ಕಾಪಟ್ಯವೆಂಬ ನರಿಯುಂಟು ॥ ೧ ॥

ಮೆರೆವಷ್ಟಮದಗಳೆಂಬ ಕೋಣಗಳುಂಟು।
ಬರಿಯ ದಂಭವೆಂಬ ಕರಡಿಯುಂಟು॥
ಉರಿವ ಮತ್ಸರ ಕೇಸರಿಯುಂಟು।
ಮರವು ಎಂದೆಂಬ ಮದ್ದಾನೆಯುಂಟು ॥ ೩ ॥

ಭರತಿ ಸದ್ಭಕ್ತಿ ಎಂದೆಂಬ ಬಿಲ್ಲನೆ ಮಾಡಿ।
ವಿರತಿ ಎಂದೆಂಬ ಸಿಂಜಿನಿಯ ಹೂಡಿ॥
ಅರಿವೆಂಬ ಬಾಣವನ್ನೆಚ್ಚಿ ಕೆಡಹುತೆ।
ಗುರುಸಿದ್ಧನಂಘ್ರಿಪಂಕಜಕೆರಗಿ ॥ ೩ ॥

೭

ಅಯ್ಯ! ನಿದ್ರೆಯಲ್ಲಿ ಕನಸಿನಲ್ಲಿ ಮೈಮರೆತ ದಾರಿಕಾರನೆ! ನಿನ್ನ ಗುರಿಯು ಬಲು ದೂರವಿರುವುದಯ್ಯ! ಎಚ್ಚರಾಗು! ಮುಂದೆ ಸಾಗಯ್ಯ!

(ರಾಗ – ಶಂಕರಾಭರಣ, ತಾಲ – ದೀಪಚಂದಿ)

ಎಲೊ ದಾರಿಕಾರನೆ ಮುಲಗಿಕೊಂಬರೆ ಹೀಗೆ।
ಬಲು ದೂರ ವೈಕುಂಠ ಪ್ರವಾಸವು ॥ ಪ ॥
ತಲೆಯೊಳು ನಿಂತು ನಗುವಳು ಮೃತ್ಯುದೇವತೆ।
ಹಲವು ಹಂಬಲಿಸಲು ಫಲವೇನು ಕನಸಿನೊಳು ॥ ಅ. ಪ. ॥

ಸ್ಥಳವು ನಿನ್ನದು ಬಿಟ್ಟು ಹಳವ ಸೇರಿದರಿನ್ನು।
ತಿಳಿವಳಿಕೆ ಬರಬಾರದೆ ಮಾನವಾ॥
ತೊಳಲು ದಾರಿಯಲಿ ಬಲರು, ನಿನ್ನಯ ಬದುಕ।
ಸೆಳೆಯದೆ ಬಿಡರಯ್ಯ ಉಳಿಸೆಲೊ ಮಾನವಾ ॥ ೧ ॥

ಬರುವ ಮುಂದೆ ತಂದ ಸರುಕೆಲ್ಲ ತೀರಿತು।
ತಿರುಗಿ ಬರುವದಲ್ಲ ಬರಿಗಂಟು॥
ಕರಿ, ಹುಲಿ, ತೋಳ, ನಾಯಿ, ನರಿ, ಕೋಣ, ಕರಡಿಗಳು।
ಹರಿದು ತಿಂಬುವು ನಿನ್ನ ತೆರಳಗೊಡವು ಮುನ್ನ ॥ ೨ ॥

ಹಿಂದೆ ಹಲವು ಕವಚಂಗಳ ಕಳಕೊಂಡಿ।
ಇಂದೀ ಕವಚವಾದರು ಪೋಗುದು॥
ಮುಂದಿನ್ನು ಸಾಧಿಸಿ **ಪುರಂದರ ವಿಠಲನ**।
ಪೊಂದಿ ಪಾದಕೆ ಸುಖಿಸೆಲೊ ಮಾನವಾ ॥ ೩ ॥

ಪ್ರಕರಣ ಮೂರು

ಪರಮಾರ್ಥ - ಪ್ರೇರಣೆಗಳು (ಭಾಗ ೨)

೧

ಮಾನವನ ಜೀವನವ್ಯಾಪಾರಗಳೆಲ್ಲ ಕ್ಷಣಭಂಗುರವಾದವುಗಳು

(ರಾಗ - ಭೂಪ, ತಾಲ - ದೀಪಚಂದಿ)

ಹೇಗೆ ಇರಬೇಕು ಸಂಸಾರದಲ್ಲಿ ||
ಹೇಗೆ ಬರೆದಿದೆ ಪ್ರಾಚೀನದಲ್ಲಿ || ಪ ||

ಹಕ್ಕಿ ಅಂಗಳದಲ್ಲಿ ಬಂದು ಕೂತಂತೆ ||
ಆ ಕ್ಷಣದಲ್ಲಿ ಹಾರಿಹೋದಂತೆ || ೧ ||

ನಾನಾ ಪರಿಯಲ್ಲಿ ಸಂತೆ ನೆರೆದಂತೆ ||
ನಾನಾ ಪಂಥವ ಹಿಡಿದು ಹೋದಂತೆ || ೨ ||

ಮಕ್ಕಳಾಡಿ ಮನೆ ಕಟ್ಟಿದಂತೆ ||
ಸಾಕೆಂದು ಆಟ ಅಳಿಸಿ ಪೋದಂತೆ || ೩ ||

ವಸತಿಕಾರನು ವಸತಿ ಬಂದಂತೆ ||
ತುಸು ಹೊತ್ತೇರೆ ಹೊರಟು ಹೋದಂತೆ || ೪ ||

ಸಂಸಾರಪಾಶವ ನೀನೆ ಬಿಡಿಸಯ್ಯ ||
ಕಂಸಾರಿ **ಪುರಂದರ ವಿಠಲರಾಯ** || ೫ ||

೨

ಚಿಂತೆಯ ಸಾರ್ವತ್ರಿಕ ಸಾಮ್ರಾಜ್ಯವು

(ರಾಗ - ಪುರಿಯಾ ಧನಾಶ್ರೀ, ತಾಲ - ದೀಪಚಂದಿ)

ಅನುಗಾಲವು ಚಿಂತೆಯು ಮನುಜರಿಗೆ |
ಮನ ಹೋಗಿ ಮಾಧವನ ಒಳಗೂಡು ತನಕ || ಪ ||

ಸತಿಯು ಇದ್ದರು ಚಿಂತೆ ಇಲ್ಲದಿದ್ದರೂ ಚಿಂತೆ |
ಮತಿಹೀನ ಸತಿಯಾದರು ಚಿಂತೆಯು ||
ಪೃಥಿವಿಯೊಳಗೆ ಸತಿ ಅತಿ ಜಲ್ಪಿಯಾದರೂ |
ಮಿತಿಮೀರಿ ನಡೆದರೆ ಅವಳೊಂದು ಚಿಂತೆ || ೧ ||

ಮಕ್ಕಳಿದ್ದರು ಚಿಂತೆ ಇಲ್ಲದಿದ್ದರೂ ಚಿಂತೆ ।
ಅತ್ತು ಅನ್ನಕೆ ಕಾಡುವ ಚಿಂತೆಯು ॥
ತುತ್ತಿಗೆ ಸಾಲದೆಂಬ ಬಡತನದ ।
ಕಕ್ಕುಲತೆ ದೇಶದೊಳಿಲ್ಲದ ಚಿಂತೆ ॥ ೨ ॥

ಬಳಗವಿಲ್ಲದ ಚಿಂತೆ ಬಳಗವಾದರೂ ಚಿಂತೆ ।
ಮೇಲೆ ಸಂಬಳ ಬಾರದ ಚಿಂತೆಯು ॥
ಸಾಲ ಕೊಡೋ ಚಿಂತೆ ಸಾಲ ತೆಗೆಯೋ ಚಿಂತೆ ।
ಮೂಲೋಕದೊಳಗೆಲ್ಲ ಚಿಂತೆ ಕಾಣಣ್ಣಾ ॥ ೩ ॥

ಮನೆಯಿಲ್ಲದ ಚಿಂತೆ ಮನೆಯಾದರೂ ಚಿಂತೆ ।
ಮನೆಯ ವಾರ್ತೆ ನಡೆಯದ ಚಿಂತೆಯು ॥
ತೊಂಡನಾಗಿ ಪೊತ್ತು ತಿರುಗುವ ಚಿಂತೆ ಭೂ- ।
ಮಂಡಲದೊಳಗೆಲ್ಲ ಚಿಂತೆ ಕಾಣಣ್ಣಾ ॥ ೪ ॥

ಬಡವನಾದರು ಚಿಂತೆ ಬಲ್ಲಿದನಾದರು ಚಿಂತೆ ।
ಕೊಡ ಹೊನ್ನು ಮನೆಯೊಳಿದ್ದರೂ ಚಿಂತೆಯು ॥
ಪೊಡವಿಯೊಳಗೆ ನಮ್ಮ **ಪುರಂದರ ವಿಠಲನ** ।
ಬಿಡದೆ ಚಿಂತಿಸಿದರೆ ಚಿಂತೆ ನಿಶ್ಚಿಂತೆ ॥ ೫ ॥

೩

ಪರಮಾತ್ಮನು ನಿನಗೆ ಪಾರಮಾರ್ಥಿಕ ಪದವಿಯನ್ನು ಕೊಡುವುದಲ್ಲದೆ ಐಹಿಕ ವೈಭವವನ್ನೂ ಸಲ್ಲಿಸಿ, ನಿನ್ನ ಚಿಂತೆಯನ್ನು ಕಳೆಯಬಹುದು

(ರಾಗ-ಭೈರವಿ, ತಾಲ-ಜಲದೆಕ್ಕಾ)

ಚಿಂತೆಯಾತಕೊ । ಬಯಲ ಭ್ರಾಂತಿಯಾತಕೊ
ಕಂತುಪಿತನ ದಿವ್ಯನಾಮ । ಮಂತ್ರವನ್ನು ಜಪಿಸುವವಗೆ ॥ ಪ ॥

ಕಾಲಕಾಲದಲ್ಲಿ ಬಿಡದೆ । ವೇಳೆಯರಿತು ಕೂಗುವಂಥ ॥
ಕೋಳಿ ತನ್ನ ಮರಿಗೆ ಮೊಲೆಯ ಹಾಲು । ಕೊಟ್ಟು ಸಲುಹಿತೆ ॥ ೧ ॥

ಸಡಗರದಿ ನಾರಿಯರು । ಹಡೆಯುವಾಗ ಸೂಲಗಿತ್ತಿ ॥
ಅಡವಿಯೊಳಗೆ ಹೆರುವ ಮೃಗವ । ಹಿಡಿದು ರಕ್ಷಿಸುವರಾರೊ ॥ ೨ ॥

ಹೆತ್ತ ತಾಯಿ ಸತ್ತುಹೋಗಲು । ಕೆಟ್ಟೆವೆಂಬರು ಲೋಕಜನರು
ಮತ್ತೆ ಗುಂಗುರಿಗೆ ತಾಯಿ । ಹತ್ತರಿದ್ದು ಸಲುಹಿತೆ ॥ ೩ ॥

ಪರದಲ್ಲಿ ಪದವಿಯುಂಟು । ಇಹದಲ್ಲಿ ಸೌಖ್ಯವುಂಟು ॥
ಗುರುಪುರಂದರ ವಿಠಲನ । ನಾಮ ನೆನೆದವರಿಗೆ ॥ ೪ ॥

೪

ವಿಶ್ವದೊಡೆಯನೆ! ಎನ್ನಂತರಂಗದಲ್ಲಿಯ ಚಿಂತೆಯನ್ನು ಕಳೆಯಲು ಏಕೆ ದಯಮಾಡಲೊಲ್ಲೆ ?

(ರಾಗ-ಭೈರವಿ (ಕರ್ನಾಟಕಿ), ತಾಲ-ದೀಪಚಂದಿ)

ಯಾಕೆ ದಯಮಾಡವಲ್ಲಿ । ಶ್ರೀಹರಿಯೆ ।
ಮೂಕನಾಗುವರೆ ಹೀಗೆ ॥ ಪ ॥

ಲೋಕವನು ರಕ್ಷಿಪ ಲಕ್ಷ್ಮೀಕಾಂತನು ನೀನೆ ।
ವಾಕ್ಯಮೊರೆಗಳ ಕೇಳಿ ದಯಮಾಡೊ ಶ್ರೀಹರಿಯೆ ॥ ಅ. ಪ. ॥

ಮನಸಿನೊಳಿದ್ದ ಚಿಂತಿ । ಶ್ರೀಹರಿಯೆ ।
ಪೇಳುವೆ ನಾ ನಿನಗೆ ॥
ಅನ್ಯದೇವತೆಗಳಿಗೆ ಪೇಳಲಾರೆನು ದೇವಾ ।
ದಾನವಾಂತಕ ರಂಗಾ ನೀನೆ ದಯಮಾಡೊ ಕೃಷ್ಣಾ ॥ ೧ ॥

ಅರ್ಥವಿಲ್ಲದ ಬಾಳ್ವೆಯು । ಶ್ರೀಹರಿಯೆ ।
ವ್ಯರ್ಥವಾದಿತು ಜನ್ಮವು ॥
ಕರ್ತು ನಿನ್ನಯ ನಾನು ಕಾಡಿ ಬೇಡುವನಲ್ಲ ।
ತುರ್ತದಲಿ ದಯಮಾಡೊ ತುಲಸೀದಲಪ್ರಿಯ ರಂಗ ॥ ೨ ॥

ಮೂರು ಲೋಕದ ಕರ್ತಾ ನೀ । ಶ್ರೀಹರಿಯೆ ।
ಸಾರುವೆ ನಾ ನಿನಗೆ ॥
ಕಾರುಣ್ಯನಿಧಿ ನಮ್ಮ **ಪುರಂದರ ವಿಠಲನು** ।
ದೀನ ಮನೋಹರ ಪೂರ್ಣ ಸಹಾಯಕಾರಿ ॥ ೩ ॥

೫

ಅಯ್ಯ ! ನೀನೆನ್ನ ಸಲುಹುವದಾದರೆ, ಇದೀಗ ಸಲುಹಯ್ಯ!

(ರಾಗ-ಪಿಲು, ತಾಲ-ಕೇರವಾ)

ಇದೆ ಸಮಯ ಹರಿಯೆ । ದೊರೆಯೆ ॥ ಪ ॥
ಇದೇ ಸಮಯ ನಿನ್ನ । ಪದಾಬ್ಜ ತೋರುತೆ ॥
ಸದಾ ಎನ್ನನು ನೋಡಿ । ಮುದದಿ ಸಲಹುವರೆ ॥ ಅ. ಪ. ॥
ನಾನಾ ಜನ್ಮದಿ ಬಂದು । ಜ್ಞಾನ ವಿಹೀನನಾಗಿ ॥
ಹೀನನಾದವಗೆ ಸು- । ಜ್ಞಾನ ಪಾಲಿಸುವರೆ ॥ ೧ ॥
ಆಶಾಪಾಶದಿ ಸಿಲುಕಿ । ಶ್ರೀಶಾ ಮರೆತೆ ನಿನ್ನ ॥
ಲೇಸು ದಾರಿಯ ತೋರಿ । ದಾಸನ ಕಾಯುವರೆ ॥ ೨ ॥

ಸಂತರ ಸಂಗವ। ಸಂತತ ಪಾಲಿಸಿ ॥
ಅಂತರಂಗದ ವಿ-। ಕಾಂತ ಭಜನೆಗಾಗಿ ॥ ೩ ॥
ಹಿಂದಿನ ಸುಕೃತದಿ। ಬಂದೆ ಮಾನವನಾಗಿ ॥
ಮುಂದಿನ ಪದವನು। ಹೊಂದಿಸಿ ಪೊರೆಯಲು ॥ ೪ ॥
ಶ್ರೀಪತಿ ವಿಜಯ ವಿ-। ಠ್ಠಲ ಶ್ರೀವೆಂಕಟ ॥
ತಾಪತ್ರಯದಿಂ। ಕಾಪಾಡುವದಕೆ ॥ ೫ ॥

೬

ಪರಮಾತ್ಮನಿಗಾಗಿ ನಡೆಯಿಸಿದ ವಿಫಲ ಶೋಧ-ಪರಿಶ್ರಮಗಳ ತರುವಾಯ ಆತನಿಂದ ದೊರೆತ ಆಕಸ್ಮಿಕ ನೆರವು

(ರಾಗ-ಭೈರವ, ತಾಲ-ದೀಪಚಂದಿ)

ಎಲ್ಲಿದ್ಯೋ ಹರಿ ಹೇಳಯ್ಯ।
ಎಲ್ಲಿ ತಿಳಿಯುತ್ತದೆ ನಿಮ್ಮಾಟದ ನೆಲೆಯ ॥ ಪ ॥
ನಾಲ್ಕಾರು ಹದಿನೆಂಟು ಮುಂದಿಯ ಕೇಳಿದೆ।
ಸಿಲುಕನೆಂದವರಾಡುತೆ ॥
ಮಲಕು ಎಂಭತ್ತು ನಾಲ್ಕು ಲಕ್ಷನೂ ಸೋಸಿದೆ।
ಸಿಲುಕಿ ನಿನ್ನ ನಿಜ ನೆಲೆಯು ತೋರದೆ ॥ ೧ ॥
ನಾನಾ ಮತ ನಾನಾ ಮಾರ್ಗ ಶೋಧಿಸಿದೆ।
ಖೂನ ನಿನ್ನದು ತಿಳಿಯದೆ ॥
ನಾನು ನಾನೆಂಬವರಿಗನುಸರಿಸಿದೆ।
ನೀನಿರುವ ಸ್ಥಳದ ಗಾಳಿಯು ಬೀಸದೆ ॥ ೨ ॥
ಬೀಳದವರ ಕಾಲು ಬಿದ್ದು ನಾ ಕೇಳಿದೆ।
ಸುಳುಹು ನಿನ್ನದು ತೋರದೆ ॥
ತಲೆ ಕೆಳಗೆ ಮಾಡಿ ತಪಸವ ಮಾಡಿದೆ।
ಒಲವು ನಿಮ್ಮದು ಎಂದಿಗೂ ಆಗದೆ ॥ ೩ ॥
ಪಡದ ಬವಣೆ ಬಟ್ಟೆ ಹುಡುಕದಾ ಹುಡುಕಿದೆ।
ತೊಡಕು ನಿಮ್ಮದು ತಿಳಿಯದೆ ॥
ಒಡನೆ ಎನ್ನೊಳು ಬಂದು ಅಡಕವ ಹರಿಸಿದಿ।
ಬಡವನಾಥನೆಂದು ಕೈಯ ಬಿಡದೆ ॥ ೪ ॥
ಮನೋನ್ಮನವಾಗಿ ಕಂಗಳ ತೆರಿಸಿದಿ।
ಸ್ವಾನುಭವಸುಖ ನೀಡಿದಿ ॥
ಹೀನ ಮಹಿಪತಿ ಮನೋಹರನ ಮಾಡಿದಿ।
ಅನುದಿನ ಘನಸುಖದೊಳು ಇರಿಸಿದಿ ॥ ೫ ॥

ಪ್ರಕರಣ ನಾಲ್ಕು

ನೈತಿಕ ಸಿದ್ಧತೆ

೧

ಮಾನವ ಜೀವನದಿಂದ ಲಭಿಸಿದ ಬೆಲೆಯುಳ್ಳ ಸುಸಂಧಿಯನ್ನು ದೂರೀಕರಿಸದಿರು

(ರಾಗ-ಭೈರವಿ, ತಾಲ-ದೀಪಚಂದಿ)

ಮಾನವ ಜನ್ಮ ದೊಡ್ಡದು । ಹಾನಿ ಮಾಡಬೇಡಿ ಹುಚ್ಚಪ್ಪಗಳಿರಾ ॥ ಪ ॥

ಕಣ್ಣು ಕೈ ಕಾಲು ಕಿವಿ ನಾಲಿಗೆ ಇರಲಿಕ್ಕೆ ।
ಮಣ್ಣು ಮುಕ್ಕಿ ಮರುಳಾಗುವರೇ ॥
ಹೊನ್ನು ಹೆಣ್ಣಿಗೆ ಮೆಚ್ಚಿ ಹರಿನಾಮಾಮೃತ ।
ಉಣ್ಣದೆ ಉಪವಾಸ ಮಾಡುವರೆ ಪ್ರಾಣಿ ॥ ೧ ॥

ಕಾಲನ ದೂತರು ಕರಪಿಡಿದೆಳೆವಾಗ ।
ತಾಳು ತಾಳೆಂದರೆ ತಾಳುವರೆ ॥
ದಾಳಿ ಬಾರದ ಮುನ್ನ ಧರ್ಮವ ಕೈಕೊಳ್ಳಿ ।
ಸುಳ್ಳಲ್ಲ ಸಂಸಾರ ಸುಳಿಗಾಳಿಯಂತಿದೆ ॥ ೨ ॥

ಏನು ಕಾರಣ ನಮ್ಮ ಯದುಪತಿಯ ಮರೆತಿರಿ ।
ಧನಧಾನ್ಯ ಪುತ್ರರು ಕಾಯುವರೆ ॥
ಇನ್ನು ಆದರೂ ಏಕೋಭಾವದಿ ಪೂಜಿಸಿ ।
ಉನ್ನತ ಪುರಂದರ ವಿಠಲನ ಭಜಿಸಿರಿ ॥ ೩ ॥

೨

ಮನಸಿನ ಮುರಗಿಯ ತಿದ್ದಿಸೋ ದೇವಾ !

(ರಾಗ-ಭೈರವಿ, ತಾಲ-ದೀಪಚಂದಿ)

ಮನಸಿನ ಮುರಿಗೆಯ ತಿದ್ದಿಸೋ ದೇವಾ ॥ ಪ ॥

ಪ್ರಾತಃಕಾಲಕ್ಕೆ ಎದ್ದು ಪರದ್ರವ್ಯ ಅಪಹಾರ ।
ಸಾಧುರ ನಿಂದೆಯನಾಡುತಲ್ಯಾದ ॥
ಸಾಧಿಸಿ ಯಮನವರು ಎಳೆದೊಯ್ವಾಗ ।
ಸತ್ತೆ ಸತ್ತೆನೆಂದು ಮರುಗುತಲ್ಯಾದ ॥ ೧ ॥

ಯತಿವೇಷವ ತಾಳಿ ದೇಶಭ್ರಷ್ಟನಾಗಿ।
ಕಾಶಿಯ ಕ್ಷೇತ್ರಕ್ಕೆ ಹೊರಟಿತು ಮನಸು ॥
ಕಾಶಿಯ ದಾರಿಯೊಳು ವೇಶ್ಯೆಗೆ ಮೆಚ್ಚಿ।
ಕೇಶವ ನಿಮ್ಮನು ಮರೆಯಿತು ಮನಸು ॥ ೨ ॥

ಬಲ್ಲವಗೆ ಆರ್ಜವ ಮಾಡುತಲ್ಯಾದ।
ಬಡವರಿಗೆ ನೋಯಿಸಿ ನುಡಿಯುತಲ್ಯಾದ ॥
ಗುರುಲಿಂಗ ಜಂಗಮ ಚರಣವ ನಂಬದೆ।
ಅಡವಿಯಲ್ಲಿ ಚರಿಸ್ಯಾಡುತಲ್ಯಾದ ॥ ೩ ॥

೩

ನಾಲಿಗೆಗೆ ವಿಧಿಸಲಾದ ನೈತಿಕ ಹಾಗೂ ಪಾರಮಾರ್ಥಿಕ ಔಷಧ

(ರಾಗ – ಜೋನಪುರಿ, ತಾಲ – ಝಂಪತಾಲ)

ಸುಮ್ಮನಿರು ನಾಲಿಗೆ ಸುಮ್ಮನಿರು ನಾಲಿಗೆ।
ಸಾಕ್ಷಾತ ನಾಲಿಗೆ ಸುಮ್ಮನಿರು ॥ ಪ ॥

ಸುಮ್ಮನಿದ್ದರೆ ನೀನು ಬ್ರಹ್ಮನಾಗುವಿ।
ಸುಮ್ಮನಿದ್ದೆನೆಂಬ ಹಮ್ಮನಳಿದು ॥ ಅ. ಪ. ॥

ಪರರ ನಿಂದಿಸಬೇಡ ಪರವಸ್ತು ಮರೆಯಬೇಡ।
ಪರತರಾನಂದವನು ಬಿಡಲಿ ಬೇಡ ॥
ಪರರು ಎನ್ನವರೆಂದು ಭೇದ ಮಾಡಲಿ ಬೇಡ।
ಪರಕೆ ಪರತರವಾದ ಪರವಸ್ತು ನೀನು ॥ ೧ ॥

ಕೋಪ ತಾಪವು ಬೇಡ ಕೋಪದವರೆನಬೇಡ।
ಕೋಪದವರ ಕೂಡ ಸಹವಾಸ ಬೇಡ ॥
ಕೋಪತಾಪವ ಮೀರಿ ಸೋಪಾನವನೇರಿ।
ಭೂಪ ಚಿದ್ರೂಪನು ತಾನೆ ಆಗಿ ॥ ೨ ॥

ಶಾಂತ ಗುರುವಿನ ಹೊಂದಿ ಶಾಂತಗಣದೊಳಗಾಡಿ।
ಶಾಂತನಾಗಿದ್ದರೆ ಶಾಂತಿಯಹುದು ॥
ಶಾಂತ **ನಿರುಪಾಧಿಯ** ಕಾಂತಿಯೊಳು ಮನ ಮುಳುಗಿ।
ಶಾಂತ ಸರ್ವಾಂತರ್ಯಾಮಿಯಾಗಿ ॥ ೩ ॥

೪

ಒಂದು ಹಿರಿದಾದ ಕೃಷಿರೂಪಕ

(ರಾಗ - ಸುರಟಿ, ತಾಲ - ದಾದರಾ)

ಶರೀರವೆಂಬುವ ಹೊಲನ ಹಸನ ಮಾಡಿ।
ಪರತತ್ವ ಬೆಳೆಯನು ಬೆಳೆದುಣ್ಣಿರೊ ॥ ಪ ॥

ಶಮ ದಮ ಎಂದೆಂಬ ಎರಡೆತ್ತುಗಳ ಹೂಡಿ।
ವಿಮಲ ಮಾನಸವ ನೇಗಿಲನೆ ಮಾಡಿ॥
ಮುಮುಕಾರವೆಂದೆಂಬ ಕರಿಕೆಯನು ಕಳೆದು।
ಸಮತೆ ಎಂದೆಂಬ ಗೊಬ್ಬರವ ಜೆಲ್ಲಿ ॥ ೧ ॥

ಗುರುವರನುಪದೇಶವೆಂಬ ಬೀಜವ ಬಿತ್ತಿ।
ಮೆರೆವ ಸಂಸ್ಕಾರ ವೃಷ್ಟಿಯ ಬಲದಿ॥
ಆರಿವೆಂಬ ಪೈರನು ಬೆಳೆಸುತೆ, ಮುಸುಕಿರ್ದ।
ದುರಿತ ದುರ್ಗುಣವೆಂಬ ಕಳೆಯ ಕಿತ್ತಿ ॥ ೨ ॥

ಸ್ಥಿರಮುಕ್ತಿ ಎಂದೆಂಬ ಧಾನ್ಯವ ಬೆಳೆದುಂಡು।
ಪರಮಾನಂದದೊಳು ದಣ್ಣನೆ ದಣಿದು॥
ಗುರುಸಿದ್ಧನಡಿಗೆರಗುತ್ತೆ ಭವವೆಂಬ।
ಬರುವನು ತನ್ನ ಸೀಮೆಗೆ ಕಳುಹಿರೊ ॥ ೩ ॥

೫

ಮೊದಲಿನ ಭಕ್ತಿಯು ಬದಲಾಗದಿರಲಿ! ಆತ್ಮಾನಂದವು ಲಭಿಸುವವರೆಗೆ ಸಾಧನವು ಎಡೆಬಿಡದೆ ನಡೆಯಲಿ!

(ರಾಗ-ದೇಸ, ತಾಲ-ದಾದರಾ)

ತಿಳಿಯಬೇಕು। ನಿಜಸುಖದ ನಿಲಯ ಸಹಜಾನಂದ ॥ ಪ ॥
ಮೊದಲ ಭಕ್ತಿಗೆ। ಬದಲವಾಗದೆ॥

ಮಧುರ ವಚನದಲ್ಲಿ ಮನಸು।
ಕದಲದೇಕ ರೂಪವಾಗಿ ॥ ೧ ॥

ಸುಳುವು ಆರಿವುದೈ। ಒಳಗೆ ಮರೆವುದೈ॥
ಜಳಜಳಾದ ಮನದಿ ಬ್ರಹ್ಮ-।
ನಾಳದೊಳಗೆ ಸತ್ಯವನ್ನು ॥ ೨ ॥
ಗುರುಬೋಧದಿ। ಅರಿತು ಮುದದಿ॥

ಪರಿಪರಿಯ ವಿಕಲ್ಪನಳಿದು।
ನಿರುಪಾಧಿಯಾಗುವ ಕೀಲ ॥ ೩ ॥

೬

ದೈವಿ ಪರುಷವು ಅಂತರಂಗದಲ್ಲಿ ನೆಲೆಸಿರುವಾಗ ಬೇರೆಯುವರೆದುರು ಸೆರಗೊಡ್ಡುವದೇಕಯ್ಯ?

(ರಾಗ-ದೇಸ, ತಾಲ-ದೀಪಚಂದಿ)

ಏನು ಹೇಳಲಿ ಎನ್ನ ಅಜ್ಞಾನವಶದಿಂದ । ನಾನು ನನ್ನನು ಮರೆತೆ ॥ ಪ ॥

ನಾನಾ ಜನ್ಮವ ತಿರುಗಿ ತಿರುಗಿ । ಹೀನ ಮನೆ ಸಂಸಾರಕಾಗಿ ॥
ಶ್ವಾನಸೂಕರನಂತೆ ಮನೆಮನೆ । ಖೂನವಿಲ್ಲದೆ ವ್ಯರ್ಥ ತಿರುಗಿದೆ ॥ ಅ.ಪ. ॥

ಆತ್ಮನ ಅರಿಯದೆ ಯಾತಕು ಬರದಾದೆ । ಭೂತಪಂಚತತ್ವ ದೇಹವನು ಮೆಚ್ಚಿ ।
ಏತರಿಂದಲಿ ಬಂದಿತೆನಗಿದು । ಜೀವಶಿವರೆಂದೆಂಬ ಭೇದವು ।
ಮಾತುಮಾತಿಗೆ ಶಬ್ದ ಸೂತಕ । ಪಾತಕದೊಳು ಮುಳುಗಿಹೋದೆ ॥ ೧ ॥

ಭಾನುಕೋಟಿಪ್ರಕಾಶ ಬ್ರಹ್ಮಾಂಡ ತುಂಬಿ । ತಾನಾಗಿ ಹೊಳೆಯುತದೆ ॥
ಏನು ಕಾರಣ ಕಾಳಕತ್ತಲೆ । ಮಾಯಮುಸುಕು ತೋರಗೊಡದಿದು ।
ನಾನು ನೀನೆಂದೆಂಬ ಭೇದವು । ಏನು ಕಾರಣ ತಿಳಿಯಗೊಡದಿದು ॥ ೨ ॥

ಪರುಷವು ತನ್ನಲ್ಲಿ ಪರಿಪೂರ್ಣವಿರಲಿಕ್ಕೆ । ಸೆರಗೊಡ್ಡಿ ಬೇಡುವರೆ ಬಡವರನು ॥
ಹರನು ತಾನೊಂದಾದ ಮೇಲೆ । ನರರ ಬಾಧೆಗೆ ಸಿಲುಕುದೇಕೆ ।
ಗುರು **ಕೂಡಲೂರೇಶನ** । ಕರುಣವಿಲ್ಲದೆ ಚರಣ ಕಾಣವು ॥ ೩ ॥

ಪ್ರಕರಣ ಐದು

ಸದ್ಗುರುವಿನ ಸ್ವಭಾವ

೧

ದೇವ ಸದ್ಗುರುಗಳ ಅಭೇದ

(ರಾಗ-ಭೂಪ, ತಾಲ-ದೀಪಚಂದಿ)

ದೇವನಲ್ಲವೇನೋ । ಸದ್ಗುರು ಮಹಾ- । ದೇವನಲ್ಲವೇನೋ ॥ ಪ ॥
ಆದಿಯೊಳು ಸಿದ್ಧರು । ಹೋದ ದಾರಿಯ ತೋರಿ ।
ಭೇದವ ಬಿಡಿಸಿದ । ಸಾಧುಮೂರುತಿ ಗುರು ॥ ಅ.ಪ. ॥

ನರಜನ್ಮದೊಳಗೆ ಬಂದು । ಪ್ರಪಂಚದ । ಕಡಲಮಧ್ಯದಲಿ ನಿಂದು ॥
ಅರಿತು ಮರೆತು ಒಮ್ಮೆ । ಗುರುವೆಂದು ನೆನೆದರೆ ।
ಗುರುತಿಟ್ಟು ಅವರಿಗೆ । ಪರತತ್ವ ತೋರಿದ ॥ ೧ ॥

ಆಶಾಪಾಶವ ಬಿಡಿಸಿ । ಮಾಡಿದ ಬಹು । ದೋಷಕರ್ಮವ ಕೆಡಿಸಿ ॥
ನ್ಯಾಸಧ್ಯಾಸದಿ ಜಪ । ಮಾಡೆಂದು ಬೋಧಿಸಿ ।
ಪ್ರಕಾಶ ತೋರಿದ । ಈಶ ಮಹೇಶನು ॥ ೨ ॥

ಭಕ್ತಿಭಾವವ ನೋಡದೆ । ನಂಬಿದವರಿಗೆ । ಮುಕ್ತಿಯ ಪಾಲಿಸುವ ॥
ಕರ್ತು ಸದ್ಗುರು ಭವ- । ತಾರಕ ದೇವನು ।
ಪ್ರತ್ಯಕ್ಷನಾದಂಥ । ಪರಬ್ರಹ್ಮರೂಪನು ॥ ೩ ॥

೨

ಸದ್ಗುರುವಿನ ಅನುಗ್ರಹದ ರೀತಿ–ಪರಿಣಾಮಗಳು

(ರಾಗ-ಕಾಫಿ, ತಾಲ-ಕೇರವಾ)

ಎಂಥಾ ಗಾರುಡಿಗಾ ಸದ್ಗುರು ॥ ಪ ॥
ಗುರುವಿನ ನಂಬಿ ನಾ ಗುಣವೆಲ್ಲ ಕಳಕೊಂಡೆ ॥ ಅ.ಪ. ॥

ಶರಣು ಮಾಡೆಂದರೆ ಶರಣು ಮಾಡಲು ಪೋದೆ ।
ಕರದೊಳು ಇದ್ದ ನಿಜಭೂತಿ ॥
ಶಿರದ ಮೇಲೆ ಎನ್ನ ಮೈಮೇಲೆ ಎಳೆಯಲು ।
ಶರೀರವ ಮರೆತು ನಾ ಸಾಕ್ಷಿಯಾದೆನು ॥ ೧ ॥

ಯಾರೂ ಇಲ್ಲದ ನೋಡಿ ಬೇರೆನ್ನ ಕರೆದೊಯ್ದು ।
ಮುರಕೆವಿಯೊಳು ಇಟ್ಟು ಮುಂತ್ರಿಸಿದ ॥
ನಾರಿ ಬದುಕು ಮನೆ ಮಕ್ಕಳನೆಲ್ಲ ।
ಸೇರಿ ಸೇರದಂತೆ ಮಾಡಿದನೇ ಗುರು ॥ ೨ ॥

ಭವಗೇಡಿ ಕುಲಗೇಡಿ ಸಂಗಗೇಡಿಯಾದೆ ।
ಇವರ ವಿಶ್ವಾಸದ ಫಲದಿಂದಾಗಲೆ ॥
ಇವರ ಮೇಲೆ ಎನ್ನ ವ್ಯಾಕುಲ ಹತ್ತಲು ।
ವ್ಯವಹಾರವೆಂಬುದು ಎಡವಟ್ಟಾಯಿತು ॥ ೩ ॥

ಮುಂತ್ರಿಸಿದಾಗಳೆ ಮರುಳು ಎನ್ನ ಮನ ।
ಮುಂತ್ರ ತಂತ್ರಕೆ ಬಗ್ಗಿತಲ್ಲ ॥
ಮುಂತ್ರದ ಮಹಿಮೆಯ ಮಹಾಮಹಿಮನ ಕೈ ।
ಮಾಂತ್ರಿಕರೊಳು ಬಲು ದೊಡ್ಡವನೆ ಗುರು ॥ ೪ ॥

ಇವರ ನಂಬಿದ ಮೇಲೆ ಇವರಂತೆ ಆಗದೆ ।
ಭುವನಕ್ಕೆ ಬಂದದ್ದು ಫಲವೇನು ॥
ವಿವರಿಸಿ ಹುರುಳಿಲ್ಲ ಹೇಳು ಕೇಳುವದೇನು ।
ಭುವನ ರಕ್ಷಕ **ಚಿದಾನಂದ** ತಾನಾದನು ॥ ೫ ॥

೩
ವಿಷಯಸರ್ಪದ ವಿಷವನ್ನು ಕಳೆವ ಸದ್ಗುರು

[ರಾಗ–ತೋಡಿ (ಕರ್ನಾಟಕಿ), ತಾಲ-ದಾದರಾ]

ಹಾವು ತುಳಿದೆನೆ ಮಾನಿನಿ ॥ ಪ ॥

ಹಾವು ತುಳಿದು ಹಾರಿ ನಿಂತೆ । ಜೀವ ಕಳವಳಗೊಂಡಿತು ಗೆಳತೀ ।
ಭಾವ ಸ್ಮೃತಿಯು ತಪ್ಪಿ ಮನದಿ । ದೇವ ನೀನೆ ಗತಿಯು ಎಂದೆ ॥ ೧ ॥

ಹರಿಗೆ ಹಾಸಿಗೆಯಾದ ಹಾವು । ಹರನ ಕೊರಳೊಳಿರುವ ಹಾವು ॥
ಧರೆಯ ಹೊತ್ತು ಮೆರೆವ ಹಾವಿನ । ಶಿರವ ಮೆಟ್ಟಿದೆ ಶಿವನ ದಯದಿ ॥ ೨ ॥

ಬೋಧಾನಂದದಿಂದ ಬರುವ । ಹಾದಿಯಲ್ಲಿ ಮಲಗಿ ಇರುವ ॥
ನಾದದಿಂದ ಧ್ವನಿಯ ಕೊಡುವ । ಮೋದರೂಪ ಕ್ರೋಧರೂಪ ॥ ೩ ॥

ಘೋರತರದ ಉರಗವದರ । ಕೋರೆಹಲ್ಲು ಮುರಿದರಿಂದ ॥
ಸತ್ಯ**ಶಿಶುನಾಳಧೀಶನೆ** ಸೇವಕಗೆ । ಕತ್ತಲೆಯಲ್ಲಿ ಕಾಲಿಗೆ ಸುತ್ತಿ ಕೊಂಡ ॥ ೪ ॥

೪

ಗೊರಲಿಗಳ ಗುಂಪಿನಿಂದ ತಿನ್ನಲ್ಪಟ್ಟ ವಿಷಯಸರ್ಪ

(ರಾಗ–ದೇಸ, ತಾಲ–ಕೇರವಾ)

ಹಾವು ಕಚ್ಚಿತವ್ಮಾ। ದಾರಿಗೆ ತಿಳಿಯದಿದರ ಮಹಿಮಾ ॥ ಪ ॥
ಹಾವಿನ ವಿಷವು ಎನಗೇರಿತವ್ಮಾ। ದೇವರ ಕರುಣೆಯಿಂದ
ನಾನುಳಿದೆನವ್ಮಾ ॥ ಆ.ಪ. ॥

ಮೊರಿದ ಹಾವವಮ್ಮಾ। ಮೂರು ಲೋಕ ನುಂಗಿತವಮ್ಮಾ॥
ಬೇಸರಿಲ್ಲದೆ ಮಾಡ್ಯಾನ ಬ್ರಹ್ಮಾ। ನೆನಪಾದರೆ ಮೈ ಆಂಬುದು
ಜುವಮ್ಮಾ ॥ ೧ ॥

ಮೂರು ಮೊಳದ ಹುತ್ತು । ಒಂಭತ್ತು ರಂಧ್ರಗಳದಕಿತ್ತು ॥
ಯಾವ ರಂಧ್ರದಿಂದ ಹಾವು ಸೇರಿತು। ಒಳಗಿನ ಗೊರಲಿ
ಎತ್ತ ಹೋಯಿತು ॥ ೨ ॥

ಬಾಲ ಮೇಲಕೆತ್ತಿ । ಭೋರೆಂಬ ಶಬ್ದ ನುಡೀತೈತಿ ॥
ಮಣಿಪುರ ಕಮಲದಲಿ ಮಲಗಿಕೊಂಡೈತಿ। ಬೆಲೆಯಿಲ್ಲದ
ರತ್ನ ಆದರ ಹೆಡೆಯೊಳಗೈತಿ ॥ ೩ ॥

ಗೊಲ್ಲನ ಹುಡುಕಿದೆವಮ್ಮಾ। ಗೊಲ್ಲನು ಮಂತ್ರ ಹೇಳಿದ ಪ್ರಣವು ॥
ಗೊಲ್ಲನ ಮಂತ್ರಕೆ ಅಂಜಿತು ಹಾವಾ। ವಿಷದ ಕೊಳವಿ
ತೊಳೆದು ಹೋದಿತೋ ಕರ್ಮಾ ॥ ೪ ॥

ಸಣ್ಣ ಗೊರಲಿ ಬಂತು। ಹಾವಿನ ಹುತ್ತು ಸಹಿತ ನುಂಗಿತು ॥
ಯಾವ ಸ್ಥಾನದಲಿ ಆ ಗೊರಲಿ ಇತ್ತು। ಮೂಲ ಪ್ರಣವ
ಬಲ್ಲವಗೇ ಗೊತ್ತು ॥ ೫ ॥

ಗೊರಲಿ ಹಾವಿಗೆ ನುಂಗಿ। ಧರೆಯೊಳು ಮೆರೆಯುವ ಶಿರಸಂಗಿ ॥
ದೊರೆ ಶ್ರೀಗುರು ಬಲಭೀಮು ಯೋಗಿ। ಆತನ ಚರಣಕೆರಗಿದರೆ
ಸ್ವರ್ಗಕೆ ಸಾಗೀ ॥ ೬ ॥

೫

ಕರುಣವ ದಯಪಾಲಿಸಲು ಗುರುವಿಗೆ ಕರುಳಿನ ಕರೆ !

(ರಾಗ–ತಿಲಂಗ, ತಾಲ–ತ್ರಿತಾಲ)

ಕರುಣಿಸೋ ಗುರು ಎನಗೆ।
ಅರಗಳಿಗೆ ನೀ ಎನ್ನ ಹೃದಯದಿಂದಗಲದ ಹಾಂಗೆ ॥ ಪ ॥
ಕಣ್ಣಿನೊಳಗೆ ನಿನ್ನ ಕಾಣದಿದ್ದರೆ ಪೂರ್ಣ।
ಪ್ರಾಣ ನಿಲ್ಲದೋ ನಿಮಿಷಾರ್ಧವಿಲ್ಲಿ ॥

ಕ್ಷಣಕ್ಷಣಕ್ಕೊದಗಿ ನೀ ಋಣ ತೋರದಿದ್ದರೆ |
ತನು ವಿಕಳಿತವಾಗಿ ಕ್ಷೀಣ ಹೊಂದುವದೋ ॥ ೧ ॥
ಬೇಡುವದೊಂದೆ ನಾ ಬಿಡದೆ ನಿಜರೂಪವ |
ರೂಢಿಯೊಳಗೆ ದೃಢ ನಿಶ್ಚಯದಿ ॥
ಎಡಬಲ ನೋಡದೆ ಕಡಲು ಹೊಕ್ಕಿಹೆ ನಿನ್ನ |
ಕಡೆಗಾಣಿಸೋ ಎನ್ನೊಡೆಯನೆ ಪಿಡಿದು ಕೈ ॥ ೨ ॥
ಸುತ್ತು ಸುಳಿಯುತಲೆನ್ನ ಚಿತ್ತದಿಂದಗಲದೆ |
ನಿತ್ಯವಾಗಿರೋ ಹೃತ್ಕಮಲದಲಿ ॥
ಹೆತ್ತ ತಾಯಿಯೋಪಾದಿ ತುತ್ತು ತುತ್ತಿಗೆ ಒಮ್ಮೆ |
ಹತ್ತರಿದ್ದು ಸಂತತ ಸಲಹೊ **ಮಹಿಪತಿಗೆ** ॥ ೩ ॥

೬

ಸದ್ಗುರುವಿನ ಕರುಣಕ್ಕೆ ಎಣೆಯೆ ಇಲ್ಲ

(ರಾಗ-ದರಬಾರಿ, ತಾಲ-ದೀಪಚಂದಿ)

ಗುರುರಾಯನಂಥ ಕರುಣಾಳು | ಕಾಣೆ ನಾ ಈ ಜಗದೊಳು ॥ ಪ ॥
ಏನೊಂದರಿಯದ ಪಾಮರ ನಾನು |
ಜ್ಞಾನಭಕುತಿವೈರಾಗ್ಯರಹಿತನು |
ತಾನೊಲಿದೀಗೆನ್ನನುದ್ಧರಿಸಿದನು ॥ ೧ ॥
ಮಾಡುವ ಘನ, ತುಸು ತಪ್ಪನು ಹಿಡಿವ |
ಬೇಡಿಸಿಕೊಳ್ಳದೆ ನೀಡುತ ಪೊರೆವ |
ರೂಢಿಗಾದನೋ ಇಹಪರದೊಡೆಯ ॥ ೨ ॥
ತನ್ನವನೆನಿಸಿದ ಮಾತಿಗೆ ಕೂಡಿ |
ಮನ್ನಣೆ ಇತ್ತನು ಅಭಯವ ನೀಡಿ |
ಇನ್ನೇನು ಹೇಳಲೀ ಸುಖ ನೋಡಿ ॥ ೩ ॥
ತನ್ನನುಭವ ನಿಜ ಮಾತಿನ ಗುಟ್ಟು |
ಎನ್ನೊಳು ಸರಿ ಘನ ತೋರಿಸಿ ಕೊಟ್ಟು |
ಧನ್ಯನ ಮಾಡಿದ ಸೇವೆಯೊಳಿಟ್ಟು ॥ ೪ ॥
ತಂದೆ ತಾಯಿ ಬಂಧುಬಳಗೆನಗಾಗಿ |
ಇಂದು **ಸದ್ಗುರು ಮಹಿಪತಿ** ಮಹಾಯೋಗಿ |
ಕಂದನ ಸಲಹೋ ನೀ ಲೇಸಾಗಿ ॥ ೫ ॥

೭

ಸದ್ಗುರು ಕೃಪೆಯಿಂದುಂಟಾಗುವ ಯೌಗಿಕ ಪರಿಣಾಮಗಳು

(ರಾಗ-ಖಮಾಜಿ, ತಾಲ-ಕೇರವಾ)

ಮಂಗಲವಾಗಿಹುದು ಸದ್ಗುರುವಿಗೆ।
ಕಂಗಳ ಕೊನೆಯಲಿ ಥಳ ಥಳ ಹೊಳೆಯುವ ॥ ಪ ॥

ತಿಂಗಳ ಬೆಳಕಿನ ತಿಳಿರಸ ಉಕ್ಕುವ ॥ ಅ.ಪ. ॥

ಆರು ಚಕ್ರವ ಮೀರಿ। ಸೂಕ್ಷ್ಮ।
ದ್ವಾರದೊಳಗೆ ಸೇರಿ ॥
ಏರಿ ಸಾಸಿರದಳ ಪದ್ಮಸಿಂಹಾಸನದಿ।
ಭೂರಿ ಬ್ರಹ್ಮಾನಂದ ಪದವಿಯ ಸೇರುವ ॥ ೧ ॥

ವಿರತಿ ಎಂಬುವ ಬತ್ತಿ। ಭಕ್ತಿ।
ಎರಕವಾಗಿಹ ಸುಘೃತ ॥
ಎರಡು ಒಂದಾಗಲು ಅರಿವೆಂಬ ಜ್ಯೋತಿಯು।
ಉರಿಯಲು ತಾಮಸ ಕತ್ತಲೆ ಕಳೆದ ॥ ೨ ॥

ರವಿಶಶಿಗಳ ತೆರದಿ। ಬೆಳಗುವ।
ಪ್ರವಿಮಲ ಚಿತ್ಕಳೆಯ ॥
ಒಳಹೊರಗೆರಡೆಂಬುವದನೇ ಅರಿಯದೆ।
ಅವಿರಳ **ಗುರುಮಹಾಲಿಂಗನ** ತೇಜದ ॥ ೩ ॥

ಪ್ರಕರಣ ಆರು

ಸದ್ಗುರುವಿನ ಕಾರ್ಯ

೧

ಸದ್ಗುರುನಿನ ತತ್ವಜ್ಞಾನ ಹಾಗೂ ಮೂಲ್ಯಜ್ಞಾನ ವಿಷಯಕ ಲಕ್ಷಣಗಳು

(ರಾಗ-ಕಾಫಿ, ತಾಲ-ದಾದರಾ)

ಯೋಗಿ ಬಂದನೋ ಶಿವಯೋಗಿ ಬಂದನೋ ॥ ಪ ॥
ಭೋಗ ಸುಖವ ತ್ಯಾಗ ಮಾಡಿ ।
ಆಗಮೋಕ್ತದಿಂದ ನಡೆವ ॥ ಅ.ಪ. ॥

ತತ್ವಮಸಿ ಮಹಾವಾಕ್ಯ ।
ತತ್ವ ತಿಳಿಸಿ ಮಾಯ ಮೋಹ ॥
ಕತ್ತಲೆಯ ಕಡಿದು ಚಿತ್ತ ।
ನಿತ್ಯದಲ್ಲಿ ನಿಲಿಸುವಂಥ ॥ ೧ ॥

ತಮ್ಮ ತಾವು ಮರೆತು ಜನರು ।
ಹಮ್ಮಿನೊಳಗೆ ಬಿದ್ದರಿವರು ॥
ಕರ್ಮವನ್ನು ಕಡಿದು ಪರ- ।
ಬ್ರಹ್ಮವನ್ನು ತೋರಿಸುವಂಥ ॥ ೨ ॥

ತಂದೆ **ಭವತಾರಕನ** ಪಾದ ।
ಹೊಂದಿದವರಿಗೆಲ್ಲ ಪರಮಾ- ।
ನಂದ ಪದವಿ ಕೊಟ್ಟು ದಯಾ- ।
ಸಿಂಧು ಮುಕ್ತಿ ಪಡಿಸುವಂಥ ॥ ೩ ॥

೨

ದೇವ-ಗುರುಗಳಲ್ಲಿಯ ಅನನ್ಯ ಭಕ್ತಿಯು ನಿನ್ನನ್ನು ವಿಷಯದಾಸ್ಯದಿಂದ ಮುಕ್ತಗೊಳಿಸುವದು

(ರಾಗ-ಭೂಪ, ತಾಲ-ಕೇರವಾ)

ಸೈ ಶಬಾಸ ಗಬರು ದರೋಡೆ ಬರತದ ।
ಅಬಬ ನೋಡಿದರ ಅರ್ಭಾಟ ॥ ಪ ॥

ಸಬದ ಐತಿದು ಸಾಧುರ ಪುಣ್ಯ ।
ಶುಭ ನುಡೀತದ ಶಕುನದ ಹಕ್ಕಿ ॥ ಅ.ಪ. ॥

ಐದು ಮಂದಿ ನೆಲಗಳ್ಳರು ಕೂಡಿ |
ಸಾರಿ ಆತ್ಮದಲಿ ಸೇರುವರು ||
ಐಕ್ಯದಿಂದ ಶ್ರೀ ಗುರುವಿನ ನೆನೆದರೆ |
ಐದು ಮಂದಿ ಬಿಟ್ಹೋಡುವರು ||೧||
ಎಂಟು ಹತ್ತು ಮಂದಿ ಬಂಟರು ಕೂಡಿ |
ಮುತ್ತಿಗೆ ಹಾಕಿ ನಿನ್ನ ಕೆಡಹುವರು ||
ಸತ್ಯನಾದ ಶ್ರೀಗುರುವಿನ ನೆನೆದರೆ |
ಹತ್ತು ಮಂದಿ ಬಿಟ್ಹೋಡುವರು ||೨||
ನೋಡಿ ಒಗಿಯೋ ಕಾಡವು ಹುಲಿಗಳು |
ಬೇಡಿದ ಪದಾರ್ಥ ದೊರಕುವದು ||
ಕೂಡಿ ಭಜಿಸೊ **ಶ್ರೀ ಚಿದಾನಂದನ** |
ಮೂಲ ಮಂತ್ರ ಪ್ರಣವ ದೊರಕುವದು ||೩||

೩

ಸದ್ಗುರುವಿನ ಕರುಣಾಗ್ನಿಯೆ ಜೀವನದಲ್ಲಿಯ ಒಂಟ್ಟ, ಜೋಡು ಹಾಗೂ ಮೂಮುಖ ಮುಳ್ಳುಗಳನ್ನು ಸುಡಬಲ್ಲದು

(ರಾಗ-ಭೂಪ, ತಾಲ-ಕೇರವಾ)

ಏನ ಭರಾ ನಟಿತಪ್ಪಾ ಎನಗೆ ಮುಳ್ಳಾ |
ಬ್ಯಾನಿ ತಾಳ ಹೇಳಲಾರೆನಪ್ಪಾ ಇದರ ಘೋಳಾ ||ಪ||
ಹಡ್ಡಿ ನೋಡಿದರ ಸಿಗವಲ್ಲದಂಥಾ ಮಾಯಾದ ಮುಳ್ಳಾ |
ಇದು ಬಹಳ ಮಂದಿಗೆ ಮುರಿದು ಮಾಡೆತೆಪ್ಪಾ ಮುಳ್ಳಾ ||ಆ.ಪ.||
ಮಾನಾಭಿಮಾನ ಎರಡು ಜೋಡ ಮುಳ್ಳಾ |
ಎನ್ನ ಕೆವ್ಯಾಗ ಬಡಿದು ಕಂಡಿತಪ್ಪಾ ಜಿಹ್ವಾಳಾ ||
ಸರ್ರಾರ್ರಾರಾ ವಿಷವೇರಿ ಆಂಗಾಲಾ |
ತಲ್ಯಾಗ ಜುಮ್ಮ ಹಿಡಿದು ಅಳಕಿತಪ್ಪಾ ನಾಭಿಸ್ಥಲಾ ||೧||
ಸ್ವಾದರುಜಿವೆಂಬೆರಡು ಜೋಡಮುಳ್ಳಾ |
ಇವು ಬಹಾಳ ಮಂದಿಗು ಮುರಿದು ಮಾಡ್ಯಾವಪ್ಪಾ ಘೋಳಾ ||
ನಾಲಗಿಯೊಳಗ ಮುರದೀತಪ್ಪಾ ಬ್ಯಾಲದ ಮುಳ್ಳಾ |
ಎನ್ನ ಹೊಟ್ಟಯೊಳಗ ಉರುಪ ಬಿಟ್ಟದೆಯಂಥಾ ಕಾಳಾ ||೨||
ಹೆಣ್ಣು ಹೊನ್ನು ಮಣ್ಣು ಇವು ಮೂರು ಮುಳ್ಳಾ |
ಎನ್ನ ಕಣ್ಣೊಳು ಚುಚ್ಯಾವಪ್ಪಾ ಎಂಥಾ ಕಾಳಾ ||
ಎಲ್ಲಾಕಿಂತಾ ದೊಡ್ಡು ಇವು ಡೊಣ್ಣಿ ಮುಳ್ಳಾ |
ಮೂರು ಲೋಕಕೆಲ್ಲಾ ಮುರಿದು ಮಾಡ್ಯಾವಪ್ಪಾ ಖುಳ್ಳಾ ||೩||

ಬೇಕಾಗಿ ಮುರಸಿಕೊಂಡೀರಪ್ಪಾ ನೀವು ಮುಳ್ಳಾ ।
ನಿಮ್ಮ ಕಾಲ ತಾವೆ ಬೇಲ್ಯಾಗ ಹೋಗಿ ಹಾಯ್ಲಿಲ್ಲಾ ॥
ತಾ ಮಾಡಿ ನನಗ ತಂದು ಇಟ್ಟೆ ಕಾಳಾ ।
ನಾನು ಯಾರ ಮುಂದೆ ಹೇಳಲೆಪ್ಪಾ ನನ್ನ ಘೋಳಾ ॥
ಲೈನ ದಾರಿಲಿ ನಾಯಿಟ್ಟು ನಂದ್ಯಾಳಾ ।
ಗುರು ಸಂಗತೀಲಿ ಸುಟ್ಟೀನಪ್ಪಾ ಇಷ್ಟು ಮುಳ್ಳಾ ॥ ೪ ॥

೪

ಸದ್ಗುರುವು ಸಂಕಟಗಳಲ್ಲಿ ರಕ್ಷಿಸುವ

(ರಾಗ-ಜಂಗಲಾ, ತಾಲ-ಕೇರವಾ)

ಗುರುವೆ ನಿಮ್ಮ ಸ್ಮರಣೆಯ ನಾನು ಮರೆಯಲಾರೆನು ॥ ಪ ॥
ಮರೆಯಲಾರೆ ಮರೆಯಲಾರೆ ಮರೆತಿರಲಾರೆನು ॥ ಅ.ಪ. ॥
ಕಾಲಹರಣ ನೀಲಕಂಠ ಪಾಲಿಸೆನ್ನನು ।
ಬಾಲಕರಿಗೆ ಅಭಯ ಕೊಟ್ಟು ಸಲಹು ಶಂಕರನೇ ॥ ೧ ॥
ತನುವ ಮನವ ಧನವ ನಿಮಗೆ ಒಪ್ಪಿಸಿರುವೆನೋ ।
ಮನವ ನಿಮ್ಮ ಪಾದದಲ್ಲಿ ನಿಲ್ಲಿಸಿರುವೆನೋ ॥ ೨ ॥
ಬಂದ ದುರಿತ ದೂರಮಾಡೋ ಇಂದು-ಶಂಕರಾ ।
ತಂದೆ ಭಜಕ ಭಕ್ತಹರಳ-ದೋಷಪರಿಹಾರಾ ॥ ೩ ॥
ಧರೆಯೊಳು ಹಿರಿಯ ಹರಿದಾಸ ಪುರಂದರದಾಸನೇ ।
ಮೆರೆಯುವ ದೊಡ್ಡ ಪೇಟಿ ಬಸವ ಗುರುವರ್ಯನೇ ॥ ೪ ॥

೫

ಪ್ರಲೋಭನಗಳಿಂದ ಸದ್ಗುರು ಪರಾವೃತ್ತಗೊಳಿಸುವ

(ರಾಗ-ಭೈರವ, ತಾಲ-ದೀಪಚಂದಿ)

ಏನು ಅನ್ಯಾಯ ತಿಳಿಯದು ದೇವಾಧಿದೇವಾ ।
ಅನ್ಯಾಯ ಕ್ಷಮಿಸದೆ ಎನ್ನ ಒಪ್ಪಿಸಿಕೊಟ್ಟೆ ದೇವಾ ॥ ಪ ॥
ನಿಮ್ಮ ಬೋಧವ ಕೇಳಿ ಸಾರಾಸಾರ ವಿಚಾರದೊಳಗೆ ಆಗಿ ।
ನಿಮ್ಮ ಪುಣ್ಯದಿಂದ ಅನ್ಯಾಯ ನಾ ಮಾಡಿಲ್ಲ ।
ನ್ಯಾಯ ಅನ್ಯಾಯವು ನಿಮಗೆ ಒಪ್ಪಿತು ದೇವಾ ॥ ೧ ॥
ಎನ್ನ ಮಾಯಾ ಎನಗೆ ಶಸ್ತ್ರವನೆತ್ತಿ ಹೊಡೆವ ।
ಸಮಯಕ್ಕೆ ಸಾಕ್ಷಾತ್ಕಾರದಲೆ ಸ್ವಾಮಿ ತಾನೆ ನಿಂತ ।
ಅವನ ಧ್ಯಾನ ಮಾಡೆಂದು ತಿಳಿಸಿ ಹೇಳಿದಿ ದೇವಾ ॥ ೨ ॥
ಉಪದಿ ಪ್ರಭು ನಿಮ್ಮ ಸುಳುವು ಸೂಕ್ಷ್ಮವನು ಕೂಡಿ ।
ನಿಮ್ಮ ಹೊರತು ನಾನಿನ್ಯಾರಿಗೆ ಉಸುರಲಿ ದೇವಾ ॥ ೩ ॥

೬

ಸದ್ಗುರುವು ಪೂರ್ಣ ಆತ್ಮರೂಪವನ್ನು ತೋರಿಸುವ

(ರಾಗ-ಬಿಲಾವಲ, ತಾಲ-ತ್ರಿತಾಲ)

ಹ್ಯಾಂಗೆ ತೀರೀತು ನಿಮ್ಮುಪಕಾರ। ಇದು ಅಪರಂಪಾರ ॥ ಪ।
ಹ್ಯಾಂಗೆ ಹಿಂಗಿಸಲಿ ಜನ್ಮದ ಆವತಾರ। ಗುರುರಾಯಾ ಗಂಭೀರಾ ॥ಅ.ಪ॥
ಭೂತಪಂಚಕ ದೇಹವನು ಧರಿಸಿ। ನೂತನ ತನು ತೊಡಿಸಿ।
ದಾತ ಐದಕ್ಷರವನು ಕಲಿಸಿ। ಚಿತ್ತವ ತಾನೊಲಿಸಿ।
ಇತರ ಭಯವ ಪರಿಹರಿಸಿ। ಪ್ರಾರಬ್ಧ ವನೊರಿಸಿ ॥ ೧ ॥
ಸಕಲಸ್ವರೂಪ ತಾನಾಗಿ। ನಾನೆಂಬುದ ನೀಗಿ।
ಮುಕುರಾನಂದ ಬೋಧಿಸಲಾಗಿ। ನಿಖಿಲ ನಿಸ್ಸಂಗಿ।
ಮುಕ್ತಾಂಗಿಯ ಮುದುವೆಯಾಗಿ। ಸಂತರಿಗೆ ಶಿರಬಾಗಿ ॥ ೨ ॥
ಧರೆಯೊಳು ಕಡಕೋಳ ಕ್ಷೇತ್ರ। ಉಪಮೆಯರಿಯೆನು ಪಾತ್ರ।
ಸುರನರಲೋಕ ವಿಚಿತ್ರ। ಕರುಣಾರಸನೇತ್ರ।
ಸುಕ್ಕಿ ಮೀರಿದ ವಿಚಿತ್ರ। ಮಾಡಿದನು ಪವಿತ್ರ ॥ ೩ ॥

೭

ಪರಮಾತ್ಮನ ಬಗೆಬಗೆಯ ರೂಪಗಳ ದರ್ಶನವೇ ಮುಕ್ತಿ

(ರಾಗ-ದುರ್ಗಾ, ತಾಲ-ತ್ರಿತಾಲ)

ಸಾರಿ ಜೆಲ್ಲಿದೆ ಮುಕುತಿ। ಗುರು।
ತೋರಿಸಿದಲ್ಲದೆ ಕಾಣಿಸದಣ್ಣಾ ॥ ಪ ॥
ವೇದದ ಮೊದಲಿನ ಮೂಲವಿದು।
ಮೇದಿನಿಯೊಳು ತಾ ತುಂಬಿಹುದು ॥
ಹಾದಿ ಹಾದಿಗೆ ಬಿತ್ತಿಹುದು। ಇದು।
ಸಾಧಕ ಜನರಿಗೆ ಕಾಣುವದಣ್ಣಾ ॥ ೧ ॥
ಎತ್ತ ನೋಡಲೂ ಪರಬ್ರಹ್ಮವಿದು।
ಸುತ್ತಮುತ್ತಲೂ ಸುಳಿಯುವದು ॥
ಮತ್ತೆ ಮತ್ತೆಯಾಗಿ ಕಾಂಬುವದು। ಗುರು-।
ಪುತ್ರರಿಗಲ್ಲದೆ ಕಾಣಿಸದಣ್ಣಾ ॥ ೨ ॥
ಹಿಂದೆ ನೋಡಲು ಬಂದಿಹುದು।
ಮುಂದೆ ನೋಡಲು ನಿಂದಿಹುದು ॥
ಸಂದಿ ಸಂದಿಗೆ ಜಡಿದಿಹುದು। ಆ-।
ನಂದ ಗುಹೇಶ್ವರಲಿಂಗವಿದಣ್ಣಾ ॥ ೩ ॥

ಪ್ರಕರಣ ೨೪

ಗುರು-ಶಿಷ್ಯರ ಸಂಬಂಧ (ಭಾಗ ೧)

೧

ಅಯ್ಯ ! ಗುರುದೇವ ! ನಿನ್ನ ಉಪಕೃತಿಯನ್ನು ಮರೆಯಲಾರೆ !

(ರಾಗ-ದೇಸ, ತಾಲ-ದೀಪಚಂದಿ)

ಗುರುದೇವ ! ನೀ ಮಾಡಿದುಪಕೃತಿಯನು ನಾನು
ಮರೆಯೆನೆಂದಿಗೂ ಇಹಪೊಳು ॥ ಪ ॥

ಪೊಡವಿಯೊಳಖಿಲ ವೇದಾಗಮಶಾಸ್ತ್ರಗಳ ।
ಬಿಡದೆ ಸಾಧಿಸಿದ ವಾದಿಗಳೆಲ್ಲಾ ॥
ಹೊಡೆದಾಡಿ ಕಾಣದಾ ಪರತತ್ವವನು ನೀನು ।
ತಂದೆನ್ನ ಕರಕೆ ಕೊಟ್ಟದರಿಂದೆ ॥ ೧ ॥

ಕಂದಮೂಲಗಳ ಸೇವಿಸಿ ವಾಯುಗಳನೊತ್ತಿ ।
ಬಂಧಿಸಿ ಪಂಚಾಗ್ನಿ-ಮಧ್ಯದಿ ॥
ನಿಂದು ಯೋಗಿಗಳು ನೋಡದಾ ಪರಬ್ರಹ್ಮ ।
ತಂದೆನ್ನ ಕಣ್ಣಿಗೆ ತೋರಿದರಿಂದೆ ॥ ೨ ॥

ತರುಳ ಎನ್ನಯ ಮೇಲೆ ದಯ ಹುಟ್ಟಿ ಶಿವನೆ ।
ಶ್ರೀಗುರುಸಿದ್ಧನೆಂಬ ನಾಮವನಾಂತು ॥
ಗುರುರೂಪದಿಂದೆನ್ನ ಬೋಧಿಸಿ ತನ್ನೊಳು ।
ಬೆರಸುತ್ತೆ ಮೋಕ್ಷವಿತ್ತುದರಿಂದೆ ॥ ೩ ॥

೨

ಸದ್ಗುರುವಿನ ಪ್ರಾರ್ಥನೆ

(ರಾಗ-ಕೇದಾರ, ತಾಲ-ದಾದರಾ)

ದೇವ ! ಹಿರಿಗುರುರಾಯ ! ತಿಳಿಯದೈ ನಿನ ಮಾಯ ।
ಸೆಳೆಯದಿರಲೆನ್ನ ಮನ ಜಗದ ವೈಭವವು ॥
ಭಾವ ಬಲಿಯಲಿ ಧ್ಯಾನದಲಿ ಬೆರೆಯಲೆನ್ನ ಮನ ।
ದೇವದೋರಲಿ ತನ್ನ ದಿವ್ಯ ವೈಭವವ ॥ ೧ ॥

ನಿನ್ನ ನಾಮವ ಮನವು ನಿತ್ಯ ನೆನೆಯುತಲಿರಲಿ ।
ಮೈಯು ಸವೆಯಲಿ ನಿನ್ನ ಸೇವೆಯಲ್ಲಿ ॥

ಮತಿಯು ಹೊಳೆಯಲಿ ನಾಥ, ತೊಳಗಲೆನ್ನಯ ಮಾತು ।
ಕೃತಿಯು ಬೆಳಗಲಿ ನಿನ್ನ ಬೆಳಕಿನಲ್ಲಿ ॥ ೨ ॥
ನಿನ್ನ ಒಲವಿನ ಸೆಲೆಯು ತೊರೆದು ಸುಧೆಯನು ಸುರಿದು ।
ಸಂತತೆನ್ನನು ಪೊರೆದು ಬೆಳೆಸುತಿರಲಿ ॥
ನಿನ್ನ ಕರುಣವೆ ಅನ್ನ ನಿನ್ನ ಕರುಣವೆ ನೀರು ।
ನಿನ್ನ ಕರುಣವೆ ಉಸಿರು ಎನಗಾಗಲಿ ॥ ೩ ॥
ಒಡನೆ ಆಡಿದ ಮಾತು ಮಿಂಚಿನೈಸಿರಿ ತಳೆದು ।
ಸಂಚರಿಸಿ ಬೆಳಕು ಬಲ ನೀಡುತಿರಲಿ ॥
ಹೃದಯದಾಳದ ನುಡಿಯು ಗುಡುಗಿನಾರ್ಭಟದಿಂದ ।
ಗುಡುಗಿ ಎದೆಯಿಂ ದೈನ್ಯ ದೂಡುತಿರಲಿ ॥ ೪ ॥

೩

ಅಯ್ಯ ! ಗುರುರಾಯಾ ! ಘೋರ ರೋಗದಿಂದ ನೀನೆನ್ನ ಕಾಯ್ದೆ !

(ರಾಗ–ಭೂಪ, ತಾಲ–ದೀಪಚಂದಿ)

ಗೋಪಾಲದಾಸ ರಾಯಾ । ನಿನ್ನಯ ಪಾದ ।
ನಾ ಪೊಂದಿದೆನೊ ನಿಶ್ಚಯ ॥ ಪ ॥
ಈ ಪೀಡಿಪ ತ್ರಯ ತಾಪಗಳೋಡಿಸಿ ।
ಕೈಪಿಡಿದೆನ್ನನು ನೀ ಪಾಲಿಸನುದಿನ ॥ ಅ.ಪ. ॥
ಘೋರ ವ್ಯಾಧಿಗಳ ನೋಡಿ । ವಿಜಯರಾಯ ।
ಭೂರಿ ಕರುಣವ ಮಾಡಿ ॥
ತೋರಿದರಿವರೆ ಉದ್ಧಾರಕರೆಂದಂದಿ- ।
ನಾರಭ್ಯ ತವ ಪಾದ ಸೇರಿದೆ ಸಲುಹೆಂದು ॥
ಸೂರಿಜನ ಸಂಪ್ರೀಯ ಸುಗುಣೋ- ।
ದಾರ ಎನ್ನಯ ದೋಷನಿಚಯವ ॥
ದೂರ ಗೈಸು ದಯಾಂಬುಧಿಯೇ ನಿ- ।
ವಾರಿಸಿದೆ ಕರಪಿಡಿದು ಬೇಗನೆ ॥ ೧ ॥
ಅಪಮೃತ್ಯುವನು ತೊಡೆದೆ । ಎನ್ನೊಳಗಿಪ್ಪ ।
ಅಪರಾಧಗಳ ಮರೆದೆ ॥
ಜಪಲ-ಚಿತ್ತನಿಗೊಲಿದು ವಿಪುಲ ಮತಿಯನಿತ್ತು
ನಿಪುಣನೆಂದೆನಿಸಿದೆ ತಪಸಿಗಳಿಂದಲಿ ॥

ಕೃಪಣ-ವತ್ಸಲ ನಿನ್ನ ಕರುಣಕೆ ।
ಉಪಮೆ ಕಾಣೆನೊ ಸಂತತವು ಕಾ- ॥
ಶ್ಯಪಿಯೊಳಗೆ ಬುಧರಿಂದ ಜಗದಾ- ।
ಧಿಪನ ಕಿಂಕರನೆನಿಸಿ ಮರೆದೆ ॥ ೨ ॥

ಎನ್ನ ಪಾಲಿಸಿದಂದದಿ । ಸಕಲ ಪ್ರ- ।
ಪನ್ನರ ಸಲಹೊ ಮುದದಿ ॥
ಅನ್ಯರಿಗೀಪರಿ ಬಿನ್ನಪಗೈಯೆ ಜ- ।
ಗನ್ನಾಥ ವಿಠಲನ್ನ ಸಂಸ್ತುತಿಸುವ ಧೀರ ॥
ನಿನ್ನ ನಂಬಿದ ಜನರಿಗೀಪರಿ ।
ಬನ್ನವೆ, ಭಕ್ತಾನುಕಂಪಿ ಶ- ।
ರಣ್ಯ । ಬಂದೊದಗೀ ಸಮಯದಿ ಆ- ।
ಹರ್ನಿಸಿ ಧ್ಯಾನಿಸುವೆ ನಿನ್ನ ॥ ೩ ॥

೪

ನಾನು ಎನ್ನೊಡೆಯನ ಗುಲಾಮನು

(ರಾಗ-ಮಿಶ್ರಕಾಫಿ, ತಾಲ–ಕೇರವಾ)

ಕಡಕೋಳದ ನಾ ಗುಲಾಮಾ । ನೀವು ।
ಕರೆದಲ್ಲಿಗೆ ನಾ ಬರಾಂವಾ ॥ ಪ ॥
ಹಾಕಿಕೊಟ್ಟ ಜಹಾಗಿರ ಇನಾಮಾ । ನಾ ।
ಗುರುವಿಗೆ ಮಾಡತೀನಿ ಸಲಾಮಾ ॥ ಅ.ಪ. ॥
ಜಗದೊಳಗೆ ನಾ ಇರಾಂವಾ । ಜಗ- ।
ಕ್ರೀಡೆಯೊಳಗೆ ನಾ ಆಡಾಂವಾ ॥
ಜನರಿಗೆ ಸಣ್ಣಾಗಿ ನಡ್ಯಾಂವಾ । ನಾ ।
ಗುರುವಿನ ಗೂಳ್ಯಾಗಿ ಮೆರ್ಯಾಂವಾ ॥ ೧ ॥
ದಶೇಂದ್ರಿಯ ಗುಣಗಳ ಕಳ್ಯಾಂವಾ । ನಾ ।
ದಶರಥರಾಯನ್ಹಾಂಗ ಹೊಳ್ಯಾಂವಾ ॥
ಕಸರತ ಕವಾಯಿ ಮಾಡಾಂವಾ । ನಾ ।
ಕಬೀರ-ಕಮಾಲನ್ಹಾಂಗ ಹಾಡಾಂವಾ ॥ ೨ ॥
ಕೈಲಾಸದೊಳಗ ನಾ ಇರಾಂವಾ । ನಾ ।
ರಸರಾಯ ಹೋಳಿಗಿ ತುಪ್ಪಾ ಜಡ್ಯಾಂವಾ
ಗುಣ ಬಿಟ್ಟು ಗುರುವಿನ ಕೂಡಾಂವಾ । **ಗುರು** ।
ಮಡಿವಾಳಯ್ಯನ ಹಾಡಿ ಹರಸಾಂವಾ ॥ ೩ ॥

೫

ತನ್ನ ಸದ್ಗುರುವಿನ ಕೈಯಲ್ಲಿಯ ಕೊಳಲಿನಂತಿರುವ ನಂಬಿಗೆಯ ಮೂರುತಿಯೆ ಆದರ್ಶ ಶಿಷ್ಯನು

(ರಾಗ-ದುರ್ಗಾ, ತಾಲ-ದೀಪಚಂದಿ)

ಕರ್ಪುರಾರತಿಯನ್ನು ಬೆಳಗುವೆನು |
ಜಿಗಜಿನ್ನಿ-ಜೀಯಗೆ ॥ ಪ ॥
ಕರ್ಪುರಾರತಿಯನ್ನು ಬೆಳಗುವೆ |
ನಿರ್ಮಲಾಂತಃಕರಣ-ಯತಿಗೆ ॥
ನಿರ್ಮಮತ್ವದ ಮಾನ್ಯ ಮೂರ್ತಿಗೆ |
ನಿರ್ಗುಣನ ನಿರ್ಜಯಲ ಕೀರ್ತಿಗೆ ॥ ಅ.ಪ. ॥
ನಂಬಿಕೆಯು ಅಂಬರದಿ ಬಂದಿಹುದೊ | ಉದ್ಧಾರ ಕಾರ್ಯಕೆ |
ತಪವೆ ತೊಳಗುತ ಜಗದೊಳಿಳಿದಿಹುದೊ ॥
ತನ್ನ ಹಿರಿತನವನ್ನು ಅರಿಯದೆ |
ಧನ್ಯಗುರುವಿನ ಮಹಿಮೆ ಸಾರುವ ॥
ಚಿನ್ಮಯನ ಚಿನ್ಮಾದ ಬೀರುವ |
ದೇವರಾಯನ ದಿವ್ಯಕೊಳಲಿಗೆ ॥ ೧ ॥
ಕರ್ಪುರವು ತಾನುರಿಯ ಸೇರುತಲಿ | ಆದು ಉರಿಯುತುರಿಯುತ |
ಉರಿಯೊಳಗೆ ಅಳಿದುಳಿಯುವಂದದಲಿ ॥
ಗುರುವಿನಲ್ಲಿಯೆ ತಾನು ಜೆರೆಯುವ |
ಅವರ ಹಿರಿತನದಲ್ಲಿ ಮೆರೆಯುವ ॥
ಹಿರಿಯ ಆನಂದವನು ಕರೆಯುವ |
ಭಾವೂರಾಯರ ಭವ್ಯ ಬೆಳಕಿಗೆ ॥ ೨ ॥

೬

ಸದ್ಗುರುವಿನ ಪಾದಪೂಜೆಯ ಮಾಡಿ ಮುಕ್ತನಾದೆ

(ರಾಗ-ಪುರಿಯಾ ಧನಾಶ್ರೀ, ತಾಲ-ದೀಪಚಂದಿ)

ಪಾದಪೂಜಿಯ ಮಾಡಿ ಮುಕ್ತಾದೆ | ಗುರು ಲಿಂಗ ಜಂಗಮ |
ಪಾದಪೂಜಿಯ ಮಾಡಿ ಮುಕ್ತಾದೆ ॥ ಪ ॥
ಪಾದಪೂಜಿಯ ಮಾಡಿ ಮುಕ್ತ- |
ನಾಗಿ ದಶವಿಧ ನಾದಘೋಷದಿ ॥
ವಾದ ಭೇದವನಳಿದು ಚಿದ್ಘನ- |
ಬೋಧ ಮಂಟಪದಲ್ಲಿ ಕುಳಿತು ॥ ಅ.ಪ. ॥

ಕಾಯಾ ವಾಚಾ ಮನಸು ಶುದ್ಧಾಗಿ । ಭಯವಿಲ್ಲದ ಹಾಗೆ ।
ಮಾಯಾ-ಮೋಹವ ಎರಡು ತಾ ನೀಗಿ ॥
ಕಾಯಾ ಕಾಶೀ ಕ್ಷೇತ್ರದಲ್ಲಿ ।
ರಾಯ ವಿಶ್ವನಾಥ ತಾನೆ ॥
ತೋಯ ತೋಯವ ಬೆರಸಿದಂತೆ ।
ನ್ಯಾಯ ಮಾಡುವ ಜಂಗಮನ ॥ ೧ ॥

ಇಡಾ-ಪಿಂಗಳಾ ಜೋಡಗೂಡಿಸಿ । ನಡು ನಾಡಿಗೂಡ ।
ಎಡದ ಹಿಮ್ಮಡ-ದಶನ ಒದಗೀಸಿ ॥
ಜಡಿದು ಆಸನ ಬಲಿದು ಕುಳಿತು ।
ಒಡನೆ ಪ್ರಾಣಾಪಾನವೆರಡೂ ॥
ಹಿಡಿದು ಎಬ್ಬಿಸಿ ನಡೆದು ತ್ರಿಕುಟದಿ ।
ಮುಳುಗಿ ಆಡುವ ಜಂಗಮನ ॥ ೨ ॥

ಪಿಂಡ ಬ್ರಹ್ಮಾಂಡೆರಡು ಶಿರದೊಳುಮೆ । ಷಡ್ಜಲಜಮೇಗಿನ ।
ಪುಂಡರೀಕನ ಸಹಸ್ರದಳದೊಳುಮೆ ॥
ಕಂಡು ತತ್ಸುಖ ಉಂಡು ಸುಖದಿ ಅ- ।
ಖಂಡ ಜ್ಯೋತಿಯ ಬೆಳಗ ಮುದದೊಳು ॥
ಕಂಡು ಪಶ್ಚಿಮ ತುದಿಯ ಬೈಲೊಳು ।
ಮಂಡಿಸಿದ **ಮಹಾಲಿಂಗರಂಗನ** ॥ ೩ ॥

೭

ಪರತರವಾದ ವಸ್ತುವಿಗಿಂತ ಸದ್ಗುರು ಹಿರಿಯನು

(ರಾಗ-ದರಬಾರಿ, ತಾಲ-ಕೇರವಾ)

ಗುರುತಾ ತೋರಿದ ಗುರುವಿನ ।
ಮರೆತು ನಾನಿರಲಿ ಹ್ಯಾಂಗ ॥
ಗುರುವಿನಿಂದ ಅಧಿಕ ಉಂಟೆ ?
ಪರಕೆ ಪರವಾದ ವಸ್ತು ॥ ಪ ॥

ಆಧಾರ ಅಗ್ನಿಯ ಸ್ಥಳದ ।
ಭೇದ ಅರುಹಿಸಿ ಕೊಟ್ಟಾ ॥
ನಾದ-ಬಿಂದು-ಕಳೆಯ ।
ಹಾದಿ ತೋರಿಸಿ ಬಿಟ್ಟಾ ॥
ಸಾಧಿಸಿ ಮೂಲ ಮಂತ್ರ ।
ಕರ್ಣದೊಳು ಊದಿ ಬಿಟ್ಟಾ ॥ ೧ ॥

ನಾಸಿಕ-ಕೊನೆಯೊಳು ।
ಸೂಸುವ ವಾಯುಗಳೈದು ॥
ಭಾಸ್ಕರ-ಕೋಟಿ- ।
ಪ್ರಕಾಶದಿ ಮೆರೆವುದು ॥
ಸಾಸಿರ ದಳದೊಳು ।
ಸುಳಿಸುಳಿದಾಡುವದು ॥ ೨ ॥

ಆಂಗ-ಲಿಂಗದ ಸಂ- ।
ಯೋಗವ ಹೇಳಿದನು ॥
ಹಿಂಗದಿರೆಂದು ಎ- ।
ಚ್ಚರ ಕೊಟ್ಟು ಪೋದನು ॥
ಕಂಗಳಾಗ್ರದಿ ಶಿವ- ।
ಲಿಂಗ ತೋರಿಸಿಕೊಟ್ಟನು ॥ ೩ ॥

ಕುಂಡಲ ಮಧ್ಯದಿ ।
ಜ್ಯೋತಿ ಕುಣಿದಾಡುವದು ॥
ಅಣುರೇಣುತೃಣಕಾಷ್ಠದಿ ।
ಸಮನಾಗಿ ನಿಲ್ಲುವದು ॥
ಪ್ರಣವ ಸ್ವರೂಪ ಪರ- ।
ಬ್ರಹ್ಮ ತಾನಾದ ಮೇಲೆ ॥ ೪ ॥

ಭವ ತೊಲಗಿ ಹೋಯಿತು ।
ಬಹು ಪುಣ್ಯ ದೊರಕಿತು ।
ಭುವನ ಕಂದರವಾಯಿತು ।
ಗವ್ಹರವೆ ತೋರಿತು ॥
ಅವಿರಲಾತ್ಮಕ ಗುರು- ।
ಲಿಂಗ ಜಂಗಮನಲ್ಲಿ ॥ ೫ ॥

ಪ್ರಕರಣ ಎಂಟು

ಗುರು–ಶಿಷ್ಯರ ಸಂಬಂಧ (ಭಾಗ ೨)

೧

ಗುರುಚರಣ-ಕಮಲದಲಿ ಭೃಂಗನಾಗಯ್ಯ !

(ರಾಗ-ಜಯಜಯವಂತಿ, ತಾಲ-ತ್ರಿತಾಲ)

ಗುರುಚರಣ-ಕಮಲದಲಿ ।
ಭೃಂಗನಾಗೊss ನೀ ॥ ಪ ॥

ಸ್ಥಿರವಿಲ್ಲ ಸಂಸಾರ ।
ನರ ಜನ್ಮದೊಳು ಬಂದು ॥
ಪರತತ್ವ ತಿಳಿದು ಸಾ- ।
ಧುರ ಸಂಗಿಯಾಗೊ ನೀ ॥ ೧ ॥

ಮೌನ ಹಿಡಿದು ಮುದ್ರೆ ಬಲಿದು ।
ಜ್ಞಾನ-ಜ್ಯೋತಿಯೊಳಗೆ ನಲಿದು ॥
ಸ್ವಾನುಭವಾಮೃತ ಸವಿದು ।
ನಿಸ್ಸಂಗನಾಗೊ ನೀ ॥ ೨ ॥

ಮುಪ್ಪಿನ ಮುನಿಯ ಪಿಡಿದು ವಚನ ।
ಕಪ್ಪುಗೊರಳ ಕಾಡಸಿದ್ದ- ॥
ನಿದ್ದೆಡೆಗೆ ಹೋsಗಿs
ಸಾಷ್ಟಾಂಗನಾಗೋ ನೀ ॥ ೩ ॥

೨

ಪಾಪಪೂರ್ಣ ಜೀವನದಿಂದ ಭಕ್ತಿ-ಜೀವನದೆಡೆಗೆ

(ರಾಗ-ಪುರಿಯಾ ಧನಾಶ್ರಿ, ತಾಲ-ದೀಪಚಂದಿ)

ಕುರುಬರೋ ನಾವು ಕುರುಬರೋ ॥ ಪ ॥
ಹೀಗೆ ಈಸೊಂದು ಕುರಿಮರಿ ।
ಕಾಯ್ದುಕೊಂಡಿರುವಂಥ ॥ ಅ. ಪ. ॥

ಆರೈದು ಮೂರಾರು ಹತ್ತು ಟಗರಗಳು ।
ಮಾಯವಾಗಿ ಹೋಗ್ಯಾವ ಈ ಊರ ಒಳಗೆ ॥
ಬ್ಯಾರೆ ಇನ್ನೂರದಾ ಹದಿನಾರು ಸಾವಿರ ।
ಸೂರ್ಯಾಗಿ ಹೋಗಿರುವ ಕುರಿಮರಿ ಕಾಯ್ಕಂಥ ॥ ೧ ॥

ಒಳಗೆ ಹೊರಗೆ ಒಂದೇ ಪರಿಯಲ್ಲಿ ನಾರುವದು ।
ಬಲು ಜಿಡ್ಡು ನಾರುವದು ಇನ್ನು ಬೇರೆ ॥
ಕೊಳೆ ಕೊಳೆತ ಮಲ ಮೂತ್ರ ತುಂಬಿ ಸೋರುತಲಿದೆ ।
ಹಳಿಯ ದೋಷದ ರಗಟಿ ಎಳಕೊಂಡು ತಿರುಗುವಂಥ ॥ ೨ ॥

ಏರು ಹಾಳಾಗಲಿ ನೆರೆಯು ಬೀಳಾಗಲಿ ।
ತೋಳ ಒಯ್ಯಲಿ ನಮ್ಮ ಕುರಿಮರಿಗಳನು ॥
ಭಾಳಾಕ್ಷಹರ ನಮ್ಮ ಕೂಡಲೂರೇಶನ ।
ಒಳಗೆ ಹೊರಗೆ ಹೀಗೆ ಕಾಯ್ದು ಕೊಂಡಿರುವಂಥ ॥ ೩ ॥

೩

ಜ್ಯೋತಿ, ನಾದ, ಸುಧೆಗಳ ಅತೀಂದ್ರಿಯ ಅನುಭವವನ್ನು ಸಲ್ಲಿಸುವಲ್ಲಿ ಕಾಣುವ ಸದ್ಗುರುವಿನ ಪ್ರಭಾವ

(ರಾಗ-ಕಾಫಿ, ತಾಲ-ಕೇರವಾ)

ಗುರುವಿನ ಹ್ಯಾಂಗ ಮರೆಯಲಿ ॥
ಬೋಧ ಕೊಟ್ಟು ಸುಖದಲಿಟ್ಟು ।
ನೀಗಿಸಿ ಬಿಟ್ಟವನ ॥
ಪಾಪಗಳನು ಸುಟ್ಟವನ । ಜ್ಞಾನದ ।
ಮಾರ್ಗ ಹೇಳಿದವನ ॥ ॥ ೪ ॥

ಮೊದಲ ಮೈಲಿಗೆ ಕಳಸಿ । ಒಳ್ಳೆ ।
ವಸ್ತ್ರ ಉಡಿಸಿದನ
ಆದು ಇದು ಮನಸಿನ ಕಾಮನೆ । ಬಿಡಿಸಿ ।
ನಿಶ್ಚಯ ಮಾಡಿದನ ॥
ಸದಮಲ ಮಹಾಜ್ಯೋತಿಯ । ಬೆಳಕಲಿ ।
ಇರಂತ ಹೇಳಿದನ ॥
ಸದರಿನ ಮೇಲೆ ಕುಳ್ಳಿರಿಸೆನಗೆ ।
ಸುಧೆಯ ಕುಡಿಸಿದನ ॥ ೧ ॥

ಆಡಬಾರದಂಥಾ ಆಟಾ ।
ಆಡಿ ತೋರಿದನ ॥
ತೋರಬಾರದಂಥಾ ಸುಖವ ।
ತೋರಿಸಿಕೊಟ್ಟವನ ॥

ಮೊರಿದ ನಾದ ಬ್ರಹ್ಮದೊಳಗೆ ।
ನಲಿ ನಲಿದಾಡಿಸಿದನ ॥
ಪೂರ್ಣವಾದ ಆನಂದದಲ್ಲಿ ।
ಸೇರಿಕೊಳ್ಳೆಂದವನ ॥ ೨ ॥

ಕಾಣಬಾರದಂಥಾ ವಸ್ತುವ ।
ಕಾಣಿಸಿ ಕೊಟ್ಟವನ ॥
ಹೀನ ಮನದ ಸಂಶಯ ಬಿಡಿಸಿ ।
ನಿಶ್ಚಯ ಮಾಡಿದನ ॥
ಕೋಣನಾಗಬ್ಯಾಡ ಅಂತ ।
ವಿವೇಕ ಹೇಳಿದನ ॥
ಜ್ಞಾನಪತಿ ಪ್ರಿಯ ನಿರುಪಾಧಿಸಿದ್ಧನ
ಕಾಣದೆ ಹ್ಯಾಂಗಿರಲಿ ॥ ೩ ॥

೪

ಸದ್ಗುರುವು ಶರೀರದಲ್ಲಿಯ ನವದ್ವಾರಗಳಿಗೆ ಒಮ್ಮೆಲೆ ಕೀಲಿ ಹಾಕಿ ಕತ್ತಲುಳ್ಳ ಅಂತರಂಗದಲ್ಲಿ ದಿವ್ಯ ಮಿಂಚಿನ ಬೆಳಕನ್ನು ಬೀರುವ

(ರಾಗ-ಕಾಫಿ, ತಾಲ-ತ್ರಿತಾಲ)

ಹ್ಯಾಂಗ ಮರೆಯಲೀ । ಗುರುವಿನ
ಹ್ಯಾಂಗ ಮರೆಯಲೀ ॥ ಪ ॥
ಹ್ಯಾಂಗ ನಾನು ಮರೆಯಲವನ ।
ಶರೀರದಾಶೆಯ ಬಿಡಿಸಿದವನ ॥
ಪರಿಪರಿಯಿಂದ ತಿಳಿಸಿ ಎನ್ನೊಳು ।
ಪರಬ್ರಹ್ಮನ ತೋರಿಸಿದವನ ॥ ಅ. ಪ. ॥

ಮೂಢತನದಿ ಹೇಡಿ । ನಾನು ।
ಆದೆನೋ ಬಲು ಖೋಡಿ ॥
ಮನಸಿನ ಬೆನ್ಹತ್ತಿ । ಕೇಡು ।
ಮಾಡಿಕೊಂಡೆನೊ ಅತಿ ॥
ಬಾಡಿಗೆತ್ತಿನಂತೆ ದುಡಿದು ದುಡಿದು ।
ಕಾಡ ಜನ್ಮ ತಿರುಗಿ ಕೆಟ್ಟೆನು ॥ ೧ ॥

ಮೂರು ಮಂದಿ ಪ್ರೀತಿಯ । ಗೆಳೆಯರ ।
ಮೋಹವ ಬಿಡಿಸಿದನು ॥
ಆರು ಮಂದಿ ವೈರಿ- । ಗಳನು ।

ಊರ ಹೊರಗ ಹಾಕಿದನು ॥
ಪರಮಾರ್ಥದ ತತ್ವದೊಳು ಮನವ ।
ಸ್ಥಿರವಾಗಿ ನಿಲ್ಲಿಸಿಬಿಟ್ಟನು ॥ ೨ ॥

ಎಂಟು ಮುಂದಿ ಬಂಟರ । ಹೊಡೆದು ।
ಸೊಂಟವ ಮುರಿದನು ॥
ಏಳು ಪಾಳೇಗಾರರ । ಕಟ್ಟಿ ।
ಗೋಳ ಹಿಡಿಸಿದನು ॥
ಕಾಳಗತ್ತಲೆಯ ಮನೆಯೊಳಗ ।
ಕೋಟಿ ಮಿಂಚಿನ ಬೆಳಕ ತೋರಿದನು ॥ ೩ ॥

ಒಂಬತ್ತು ಬಾಗಿಲಗಳಿ- । ಗೆಲ್ಲಾ ।
ಕೀಲೀ ಹಾಕಿದನು ॥
ಮತ್ತೆ ನಾನು ಭವಕೆ । ಮರಳಿ ।
ಬರದಂತೆ ಮಾಡಿದನು ॥
ಸುತ್ತುಮುತ್ತು ಎತ್ತು ನೋಡಲು ।
ಚಿತ್ತು ಚಿದಾನಂದದಿ ಬೆರಸಿದನು ॥ ೪ ॥

೫

ಸದ್ಗುರುವಿನ ಕರುಣದ ಅಲೌಕಿಕ ಪರಿಣಾಮಗಳು

(ರಾಗ-ಪಿಲು, ತಾಳ-ಕೇರವಾ)

ಸೈ ಸೈ ಸದ್ಗುರುವಿನ ದಯದಿಂ- ।
ದೆಲ್ಲ ಮೈಮರೆತನೆ ॥ ಪ ॥

ಐ ಐ! ಇದು ಏನು ಕಾರಣ ।
ಮೈಮರೆತು ಮತ್ತಳೀದೆನೆ ॥
ಕೈ ಕೈ ತಲೆ ಮೇಲೆ ಇಡಲು ।
ವೈರಾಗ್ಯವ ಪಡೆದೆನೆ ॥
ಫೈ ಫೈ ಫೈ ಅಂತೆ ಕುಣಿಸಿ ।
ತನ್ನಂತೆ ತಾ ಮಾಡಿದನೆ ॥ ಅ. ಪ. ॥

ನಾನು ನೀನೆನ್ನುವದೆರಡು । ತಾನೆ ತಾನಾದನೆ ।
ಮಾನ ಅಪಮಾನ ಎರಡೂ । ಹಾನ ಮಾಡಿದನೆ ॥
ಜ್ಞಾನ-ಮಾರ್ಗವ ತೋರಿ । ಧ್ಯಾನ ಹೇಳಿದನೆ ।
ಖೂನ ತೋರಿಸಿ ವಿನೋದ ಮಾಡಿದನೆ ॥ ೧ ॥

ನಾದಶಬ್ದದಲಿ ಮನಸ । ಲುಬ್ಧ ಮಾಡಿsದನೆ ।
ವಾದಿ ವಿವಾದೀ ಕೂಡ । ಕಾದೆ ಗೆಲಿಸಿsದನ ॥
ಭೇದಾಭೇದವ ಅರಿಯುದೆ । ಹಾದಿ ತೋರಿsದನೆ ।
ಈವ ಹುಲಿಯಂಥ ಮನಸ । ಸಾದ ಮಾಡಿsದನೆ ॥ ೨ ॥

ಭ್ರುಕುಟಿ-ಮಧ್ಯದಲ್ಲಿ ವಸ್ತು । ಪ್ರಕಟ ಮಾಡಿsದನೆ ।
ನಾಸಿಕಾಗ್ರದ ಕೊನೆಯ ಮೇಲೆ । ಭಾನುಪ್ರಕಾಶ ತೋರಿದನೆ ॥
ಆಸನ ಬಲಿದು ಪೀತವನಿಕ್ಕಿ । ಸಾಸಿರ ನಾಮ ಗೆಲಿದನೆ ।
ಈಶನು ದತ್ತಮಹೇಶ ದಿಗಂಬರ ।
ಘೋಷದೊಳಗೆ ಮನ ನಿಲಿಸಿದನೆ ॥ ೩ ॥

೬

ಸದ್ಗುರುವು ಕುರುಹಳಿದ ಸದ್ವಸ್ತುವಿನಲ್ಲಿ ಬೆರೆಯಿಸುವ

(ರಾಗ-ಭೂಪ ತಾಲ-ದೀಪಚಂದಿ)

ಬೋಧಿಸೆನ್ನನು ಗುರುವೆ । ನಿಮ್ಮಯ ದಿವ್ಯ ।
ಪಾದವ ನಂಬಿರುವೆ ॥ ಪ ॥
ವೇದಾಂತದೊಳು ಗೋಪ್ಯವಾದ ತತ್ವವನ್ನು ।
ಬೋಧಿಸಿ ಮನ ವಿನೋದಿಸಿ ಸುಖಿಸೆಂದು ॥ ಅ. ಪ. ॥
ಆದಿ ಅಂತ್ಯವ ಬೋಧಿಸಿ । ನಿರ್ಗುಣವಾದ ।
ನಾದಬ್ರಹ್ಮವ ಸಾಧಿಸಿ ॥
ಹಾದಿ ನಾಲ್ಕರ ನಡುವೆ ।
ವೇದಿಕೆಯೊಳು ಕುಳಿತು ॥
ಮೋದದಿ ದಶವಿಧ ।
ನಾದವ ಕೇಳೆಂದು ॥ ೧ ॥

ಮೂಲ ಕುಂಡಲಿಯನೆತ್ತಿ । ಅಗ್ನಿಯದ
ಮೇಲಣ ನೆಲೆಗೆ ಹತ್ತಿ ॥
ಸಾಲಿಟ್ಟು ಸುರತಿರ್ಪ ।
ಹಾಲನು ಸವಿದುಂಡು ॥
ನೀಲ ಜ್ಯೋತಿಯ ದಿವ್ಯ ।
ಜ್ವಾಲೆಯೊಳು ಬೆಳಗೆಂದು ॥ ೨ ॥

ರವಿಶಶಿಗಳ ತಡೆದು । ಸುಷುಮ್ನಿಯ ।
ನವಮಾರ್ಗದೊಳು ನಡೆದು ॥

ಜವದಿ ಪಶ್ಚಿಮ ದಿಕ್ಕಿ - ।
ನವನಿಯೊಳಿರುತಿರ್ಪ ॥
ನವಮೋಕ್ಷ ಸುಖದನು- ।
ಭವದಿ ಮೈಮರೆಯೆಂದು ॥ ೩ ॥

ಪರಿಪೂರ್ಣಾನಂದ ಭಾವಾ । ತಾರಕ ರೂಪ ।
ಗುರುಸಿದ್ಧ ದೇವ ದೇವಾ ॥
ಅರಿದೆ ನಂಬಿರುವೆನು ।
ಮರೆದು ಎನ್ನೊಳು ನೀನು ॥
ಕುರುಹನ್ನು ತೋರದೆ ।
ಬೆರೆದೇಕವಾಗೆಂದು ॥ ೪ ॥

ಪ್ರಕರಣ ಒಂಬತ್ತು

ಸಂತರ ಲಕ್ಷಣಗಳು

೧

ಭಕ್ತಶ್ರೇಷ್ಠರು ಯಾರು ?

(ರಾಗ-ಕಾಂಬೋಧಿ, ತಾಲ-ರೂಪತಾಲ)

ಭಕ್ತನೆಂದರೆ ಭಕ್ತ ಪ್ರಲ್ಹಾದನು ।
ಮಿಕ್ಕ ಭಕ್ತರು ಎಲ್ಲ ಭಕ್ತವರರೇನು ? ॥ ಪ ॥

ಮಲತಾಯಿ-ಮೋಸದಿಂದಳಿಯೆ ಅರಸೊತ್ತಿಗೆಯು ।
ಬಲಿತ ಕೋಪದಿ ಕಾನನವ ಸೇರುತ ॥
ಅಳಿಯದಿಹ ಅರಸುತನ ಗಳಿಸೆ ಹರಿಯನು ನೆನೆವ ।
ಎಳೆಯ ಧ್ರುವನೆಂತು ತಾ ಭಕುತವರನಹನು ? ॥ ೧ ॥

ವೀಣೆಯಿನಿಸರದಲ್ಲಿ ಗಾನವನು ಬೆರಸುತಲಿ ।
ಹರಿಯ ಹೊಗಳುತ ಅಲೆವ ಬ್ರಹ್ಮಕುವರ ॥
ಕಲಹವನು ಮೊಳಿಸಿ ಬೆಳೆಸುವದರಲಿ ನಲಿಯುತಿಹ ।
ಭಕುತ-ಬಿರುದನು ಪಡೆಯೆ ಅರ್ಹನೇನು ? ॥ ೨ ॥

ನೂರಾರು ಕಥೆಗಳಿಂ ಮೂರಾರು ಗ್ರಂಥಗಳ ।
ಬರೆದು ಪುರುಷಾರ್ಥಗಳ ಮಹಿಮೆಯನ್ನು ॥
ಸಾರ್ವಹವ್ಯಾಸದಲಿ ತುಂಬ ಮುಳುಗಿದ ವ್ಯಾಸ ।
ಭಕುತಿ ಶಾಂತಿಯನೆಂತು ಹೊಂದುತಿಹನು ? ॥ ೩ ॥

ಜ್ಞಾನಕರ್ಮದ ಬೆರಕೆ ಮೇಲೆಂದು ಬಗೆದದರ ।
ಹಿರಿಮೆಯನು ಬಿತ್ತರಿಪ ಗ್ರಂಥದಲ್ಲಿ ॥
ಜ್ಞಾನಕರ್ಮದಿ ಇಂತು ಶಿಷ್ಟನಾದ ವಶಿಷ್ಠ ।
ಭಕುತರಲಿ ಶ್ರೇಷ್ಠನೆಂತಾಗುತಿಹನು ? ॥ ೪ ॥

ಜ್ಞಾನದಿಂದಲೆ ಭುಕ್ತಿ ಜ್ಞಾನದಿಂದಲೆ ಮುಕ್ತಿ ।
ಜ್ಞಾನವೇ ಚಿರಸುಖವ ಪಡೆವ ಯುಕ್ತಿ ॥
ಜ್ಞಾನಶಕ್ತಿಯನಿನಿತು ತುಂಬ ಹೊಗಳುವ ಶುಕನು ॥
ಪರಮ ಭಕ್ತನ ಪದವ ಪಡೆಯಬಹುದೇನು ? ॥ ೫ ॥

ಅರಸುತನದೈಸಿರಿಗೆ ಸೋತು ನ್ಯಾಯವ ಮರೆತು।
ದುರುಳರೂಳಿಗದಲ್ಲಿ ಬಾಳುತಿರಲು ॥
ಶರಶಯ್ಯೆಯಲಿ ಕೊನೆಗೆ ಹರಿಯ ನೆನೆದರೆ ಭೀಷ್ಮ।
ವರಭಕ್ತನೆಂತವನು ಎನಿಸುತಿಹನು ? ॥ ೬ ॥
ಹರಿಸಖನು ತಾನೆಂದು ಹಿರಿತನದ ಹೆಮ್ಮೆಯಲಿ।
ಹರಿಯ ಹಿರಿಮೆಯ ಮರೆತು ದುಡಿಸುತಿರುವ ॥
ಹರಿಯೆದುರು ತನ್ನ ಮತಿ-ಮಹಿಮೆಯನೆ ಮೆರೆಸುತಿಹ।
ನರಗೆ ವರಭಕ್ತಿ ಸುಖ ದೊರೆಯಬಹುದೇನು ? ॥ ೭ ॥
ಹಿರಿಯ ಪಾಪವು ಜರಿಯೆ ವೀರ ರಾಮನ ನೆನೆದು।
ಹುತ್ತ ಹೊತ್ತರು ಮುನಿಯು ತಪಸಿನಿಂದ ॥
ಈರುಳ್ಳಿ ಬೇಯಿಸಿದ ಬೆಳ್ಳಿ ಕಲಶವು ಕೂಡ।
ಬೆಳ್ಳಗಾದರೂ ಗಂಧ ತಳ್ಳಬಹುದೇನು ? ॥ ೮ ॥
ರಾಮನಿಗೆ ಸೇವಕನು ಕಾಮನಿಗೆ ಪಾವಕನು।
ಕಾಮವಿರಹಿತ ದಾಸ್ಯ ಕುಶಲನಿಹನು ॥
ಪ್ರೇಮಯುತನಾದರೂ ಕುಲದ ಜಾಪಲ ಬಿಡದ।
ಭೀಮ ಭಕ್ತಾಗ್ರಣಿಯದೆಂತು ತಾನು ? ॥ ೯ ॥
ಹರಿಯ ಬಗೆಬಗೆಯಿಂದ ಭಜಿಪರಿವರೆಲ್ಲೆಮಗೆ।
ಭಕುತಿ ಭಾವವ ಸಲಿಸಿ ವಂದ್ಯರಹರು ॥
ಹರಿಗಾಗಿಯೆ ಹರಿಯ ನಲಿವು ನೋವುಗಳಲ್ಲಿ।
ಭಜಿಪ ಪ್ರಲ್ಹಾದನೆ ವಂದ್ಯತಮನು ॥ ೧೦ ॥

೨

ಸಂತನು ಅಂಜಿಕೆಯನ್ನು ವಿೂರಿರುವ !

(ರಾಗ-ಕಲ್ಯಾಣ, ತಾಲ-ಆದಿತಾಳ)

ಅಂಜೀಕಿನ್ಯಾತಕಯ್ಯಾ। ಸಜ್ಜನರಿಗೆ ॥ ಪ ॥
ಸಂಜೀವರಾಯರ ಸ್ಮರಣೆ ಮಾಡಿದ ಮೇಲೆ ॥ ಅ. ಪ. ॥
ಕನಸಿಲಿ ಮನಸಿಲಿ ಕಳವಳವಾದರೆ।
ಹನುಮನ ನೆನೆದರೆ ಹಾರಿ ಹೋಗುದು ಪಾಪ ॥ ೧ ॥
ರೋಮ ರೋಮಕೆ ಕೋಟಿ ಲಿಂಗ ಉದುರಿಸಿದ।
ಭೀಮನ ನೆನೆದರೆ ಬಿಟ್ಟು ಹೋಗುದು ತಾಪ ॥ ೨ ॥
ಪುರಂದರ ವಿಠ್ಠಲನ ಪಾದಪೂಜೆಯ ಮಾಳ್ಪ।
ಗುರು ಮಧ್ವರಾಯರ ಸ್ಮರಣೆ ಮಾಡಿದ ಮೇಲೆ ॥ ೩ ॥

೩

ಹರಿದಾಸರಿಗೆ ಭಯ-ಶೋಕಗಳು ಸೋಂಕಲರಿಯವು !

(ರಾಗ–ಭೀಮಪಲಾಸ, ತಾಲ–ತ್ರಿತಾಲ)

ದಾಸರಿಗುಂಟೆ ಭಯಶೋಕಾ । ಹರಿ-
ದಾಸರಿಗುಂಟೆ ಭಯಶೋಕಾ ॥ ಪ ॥
ವಾಸುದೇವನ ಸದಾ ಸ್ಮರಿಸುವ ॥ ಅ. ಪ. ॥

ಕಾಮಧೇನು ವರಕಲ್ಪವೃಕ್ಷ-
ಚಿಂತಾಮಣಿ ಕೈಸೇರಿದಕಿಂತ ॥
ನಾಮತ್ರಯದಿಂ ಬಪ್ಪಾ ಸುಖಕೆ
ಸುದಾಮನೆ ಸಾಕ್ಷಿದಕೆಂಬೊ ಹರಿ ॥ ೧ ॥

ರಾಮಚಂದ್ರ ಶಬರಿಯ ತಿಂದೆಂಜಲ
ಅಜಮಿಳ ಮಾಡಿದ ಕುಕರ್ಮಗಳ ॥
ಧೂಮಕೇತು ಭುಂಜಿಸುವಂದದಿ
ಮೇಧ್ಯಾಮೇಧ್ಯವ ಕೈಕೊಂಬ ಹರಿ ॥ ೨ ॥

ಏನು ಮಾಡಿದಪರಾಧವ ಕ್ಷಮಿಸುವ
ಏನು ಕೊಟ್ಟದನು ಕೈಕೊಂಬ ॥
ಏನು ಬೇಡಿದಿಷ್ಟಾರ್ಥವ ಕೊಡುವ
ದಯಾನಿಧಿ ಅನುಪಮನೆಂಬ ಹರಿ ॥ ೩ ॥

ಪ್ರಲ್ಹಾದವರದ ಪ್ರಕಟನಾಗದಲೆ
ಎಲ್ಲರೊಳಿಪ್ಪನು ಪ್ರತಿದಿನದಿ ॥
ಬಲ್ಲಿದರಿಗೆ ಬಲ್ಲಿದ ಜಗನ್ನಾಥ
ವಿಠ್ಠಲ ವಿಶ್ವವ್ಯಾಪ್ತನೆಂಬ ಹರಿ. ॥ ೪ ॥

೪

ಗೊರಲಿಯು ಕೆಂಡವನ್ನು ಕಡಿಯಬಹುದು; ಆದರೆ ಭಯವು ಸಂತರ ಅಂತರಂಗವನ್ನು ಸೇರಲರಿಯದು.

(ರಾಗ–ಮಾಂಡ, ತಾಲ–ಕೇರವಾ)

ಕೆಂಡಕ್ಕೆ ಗೊರಲಿಯು ಹತ್ತುವದುಂಟೆ ।
ಪಾಂಡುರಂಗನ ದಾಸರಿಗೆ ಭಯವುಂಟೆ ॥ ಪ ॥

ಆನಿ ಸಿಂಹನ ಕೂಡ ಅಣಕವಾಡುವದುಂಟೆ ।
ಶ್ವಾನ ಹೆಬ್ಬುಲಿ ಕೂಡ ಸರಸವಾಡುವದುಂಟೆ ॥ ೧ ॥

ಕತ್ತಲು ರವಿಗಿನ್ನು ಕವಿದು ಮುತ್ತಲುಂಟೆ ।
ಹುತ್ತಿನೊಳು ಕಪ್ಪಿ ಹೋಗುವದುಂಟೆ ॥ ೨ ॥

ಮಾರುತನ ಗುದ್ದಿದರೆ ಅಂಗ ನೋಯುವದುಂಟೆ ।
ಹೇಮಗಿರಿಗೆ ವಜ್ರ ಸೀಳುವದುಂಟೆ ॥ ೩ ॥

ಅತ್ತಿತ್ತ ಅಗಲದೆ ಚಿತ್ತಜನಯ್ಯನ ।
ಚಿತ್ತದೊಳಿದ್ದವಗೆ ಚಿಂತೆಯುಂಟೆ ॥ ೪ ॥

ಸ್ವಾಮಿ ಶ್ರೀ ಪುರಂದರ ವಿಠ್ಠಲರಾಯನ ।
ನಾಮಧಾರಿಗಳಿಗೆ ನರಕವುಂಟೆ ॥ ೫ ॥

೫

ಶರಣರನ್ನು ಕಾಡುವ ಅಪಾಯಕರ ಸಾಹಸವನ್ನು ಮಾಡದಿರು !

(ವಚನ)

ಹಾವಿನ ಹೆಡೆಯ ಕೊಂಡು ಕೆನ್ನೆಯ ತುರಿಸಿಕೊಂಬಂತೆ
ಉರಿಯ ಕೊಳ್ಳಿಯ ಕೊಂಡು ಮುಂಡೆಯ ಸಿಕ್ಕ ಬಿಡಿಸಿಕೊಂಬಂತೆ
ಹುಲಿಯ ಮೀಸೆಯ ಹಿಡಿದು ಆಣಕವಾಡುವಂತೆ
ಮರೆತು **ಕೂಡಲ ಸಂಗಮನ** ಶರಣರೊಡನೆ ಸರಸವಾಡಿದರೆ
ಒಡಲಲ್ಲಿ ಸುಣ್ಣದ ಕಲ್ಲು ಕಟ್ಟಿಕೊಂಡು ಮಡುವ ಬಿದ್ದಂತೆ.

೬

ಸಂತರ ದೈಹಿಕ ಹಾಗೂ ಮಾನಸಿಕ ಕುರುಹುಗಳು

(ರಾಗ–ಮಿಶ್ರಕಾಫೀ, ತಾಲ–ದಾದರಾ)

ಹೌದಪ್ಪಾ ಹೌದಪ್ಪಾ ಹೌದು ದೇವರ ।
ನಿಂದು ನೀ ತಿಳಿದರೆ ಇಲ್ಲಪ್ಪಾ ದೂರ ॥ ಪ ॥

ತಂಬಾಕಿಲ್ಲದೆ ಬತ್ತಿ ಸೇದಿರಬೇಕು ।
ದಾರೂ ಕುಡಿಯದೆ ನಿಶಾ ಆಗಿರಬೇಕು ॥
ಯಬ್ಬಡ ತಬ್ಬಡ ಇಲ್ಲದೆ ನಾಲಿಗೆ ಹೋಗಿರಬೇಕು ।
ಝೋಲಿ ಹೋಗಿ ಗುರುಪಾದಕೆ ಹೊಂದಿರಬೇಕು ॥ ೧ ॥

ನೀರು ಇಲ್ಲದ ಝಳಕ ಮಾಡಿರಬೇಕು ।
ಅರಿವಿ ಇಲ್ಲದೆ ಮಡಿ ಉಟ್ಟಿರಬೇಕು ॥
ಉಣ್ಣದೆ ಹೊಟ್ಟ ತುಂಬಿರಬೇಕು ।
ಎಜ್ಜರದೊಳಗೆ ನಿದ್ದಿ ಹತ್ತಿರಬೇಕು ॥ ೨ ॥

ಚಿಂತ್ಯಾಗ ಸಂತೋಷ ಆಗಿರಬೇಕು ।
ಭ್ರಾಂತಿ ಬಿಡಿದು ಬ್ರಹ್ಮ ದೊರಕಿರಬೇಕು ॥
ಈ ಜನರಿಗೆ ಹುಚ್ಚನ್ಹಾಂಗ ಕಾಣಿಸಬೇಕು ।
ಹಿಂದು ಮುಂದಿನ ಸುದ್ದಿ ತಿಳಿದಿರಬೇಕು ॥ ॥ ೩ ॥
ಸೂರ್ಯಚಂದ್ರನ ಕಳೆ ಬಂದಿರಬೇಕು ।
ಸಜ್ಜನ-ಸಂಗದಲಿ ಬೆರತಿರಬೇಕು ॥
ಕುಂದ ಇಲ್ಲದೆ ಮುಕ್ತಿ ದೊರಕಿರಬೇಕು ।
ನಿರುಪಾಧಿಗೆ ಪುಗಾ ಹುಟ್ಟಿ ಹೀಂಗಿರಬೇಕು ॥ ೪ ॥

೭

ಸಂತರ ಹಿರಿಮೆಯು ಪರಿಸ್ಥಿತಿಯನ್ನು ಅವಲಂಬಿಸಿರುವದಿಲ್ಲ.

(ರಾಗ-ಜಂಗಲಾ, ತಾಲ-ಕೇರವಾ)

ಹೇಗಿದ್ದರೂ ಚಂದ ಜ್ಞಾನಿಯು ॥ ಪ ॥
ಜನ್ಮರೋಗವನಳಿದು ಬ್ರಹ್ಮಾನಂದನಾಗಿರೆ ॥ ಅ. ಪ. ॥
ಯೋಗದೊಳಿರೆ ಚಂದ । ಭೋಗದೊಳಿರೆ ಚಂದ ।
ಯೋಗವನರಿಯದಿದ್ದರೂ ಚಂದ ॥
ತ್ಯಾಗಿಯಾದರೂ । ಬಹು ಲುಬ್ಧನಾದರೂ ।
ರಾಗಿಯಾದರೂ ವಿರಾಗಿಯಾದರೂ ॥ ೧ ॥
ಮನೆಯೊಳಿದ್ದರು ಚಂದ । ಮಠದೊಳಗಿದ್ದರು ಚಂದ ।
ಮನೆಮಠದಾಸೆಯನಳಿದರೂ ಚಂದ ॥
ಧನವಂತನಾಗಿರೆ । ಧನಹೀನನಾಗಿರೆ ।
ಜನಸಂಗದೊಳಿದ್ದರೂ ಜನಸಂಗವಳಿದರೂ ॥ ೨ ॥
ಓದುತಲಿರೆ ಚಂದ । ಬರೆಯುತಲಿರೆ ಚಂದ ।
ಓದದೆ ಬರೆಯದಿದ್ದರು ಚಂದ ॥
ವಾದಿಸುತಿದ್ದರೂ । ವಾದವನಳಿದರೂ ।
ವೇದಾಂತಿಯಾದರೂ ಸಿದ್ಧಾಂತಿಯಾದರೂ ॥ ೩ ॥
ಕುಲದೊಳಿದ್ದರು ಚಂದ । ಕುಲವ ಬಿಟ್ಟರೂ ಚಂದ ।
ಸಲೆ ಕರ್ಮ ನಡೆಸಲು ಬಿಡಲು ಚಂದ ॥
ಬಲು ಶೂರನಾದರೂ । ರಣ ಹೇಡಿಯಾದರೂ ।
ಇಳೆಯಾಣ್ಮನಾದರೂ ಸಲೆ ಭಂಡನಾದರೂ ॥ ೪ ॥

ತಿರಿದುಣ್ಣು ತಿರೆ ಚಂದ । ಕರೆದಿಕ್ಕು ತಿರೆ ಚಂದ ।
ಗಿರಿಗುಹಾಂತರ ವಾಸಿಯಾದರೂ ಚಂದ ॥
ಗುರುಭಕ್ತನಾದರೂ । ಗುರುಶಿಷ್ಯನಾದರೂ ।
ಗುರುಮಹಾಲಿಂಗನೆ ತಾನೆ ಆಗಿದ್ದರೆ ॥ ೫ ॥

ಲ

ಪರಮಾತ್ಮನ ನಿಯತಿ ಮತ್ತು ಸ್ವಪ್ರಯತ್ನ

(ಷಟ್ಪದಿ)

ದೇವಗಂಗೆಯೊಳುಳ್ಳವಗೆ ದುರಿ-
ತಾವಳಿಗಳುಂಟೆ, ವಿಚಾರಿಸೆ
ಪಾವುಗಳ ಭಯವುಂಟೆ, ವಿಹಗಾಧಿಪನ ಮಂದಿರದಿ ॥
ಜೀವಕರ್ತೃತ್ವವ ಮರೆತು ಪ-
ರಾವರೇಶನೆ ಕರ್ತೃಯೆಂದರಿ-
ದಾವ ಕರ್ಮವ ಮಾಡಿದರೂ ಲೇಪಿಸವು ಕರ್ಮಗಳು ॥ ೧ ॥

ಏನು ಮಾಡುವ ಪುಣ್ಯಪಾಪಗ-
ಳಾನೆ ಮಾಡುವೆನೆಂಬುವಾಧಮ
ಹೀನ ಕರ್ಮಕೆ ಪಾತ್ರ ನಾ ಪುಣ್ಯಕ್ಕೆ ಹರಿಯೆಂಬ ॥
ಮಾನವನು ಮಧ್ಯಮನು ದ್ವಂದ್ವಕೆ
ಶ್ರೀನಿವಾಸನೆ ಕರ್ತೃಯೆಂದು ಸ-
ದಾನುರಾಗದಿ ನೆನೆದು ಸುಖಿಸುವರೆ ನರೋತ್ತಮರು ॥ ೨ ॥

ಪ್ರಕರಣ ಹತ್ತು

ದೇವ-ಭಕ್ತರ ಸಂಬಂಧ

೧

ನಿನ್ನ ಮಾಯೆ ಜಗತ್ತನ್ನು ಸುತ್ತಿದರೆ, ಎನ್ನ ಪ್ರೇಮವು ನಿನ್ನನ್ನು ಸುತ್ತಿರುವದು

(ವಚನ)

ಜಗವ ಸುತ್ತಿಪ್ಪುದು ನಿನ್ನ ಮಾಯೆಯಯ್ಯಾ
ನಿನ್ನ ಸುತ್ತಿಪ್ಪುದು ಎನ್ನ ಮನ ನೋಡಯ್ಯಾ.
ನೀನು ಜಗಕೆ ಬಲ್ಲಿದನು
ನಾನು ನಿನಗೆ ಬಲ್ಲಿದನು ಕಂಡಯ್ಯಾ.
ಆನು ನಿನ್ನೊಳಗೆ ನೀನು ಎನ್ನೊಳಗೆ
ಕರಿಯು ಕನ್ನಡಿಯೊಳಡಗಿದಂತಯ್ಯಾ
ಎನ್ನೊಳಗೆ ನೀನಡಗಿದೆ ಕೂಡಲಸಂಗಮದೇವಾ.

೨

ಪರಮಾತ್ಮನು ಸರ್ವಸಮರ್ಥನು

(ವಚನ)

ಹರನೀವ ಕಾಲಕ್ಕೆ ಸಿರಿಯು ಬೆನ್ನಲಿ ಬಕ್ಕು
ಹರಿದು ಹೆದ್ದೊರೆಯು ಕೆರೆ ತುಂಬಿದಂತಯ್ಯಾ.
ನೆರೆಯದ ವಸ್ತು ನೆರೆವುದು ನೋಡಯ್ಯಾ.
ಆರಸು ಪರಿವಾರ ಕೈವಾರ ನೋಡಯ್ಯಾ.
ಪರಮ ನಿರಂಜನನೆ ಮರೆದ ಕಾಲಕ್ಕೆ
ತುಂಬಿದ ಹರವಿಯ ಕಲ್ಲು ಕೊಂಡಂತೆ ಕೂಡಲಸಂಗಮದೇವಾ.

೩

ಈ ಸಂಕಟ ಸಮಯದಲ್ಲಿ ನಿನ್ನ ಪಾದಾರವಿಂದವ ತೋರಯ್ಯ ಪ್ರಭೋ!

[ರಾಗ-ಭೈರವಿ (ಕರ್ನಾಟಕಿ), ತಾಲ-ದೀಪಚಂದಿ]

ಇಂದು ಎನಗೆ ಗೋವಿಂದ, ನಿನ್ನ ಪಾದಾರ- |
ವಿಂದವ ತೋರೋ ಮುಕುಂದ ಇಂದಿರೆ ರಮಣ || ಪ ||

ಸುಂದರ ವದನನೆ ನಂದಗೋಪನ ಕಂದ ।
ಮುಂದತೋದ್ಧರ ಆನಂದ, ಇಂದಿರೆ ರಮಣ ॥ ಅ.ಪ. ॥

ನೊಂದೆನಯ್ಯ ಭವಬಂಧನದೊಳು ಸಿಲುಕಿ ।
ಮುಂದೆ ಕಾಣದೆ ದಾರಿ ಕುಂದಿದೆ ಜಗದೊಳು ॥
ಕಂದನಂತೆಂದೆನ್ನ ಕುಂದುಗಳೆಣಿಸದೆ ।
ತಂದೆ ಕಾಯೊ ಕೃಷ್ಣ ಕಂದರ್ಪಪಿತನೆ ॥ ೧ ॥

ಮೂಢತನದಿ ಬಲು ಹೇಡಿ ಜೀವನಾಗಿ ।
ದೃಢಭಕುತಿಯನು ಮಾಡಲಿಲ್ಲವೊ ಹರಿಯೆ ॥
ನೋಡಲಿಲ್ಲವೊ ನಿನ್ನ ಪಾಡಲಿಲ್ಲವೊ ಮಹಿಮೆ ।
ಗಾಡಿಕಾರ ಕೃಷ್ಣ ಬೇಡಿಕೊಂಬೆನೊ ನಿನ್ನ ॥ ೨ ॥

ಧಾರುಣಿಯೊಳು ಭೂಭಾರ-ಜೀವನನಾಗಿ ।
ದಾರಿತಪ್ಪಿ ನಡೆದೆ ಸೇರಿದೆ ಕುಜನರ ॥
ಆರೂ ಕಾಯುವರಿಲ್ಲ ಸಾರಿದೆ ನಿನಗಯ್ಯ ।
ಧೀರ ವೇಣುಗೋಪಾಲ ಪಾರಗಾಣಿಸೊ ಭವ ॥ ೩ ॥

೪

ಎನ್ನ ಕರೆಗೆ ಮಾರುತ್ತರವನ್ನು ನೀಡಬಾರದೆ ?

(ರಾಗ-ಭೂಪ, ತಾಲ-ದೀಪಚಂದಿ)

ಓ ಎನ್ನಬಾರದೆ ಹರಿಯೆ ನಾ ಕರೆದರೆ ।
ಓ ಎನ್ನಬಾರದೆ ಹರಿಯೆ ॥ ಪ. ॥

ಹಾಲವ ಬೇಡುತ ಮೊರೆಯಿಡಲುಪಮನ್ಯು ।
ಬಾಲಗೆ ಧ್ವನಿದೋರಿದಂತೆ ॥
ಜಾಲವರಿದು ಸರೋವರದಲಿ ಕರೆದ ಶುಂ- ।
ಡಾಲಗೆ ಧ್ವನಿದೋರಿದಂತೆ ॥
ವ್ಯಾಳ್ಯಕ್ಕೆ ಒದಗೆಂದು ರಾತ್ರಿಲೆ ಕರೆದ ಪಾಂ- ।
ಚಾಲಿಗೆ ಧ್ವನಿದೋರಿದಂತೆ ॥
ಕಾಲಕಾಲಕೆ ಬಂದು ಮೊರೆಯಿಡೆ ಸುರಮುನಿ ।
ಜನಕೆ ಮೈದೋರಿ ಧ್ವನಿದೋರಿದಂತೆ ॥ ೧ ॥

ದೇವ ನೀ ಮರೆಯಾಗೆ ಹುಂಕರಿಸೊದರಲು ।
ಆವಿಗೆ ಧ್ವನಿದೋರಿದಂತೆ ॥

ಬಂದೊಳಿಗಕೆ ನಿನ್ನ ಪಾಂಡವರೊದರಲು ।
ನಿಂತು ನೀ ಧ್ವನಿದೋರಿದಂತೆ ॥
ಇಂದಾದ ಕಲಿಯುಗ-ದಾಸರ ಮಾತಿಗೆ ।
ಬಂದು ನೀ ಧ್ವನಿದೋರಿದಂತೆ ॥
ತಂದೆ ಮಹಿಪತಿ ನಂದನ ಪ್ರಭು ಗೋ- ।
ವಿಂದ ಮುಕುಂದೆನ್ನ ಸಲುಹೆಂಬ ಮೂಢಗೆ ॥ ೨ ॥

೫

ಪರಮಾತ್ಮನ ವಿರುದ್ಧ ಸಲ್ಲಿಸಲಾದ ಅಪರಾಧಗಳ ಪಟ್ಟಿ

ಏನು ಮಾಡಿದಿ ಕೇಳೆನ್ನ ದೇವಾ ।
ಏನು ಮಾಡಿದಿ ಕೇಳೆನ್ನ ॥ ಪ. ॥

ಏನು ಮಾಡಿದಿ ಎಂತೆಂತ ಹೇಳಲಿ ।
ಹಿತವು ಎಲ್ಲ ನಿನ್ನಲ್ಲಿರಲು ॥
ಘನ ಘಾತಕತನದಿಂದಲಿ ಎನ್ನ
ನೀ ಕೆಡಿಸಿದಿ ಸಾಂಬಾ ॥ ೧ ॥

ಎನ್ನೊಳು ನೀನು ಕೂಡಿ ಆಡಿದಿ ।
ಆಡುತ ಬಂದು ಘಾಸಿ ಹಾಕಿದಿ ॥
ಘಾಸಿಯ ಜರಿದು ಜಾರಿ ನಿಂತಿದಿ ।
ಇದು ಅಲ್ಲಾ ರೀತಿ ಸಾಂಬಾ ॥ ೨ ॥

ಖುಳ್ಳ ದೇಹದೊಳು ಘೂಳ್ಯಾಗಿ ಮೆರೆದಿ ।
ದುಃಖಕೆ ಎನ್ನ ಗುರಿಮಾಡಿದಿ ॥
ಭಿನ್ನವಿಲ್ಲದಲಿ ಭಿನ್ನ ಮಾಡಿದಿ ॥
ಭುಲವಿಗೆ ಮರುಳಾದಿ ಸಾಂಬಾ ॥ ೩ ॥

ಘಾಸಿಯೊಳಗೆ ಎನ್ನ ಘಾಸಿ ಮಾಡುವದೆ ।
ಈಸು ಕಾಲ ನಿನ್ನ ದಯದಲ್ಲಿದ್ದೆ ॥
ಹರುಷದಿಂದ ಶಿವ ಸದ್ಗುರು ಎನ್ನಲು ।
ಭವದ ಘಾಸಿ ನೀ ಹರಿಸಿದಿ ಸಾಂಬಾ ॥ ೪ ॥

ಜೀವ ಶಿವ ಎಂಬ ಭೇದ ನಿನ್ನಲ್ಲೆ ।
ಈ ಸಂಬಂಧವ ನಡಿದು ನೋಡಲೆ ॥
ತಕವಾತಕವೀ ಹಜ್ಜಬ್ಯಾಡಲೆ ।
ಹುಜ್ಜಾ ನೀ ಕೇಳೊ ಸಾಂಬಾ ॥ ೫ ॥

ಜೀವದ ಇಚ್ಛೆಲಿ ಆಗುವದಿಲ್ಲ ।
ಶಿವನ ಇಚ್ಛೆ ನಡಿಸುವದೆಲ್ಲ ॥
ಗುರುಲಿಂಗ ಜಂಗಮನ ಪಾದಕ ಹೊಂದಿ ।
ದೋಷವ ಕಳಕೊಳ್ಳೊ ಸಾಂಬಾ ॥ ೬ ॥

೬

ಮಾನವನ ವಿಚಾರ-ಆಚಾರಗಳಿಗೆಲ್ಲ ಪರಮಾತ್ಮನೆ ಹೊಣೆಗಾರ

[ರಾಗ-ಭೈರವಿ (ಕರ್ನಾಟಕಿ), ತಾಲ-ದೀಪಚಂದಿ]

ನನ್ನಿಂದ ನಾನು ಜನಿಸಿ ಬಂದೆನೆ ಕೃಷ್ಣಾ ।
ಲೇಶವಾದರೂ ನನ್ನಾಧೀನವಿದ್ದರೆ ತೋರು ॥ ಪ ॥

ನಿನ್ನ ಪ್ರೇರಣೆಯಿಂದ ನಡೆದು ನುಡಿದ ಮೇಲೆ
ನಿನ್ನದು ತಪ್ಪೊ ಎನ್ನದು ತಪ್ಪೊ ಪರಮಾತ್ಮ ॥ ಆ.ಪ. ॥

ಎಲವುಗಳೆಲ್ಲ ಜೊತೆಮಾಡಿ ನರಗಳ ।
ಹೊಲೆಚರ್ಮವ ಹೊದಿಸಿ ದೇಹದೊಳು ॥
ಮಲಮೂತ್ರಗಳನ್ನು ಬಲಿಸಿ ಹೃದಯದಲ್ಲಿ ।
ನೆಲಸಿ ಚೇತನವನಿತ್ತವ ನೀನಲ್ಲವೆ ॥ ೧ ॥

ಜನನಿಯ ಜಠರದಿ ನವಮಾಸವು ।
ಘನದಿ ನೀ ಪೋಷಿಸುತಿರೆ ನಾನು ॥
ಜನಿಸಲಾರೆನು ಎನೆ ಜನಿಸೆಂದಿಕ್ಕಳದಿಂದ ।
ವನಜಾಕ್ಷ ನೂಕಿದವನು ನೀನಲ್ಲವೆ ॥ ೨ ॥

ಜನಿಸಿದಾರಭ್ಯ ಇಂದಿನ ಪರಿಯಂತ ।
ಘನ ಘನ ಪಾಪ ಸುಕರ್ಮಂಗಳ ॥
ಮನಕೆ ಬೋಧಿಸಿ ಮಾಡಿಸಿ ಮುಂದೆ ಇದನೆಲ್ಲ ।
ಅನುಭವಿಸುವದು ನಾನೊ ನೀನೊ ದೇವಾ ॥ ೩ ॥

ಅಂಧಕನ ಕೈಲಿ ಕೋಲಿತ್ತು ಕರೆದೊಯ್ವನ ।
ಮುಂದಾಡಿ ತಪ್ಪಿ ಗುಂಡಿಗೆ ಕೆಡಹಲು ॥
ಅಂಧಕನ ತಪ್ಪೊ ಮುಂದಾಳಿನ ತಪ್ಪೊ ।
ಹಿಂದಾಡಬೇಡ ಎನ್ನಲ್ಲಿ ತಪ್ಪಿಲ್ಲವೊ ॥ ೪ ॥

ಕ್ಷೀರದೊಳಗದ್ದು ನೀರೊಳಗದ್ದು ನೋವಿಂದ।
ಹೇರೊಪ್ಪಿಸಿದ ಮೇಲೆ ಸುಂಕವೆ ಸಿರಿಕೃಷ್ಣಾ ॥
ಮಾಯಾರಹಿತ ಕಾಗಿನೆಲೆಯಾದಿ ಕೇಶವ।
ಕಾಯಯ್ಯ ತಪ್ಪನೆಣಿಸದೆ ವಿತಲರಾಯ ॥ ೫ ॥

೭

ದೇವ-ಭಕ್ತರಲ್ಲಿಯ ಸಮಾನತ್ವದ ಅನುಭಾವ

(ರಾಗ-ಭೈರವಿ, ತಾಲ-ದೀಪಚಂದಿ)

ಅಂದಿಲ್ಲ ಸ್ವಾಮಿ ಇಂದಿಲ್ಲ। ॥ ಪ ॥
ಎಂದಿಗಾದರು ನಿಮ್ಮನಗಲಿ ನಾ ಇಲ್ಲ ॥ ಅ.ಪ. ॥
ನಿರ್ಬೈಲನು ನೀನು। ನಿರ್ವಿಕಾರನು ನಾನು।
ಸಗುಣರೂಪ ನೀನು। ಶರಣವಾಡುವೆ ನಾನು ॥ ೧ ॥
ಪಂಚವದನ ನೀನು। ಪಾದ ನಂಬಿದೆ ನಾನು।
ಜಗಭರಿತ ನೀನು। ಜಗದ ಒಳಗೆ ನಾನು ॥ ೨ ॥
ಪ್ರಣವಸ್ವರೂಪ ನೀನು। ಪತಿಸಿ ನೋಡುವೆ ನಾನು।
ಗುರುಲಿಂಗಜಂಗವು ನೀನೆ। ನಾನೂ ನೀನೆ ॥ ೩ ॥

೮

ಸದಾ ಎನ್ನ ಹೃದಯದಲ್ಲಿ ವಾಸ ಮಾಡಯ್ಯ!

(ರಾಗ-ಭೈರವಿ, ತಾಲ-ದಾವರಾ)

ಸದಾ ಎನ್ನ ಹೃದಯದಲ್ಲಿ ವಾಸಮಾಡೊ ಶ್ರೀಹರಿಯೆ।
ನಾದಮೂರ್ತಿ ನಿಮ್ಮ ಪಾದ ಮೋದದಿಂದ ಭಜಿಸುವೆ ॥ ಪ ॥
ಜ್ಞಾನವೆಂಬ ನವರತ್ನದ ಮಂಟಪದ ಮಧ್ಯದಲ್ಲಿ।
ಗಾನಲೋಲನ ಕುಳ್ಳಿರಿಸಿ ಧ್ಯಾನದಿಂದ ಭಜಿಸುವೆ ॥ ೧ ॥
ಭಕ್ತಿರಸ ತುಂಬಿ ಮುತ್ತು ಮಾಣಿಕದ ಹರಿವಾಣದಿ।
ಮುಕ್ತನಾಗಬೇಕು ಎಂದು ಮುತ್ತಿನಾರತಿ ಎತ್ತುವೆ ॥ ೨ ॥
ನಿನ್ನ ನಾನು ಬಿಡುವನಲ್ಲ ಎನ್ನ ನೀನು ಬಿಡಲು ಸಲ್ಲ।
ಘನ್ನಮಹಿಮ ವಿಜಯವಿಠಲ ನಿನ್ನ ಭಕ್ತರ ಕೇಳು ಸೊಲ್ಲ ॥ ೩ ॥

ಪ್ರಕರಣ ಹನ್ನೊಂದು

ಪರಮಾತ್ಮನ ಸ್ವರೂಪ

೧

ಸಮಗ್ರ ಆಧ್ಯಾತ್ಮ-ಜೀವನದ ಸಂಕ್ಷೇಪರೂಪ

(ರಾಗ–ಕಾಂಬೋದಿ, ತಾಲ–ಝಂಪೆತಾಲ)

ಆಂತರಂಗದ ಕದವು ತೆರೆಯಿತೆಂದು ।
ಇಂತು ಪುಣ್ಯದ ಫಲದ ಪ್ರಾಪ್ತಿಯಾಯಿತು ಎನಗೆ ॥ ಪ ॥

ಬಸು ದಿನವಾಯಿತೊ ಬೀಗ ಮುದ್ರೆಯ ಮಾಡಿ ।
ವಾಸವಾಗಿದ್ದರೈ ದುರುಳರಲ್ಲಿ ॥
ಪೋಸವಾಯಿತು ಇಂತು ಬರಿದೆ ಇಂದಿನ ತನಕ ।
ಸೂಸಿರ್ದ ತಮಸಿನಿಂ ಕಾಣುತಿದ್ದಿಲ್ಲ ॥ ೧ ॥

ಹರಿಕರುಣವೆಂಬುವ ಕೀಲಿಕೈ ದೊರೆಯಿತು ।
ಗುರುಕರುಣವೆಂಬಂಥ ಶಕ್ತಿಯಿಂದೆ ॥
ಪರಭಾಗವತರ ಸಹವಾಸವನು ನಾ ಮಾಡಿ ।
ಹರಿಭಜನೆಯಿಂದಲೀ ಬೀಗವನು ತೆಗೆದೆ ॥ ೨ ॥

ಸುತ್ತಲಿದ್ದವರೆಲ್ಲ ಎತ್ತಲೋ ಓಡಿದರು ।
ತತ್ಪಚಿಂತನೆಯೆಂಬ ದೀಪವನ್ನು ॥
ಎತ್ತಾಗಿ ಹಿಡಕೊಂಡು ದ್ವಾರವನು ಪೋಗಲು ।
ಎತ್ತ ನೋಡಿದರತ್ತ ಶೃಂಗಾರ ಸದನ ॥ ೩ ॥

ಹೊರಗೆ ದ್ವಾರವು ನಾಲ್ಕು ಒಳಗೈದು ದ್ವಾರಗಳು ।
ಒಳದಾರಿಯಲ್ಲಿ ಪ್ರಾಣಾದಿ ಪ್ರಿಯರು ॥
ಮಿರುಗುವ ಮಧ್ಯಮಂಟಪದಿ ಕೋಟಿ ರವಿಯಂಥ
ಸರಸಿಜಾಸನ ಪಿತನ ಅರಮನೆಯ ಸೊಬಗು ॥ ೪ ॥

ಸ್ವಮೂರ್ತಿಗಣಮಧ್ಯ ಸಚ್ಚಿದಾನಂದೈಕ್ಯ ।
ರಮೆಯೊಡೆಯ ನಗೆಮೊಗದಿ ಮಿನುಗುತಿರುವ ॥
ಕಮಲಜಾದಿಗಳಿಂದೆ ಸ್ತುತಿಸಿಕೊಳುತಿಹ ಹೃದಯ
ಕಮಲದೊಳಗಿಹ ವಿಜಯವಿಠಲನನು ಕಂಡೆ ॥ ೫ ॥

೨

ಪರಮಾತ್ಮನ ಸಗುಣರೂಪದ ವರ್ಣನೆ

(ರಾಗ-ದೇಸ, ತಾಲ-ಕೇರವಾ)

ಕೃಷ್ಣ ಮೂರ್ತಿ ಕಣ್ಣ ಮುಂದೆ ನಿಂತಿದಂತಿದೆ ॥ ಪ ॥
ಮಸ್ತಕದಲಿ ಮಾಣಿಕದ ಕಿರೀಟ ।
ಕಸ್ತುರಿ ತಿಲಕದಿಂದೆಸೆವ ಲಲಾಟ ॥
ಹಸ್ತದಿ ಕೊಳಲನೂದುವ ಓರೆನೋಟ ।
ಕೌಸ್ತುಭ ಎಡಬಲದಲಿ ಓಡ್ಯಾಟ ॥ ೧ ॥
ಮುಘಮುಘಿಸುವ ಸೊಬಗಿನ ಸುಳಿಗುರುಳು ।
ಜಿಗರು ತುಲಸಿವನಮಾಲೆಯ ಕೊರಳು ॥
ಬಗೆಬಗೆ ಹೊನ್ನುಂಗುರವಿಟ್ಟ ಬೆರಳು ।
ಸೊಬಗಿನ ನಾಭಿಯ ತಾವರೆಯರಳು ॥ ೨ ॥
ಉಡುದಾರ ಒಡ್ಯಾಣ ನಿಖಿಲಾಭರಣಾ ।
ಬಿಡಗು ಪೀತಾಂಬರ ರವಿಶತಕಿರಣ ॥
ಕಡಗ ಪೀತಾಂಬರ ಗೆಜ್ಜೆಗಳನ್ನಿಟ್ಟ ಚರಣ ।
ಒಡೆಯ ಶ್ರೀ ಪುರಂದರವಿಠಲನ ಕರುಣಾ ॥ ೩ ॥

೩

ಕನಸಿನ ದರ್ಶನ

(ರಾಗ-ಶಂಕರಾಭರಣ, ತಾಲ-ಆಟತಾಲ)

ಕಂಡೆನಾ ಕನಸಿನಲಿ ಗೋವಿಂದನ ॥ ಪ ॥
ಕಂಡೆನಾ ಕನಸಿನಲಿ ಕನಕರತ್ನದ ಮಣಿಯ
ನಂದನ ಕಂದ ಮುಕುಂದನ ಚರಣವ ॥ ಅ. ಪ. ॥
ಆಂದುಗೆ ಕಿರುಗೆಜ್ಜೆ ಘಲಿರೆಂಬ ವಾದ್ಯದಿ ।
ಬಂದು ಕಾಳಿಂಗನ ಹೆಡೆಯನೇರಿ ॥
ಧಿಂ ಧಿಮಿ ಧಿಮ್ಮಿಕೆಂದು ತಾಳಗತಿಗಳಿಂದಾ- ।
ನಂದದಿ ಕುಣಿವ ಮುಕುಂದನ ಚರಣವ ॥ ೧ ॥
ಉಟ್ಟ ಪೀತಾಂಬರ ಉಡಿಯ ಕಾಂಚಿಯ ದಾಮ ।
ತೊಟ್ಟ ಮುತ್ತಿನ ಹಾರ ಕೌಸ್ತುಭವು ॥
ಕಟ್ಟಿದ ವೈಜಯಂತೀ ತುಳಸೀ ಮಾಲೆ ।
ಇಟ್ಟ ದ್ವಾದಶನಾಮ ನಿಗಮಗೋಚರನ ॥ ೨ ॥

ಕಿರುಬೆರಳಿನ ಮುದ್ರೆಯುಂಗುರ ಮುಂಗೈಯ ।
ಕರದಲ್ಲಿ ಕಂಕಣ ನಳಿತೋಳುಗಳ ॥
ವರಚತುರ್ಭುಜ ಶಂಖಚಕ್ರದಿ ಮೆರೆವನ ।
ನಿರುತದಿ ಒಪ್ಪುವ ಕರುಣಾಮೂರುತಿಯ ॥ ೩ ॥
ಬಣ್ಣದ ತುಟಿ ಭಾವರಚನೆಯ ಸುಲಿಪಲ್ಲು ।
ಸಣ್ಣ ನಗೆಯ ನುಡಿ ಸವಿಪಾತಿನ ॥
ಪುಣ್ಯಚರಿತ್ರನ ಪೊಳೆವ ಕಿರೀಟನ ।
ಕಣ್ಣು ಮನದಣಿಯದು ಕಂಸಾರಿ ಕೃಷ್ಣನ ॥ ೪ ॥
ಮಂಗಳ ವರ ತುಂಗಭದ್ರದಿ ಮೆರೆವನ ।
ಅಂಗಜಪಿತ ಶ್ರೀ ಲಕ್ಷ್ಮೀಪತಿಯ ॥
ಶೃಂಗಾರ ಮೂರುತಿ **ಪುರಂದರ ವಿಠಲನ** ।
ಕಂಗಳಿಂದ ಕಂಡೆ ಹಿಂಗಿತು ಭವಭಯ ॥ ೫ ॥

೪

ಪರಮಾತ್ಮನ ಸಗುಣ-ನಿರ್ಗುಣ ರೂಪ

(ರಾಗ-ಕಾಫೀ, ತಾಲ-ಕೇರವಾ)

ಕೂಸನು ಕಂಡೀರಾ ಜ್ಞಾನಿಗಳೆಲ್ಲ ॥ ಪ ॥
ಸಾಸಿರನಾಮದ ಶತಕೋಟಿ ತೇಜದ ।
ಸೂಸುವ ಸುಖಮಯ ಜ್ಞಾನದ ಕೂಸು ॥ ೧ ॥
ಜ್ಞಾನಿಗಳ ಹೃದಯದಿ ಮಿನುಗುವ ಕೂಸು ।
ದೀನ ದಾಸರಿಗೆ ಕಾಣುವ ಕೂಸು ॥ ೨ ॥
ತಾನೆ ಬಲ್ಲುದು ತನ್ನ ಮಹಿಮೆಯ ಕೂಸು ।
ಆಕಾರವಿದ್ದು ನಿರಾಕಾರ ಕೂಸು ॥ ೩ ॥
ಘನವಾದ ಮಹಿಮೆಗೆ ಕಾರಣ ಕೂಸು ।
ಚಿನುಮಯ **ಪುರಂದರ ವಿಠ್ಠಲ** ಕೂಸು ॥ ೪ ॥

೫

ಪರಮಾತ್ಮನ ದಿವ್ಯ ದರ್ಶನದಿಂದ ಕಂಗಳ ಬರ ಹಿಂಗುವದು

(ಭಜನ)

ಹೊಳೆವ ಕೆಂಜೆಡೆಗಳ, ಮುಡಿಮುಕುಟ
ಒಪ್ಪುವ ಸುಲಿಪಲ್ಲ, ನಗೆ-ಮೊಗದ

ಕಂಗಳ ಕಾಂತಿಯಿಂ ಈರೇಳು ಭುವನಮಂ ಬೆಳಗುವ
ದಿವ್ಯ ಸ್ವರೂಪನ ಕಂಡೆ ನಾನು;
ಕಂಡೆನ್ನ ಕಂಗಳ ಬರ ಹಿಂಗಿತ್ತಿಂದು.
ಜಗದಾದಿಶಕ್ತಿಯೊಳು, ಬೆರಸಿಯೊಡನಾಡುವ
ಪರಮಗುರು **ಚೆನ್ನಮಲ್ಲಿಕಾರ್ಜುನನ**
ನಿಲವ ಕಂಡು ಬದುಕಿದೆನು.

೬

ಸಗುಣದೇವವಾದಿಯ ನಿರ್ಗುಣ ಬ್ರಹ್ಮನ ವರ್ಣನೆ

(ರಾಗ-ದರಬಾರಿ ಕಾನಡಾ, ತಾಲ-ತ್ರಿತಾಲ)

ಬ್ರಹ್ಮಾನಂದದ ಸಭೆಯೊಳಗಲ್ಲಿ
ಸುಮ್ಮನೆ ಇರುತಿಹುದೇನಯ್ಯ ॥ ಪ ॥
ಮೂಡದು ಕೂಡದು ಉಣ್ಣದು ಮಾಣದು।
ಕಾಡದು ಬೇಡದು ಕಂಗೆಡದು ॥
ನಾಡ ಮಾತುಗಳ ಬಲ್ಲದು ಆಡದು।
ರೂಢಿಯೊಳಗಿರುತಿಹುದೇನಯ್ಯ ॥ ೧ ॥
ಪೊಡವಿಗಧಿಕರೆಂಬುವರಿಗೆ ಬಲ್ಲದು।
ಕಡೆ ಮೊದಲಿಲ್ಲದ ಒಡಲಿಹುದು ॥
ಬೆಡಗನರಿವೆವೆಂಬವರಿಗಗೋಚರ।
ಪೊಡವಿಯೊಳಗಣ ಭಕ್ತರ ಬಲ್ಮ್ಮದು ॥ ೨ ॥
ನಿಲ್ಲದು ನಿಲುಕದು ಎಲ್ಲಿಗೆ ಪೋಗದು।
ಬಲ್ಲೆನೆಂಬವರಿಗೆ ಅಳವಡದು ॥
ಬಲ್ಲಿವ ನಮ್ಮ **ಪುರಂದರ ವಿಠಲ**ಗಲ್ಲದೆ।
ತಿಳಿಯದು ಮೂಜಗದೊಳಗೆ ॥ ೩ ॥

೭

ದೇವರು ಅಣೋರಣೀಯಾನ್ ಮಹತೋ ಮಹೀಯಾನ್ ಇರುವನು

(ಸಜಸ)

ಅಯ್ಯಾ ! ಪಾತಾಳವಿತ್ತಿತ್ತ,
ಶ್ರೀಪಾದವತ್ತತ್ತ.
ಬ್ರಹ್ಮಾಂಡವಿತ್ತಿತ್ತ,
ಮಣಿಮುಕುಟವತ್ತತ್ತ.

ಅಯ್ಯಾ ! ದಶದಿಕ್ಕು ಇತ್ತಿತ್ತ,
ದಶಭುಜಗಳತ್ತತ್ತ.
ಚೆನ್ನಮಲ್ಲಿಕಾರ್ಜುನಯ್ಯಾ !
ನೀವೆನ್ನ ಕರಸ್ಥಲಕೆ ಬಂದು
ಜುಳುಕಾದಿರಯ್ಯಾ !

ಲ

ನಿರ್ಗುಣ ಸಾಕ್ಷಾತ್ಕಾರದ ಅವರ್ಣನೀಯ ಆನಂದ

(ರಾಗ-ಜಂಗಲಾ, ತಾಲ-ಕೇರವಾ)

ಕಾಣಬಾರದಂಥಾ ವಸ್ತು ಕಂಡೆನೊ ಗುರುರಾಯಾ ।
ಕಂಡ ಸುಖವ ಕೇಳಿದರೆ ಹೇಳಲಿಕ್ಕೆ ಬಾರದಯ್ಯಾ ॥ ಪ ॥

ಕೈ ಇಲ್ಲಾ ಕಾಲು ಇಲ್ಲಾ ।
ಮೈ ಇಲ್ಲಾ ಮಾರಿ ಇಲ್ಲಾ ॥
ಭವಬಂಧನದ ದುಃಖವು ।
ನಮಗಿಲ್ಲಾ ಗುರುರಾಯಾ ॥ ೧ ॥

ಹೆಣ್ಣು ಅಲ್ಲಾ ಗಂಡು ಅಲ್ಲಾ ।
ಪೇಳಲಿಕ್ಕೆ ಅಳವು ಇಲ್ಲಾ ॥
ಕಣ್ಣಿನಿಂದ ಕಂಡದ್ದನ್ನು
ತಾನೆ ಬಲ್ಲಾ ಗುರುರಾಯಾ ॥ ೨ ॥

ಜಪವಿಲ್ಲಾ ತಪವಿಲ್ಲಾ ।
ನಿತ್ಯನೇಮಗಳು ಇಲ್ಲಾ ॥
ಉಪವಾಸದ ತಾಪವು ।
ನಮಗಿಲ್ಲಾ ಗುರುರಾಯಾ ॥ ೩ ॥

ಮುಟ್ಟಿ ಕೊಟ್ಟಿ ಗುರುರಾಯಾ ।
ತನ್ನ ಕೃಪಾದಯದಿಂದ ॥
ಸೃಷ್ಟಿಯೊಳು **ಕೂಡಲೂರೇಶಾ** ।
ಬಟ್ಟಬೈಲ ಪ್ರಭೆಯಾದಾ ॥ ೪ ॥

೯

ಆತ್ಮಾನುಭವಿಯು ಜಗತ್ತಿನ ಪಾತಕಗಳನ್ನು ಪರಿಹರಿಸುವನು

(ರಾಗ-ಕಾಂಬೋಧಿ, ತಾಲ-ದೀಪಚಂದಿ)

ನೋಡಿರಿ ಬ್ರಹ್ಮನಾಟವ । ನೀವು ।
ನೋಡಬೇಕಾದರೆ ಮಾಡಿ ಗುರುವಿನ ಸೇವಾ ॥ ಪ ॥

ಕಾಲಿಲ್ಲದೆ ನಡೆವುದು । ಕರವಿಲ್ಲದೆ ಹಿಡಿವುದು ।
ಗುಹ್ಯವಿಲ್ಲದೆ ಇಂದ್ರಿಯ ಸುಖಿಸುವದು ॥
ಮೈಯಿಲ್ಲಾ ಮುಸುಕಿತು । ಮಲಮೂತ್ರ ಬಿಡಿಸಿತು ।
ಹುಯ್ಯಲಾಡುತ ಬಂದು ತಾನೆ ತಾನಾದದ್ದು ॥ ೧ ॥

ಕಿವಿಯಿಲ್ಲದೆ ಕೇಳುವದು । ಬಾಯಿಲ್ಲದೆ ಉಂಬುವದು ।
ನಯನವಿಲ್ಲದೆ ನೋಟ ನೋಡುವದು ॥
ಶೈಲವಿಲ್ಲದ ಜ್ಯೋತಿ । ಬೈಲೊಳು ನಿಂತಿತು ।
ಬೈಲಿಗೆ ಬೈಲು ನಿರ್ಬೈಲ ತಾನಾದದ್ದು ॥ ೨ ॥

ನೆಲೆಯಿಲ್ಲದ ಭೂಮಿಯ ಮೇಲೆ । ಎಲೆಯಿಲ್ಲದ ಗಿಡ ಹುಟ್ಟಿ ।
ದೊಡ್ಡ ದೊಂದು ಆದು ಹಣ್ಣಾಯಿತು ॥
ತಲೆಯಿಲ್ಲದೆ ಪೊತ್ತು । ಬೆಲೆಯು ಇಲ್ಲದೆ ಮಾರಿ ।
ಬಾಧೆ ತಕ್ಕೊಂಡ ನಮ್ಮ ಕೂಡಲೂರೇಶಾ ॥ ೩ ॥

ಪ್ರಕರಣ ಹನ್ನೆರಡು

ಪರಮಾತ್ಮನ ನಾಮ (ಭಾಗ ೧)

೧

ಪರಮಾತ್ಮನ ನಾಮಸ್ಮರಣೆಯೆ ಬ್ರಹ್ಮಜ್ಞಾನ !

(ರಾಗ-ದರಬಾರಿ, ತಾಲ-ತ್ರಿತಾಲ)

ಇದೇ ಬ್ರಹ್ಮಜ್ಞಾನ ನೋಡಿಕೊ ।
ಸದಾನಂದ-ಪರಮಾತ್ಮ ಬೋಧಮಯ ॥ ಪ ॥
ನಿಧಾನದೊಳು ನಿಜಹೃದಯ ಕಮಲದೊಳು ।
ಸುಧಾಕಿರಣ ಗುರುಪಾದವ ಕಾಣಲು ॥ ೧ ॥
ಯೋಗಿಯಾಗಿ ಸಂಭೋಗವಸಳಿದು ।
ರೋಗವಳಿದು ನಿಜರಾಗವ ನುಡಿಯಲು ॥ ೨ ॥
ವಸುಧೆಯೊಳಗೆ **ಶಿಶುನಾಳಧೀಶನ** ।
ಹೆಸರ ಪೊಗಳಿ ಐದಕ್ಷರ ನುಡಿಯಲು ॥ ೩ ॥

೨

ಹಿಂದಿನ ಸಂತರು ತಪಸ್ಸಿನಿಂದ ದೇಹವನ್ನು ದಂಡಿಸದೆ ಕೇವಲ ನಾಮದ ನೆರವಿನಿಂದಲೆ ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಂಡರು

(ರಾಗ-ದರಬಾರಿ, ತಾಲ-ದೀಪಚಂದಿ)

ಓಂ ನಮಃ ಶಿವಾ ಎನ್ನಿರೊ ಒಯ್ಯಾರದಿ ॥ ಪ ॥
ಓಂ ನಮಃ ಶಿವಾ ಎಂದು ಆಜಪರಿಸುರರೆಲ್ಲ ।
ಮುನ್ನ ಕೈವಲ್ಯವ ಪಡೆದರೆಂಬುದ ಕೇಳಿ ॥ ಅ.ಪ. ॥
ಜಪತಪ ವ್ರತವ್ಯಾತಕೆ, ತಾಮಸವೆಂಬ ।
ಕಪಟ-ಭ್ರಾಂತಿಗಳ್ಯಾತಕೆ ।
ಗುಪ್ತದಿ ಗುರುವಿನ ಚರಣಗಳ ಸ್ಮರಿಸಿ ।
ಮತಿಹೀನರಾಗದೆ ಹಗಲಿರುಳೆನ್ನದೆ ॥ ೧ ॥
ಮಾಸ ಪಕ್ಷಗಳ್ಯಾತಕೆ, ಉಪವಾಸದಿಂ ।
ದೇಹದಂಡನವ್ಯಾತಕೆ ॥
ನಾಶವಾಗುವ ದೇಹದ ಧ್ಯಾಸವ ಬಿಡು ತಮ್ಮಾ ।
ಈಶನ ನೆನೆಯೊ ನೀ ಮೋಸವ ಹೊಂದದೆ ॥ ೨ ॥

ಬಿಡದೆ ಇನ್ನಡಿಗಡಿಗೆ, ನೀರಲಕೇರಿ
ಮೃಡ ಪಂಚಾಕ್ಷರ ನುಡಿಗೆ ॥
ಬಿಡದೇಳು ಕೋಟಿಮಂತ್ರಕೆ ತಾಯಿ ಒಡಲಿದು ।
ಬಿಡಗಿನ ಶಿವನಾಮ ದೃಢದಿಂದ ಭಜಿಸಿರೋ ॥ ೬ ॥

೩

ಷಡಕ್ಷರೀ ಮಂತ್ರದ ಎಲ್ಲ ಅಕ್ಷರಗಳ ಅರ್ಥ

ಆರು ಅಕ್ಷರ ಭೇದ ಹರಿ ಕೇಳಲು ಬಂದ ।
ಸುರಮುನಿಗಳೆ ಕೇಳಿರಣ್ಣಾ ॥
ಮೂರು ಲೋಕದ ವರಮಂತ್ರ ತಂದನು ।
ಸಿದ್ಧರಾಮೇಶನು ತಿಳಿಯಿರಣ್ಣಾ ॥
ಓಂ ಎಂಬುವ ಅಕ್ಷರ ಬಲ್ಲವನಾದರೆ ।
ಓಂ ಕಾರ ಬೀಜ ನೋಡುವಿರಣ್ಣಾ ॥
ನ ಎಂಬುವ ಅಕ್ಷರ ನೀವರಿತಿರೆಂದರೆ ।
ನಿರಹಂಕಾರ ಬೀಜ ಕಾಣುವಿರಣ್ಣಾ ॥
ಮ ಎಂಬುವ ಅಕ್ಷರ ಬೀಜವ ತಿಳಿದರೆ ।
ಈರೇಳು ಲೋಕದ ಮರ್ಮ ನೋಡೀರಣ್ಣಾ ॥
ಶಿ ಎಂಬುವ ಅಕ್ಷರ ಆಕಾಶ ।
ಆ ಕಾರಣ ಬೀಜವ ಕಾಣಣ್ಣಾ ॥
ವಾ ಎಂಬುವ ಅಕ್ಷರ ವಾವ್ಯಾದಿಗಳ ।
ಗುರುತ ಹೇಳುವದಣ್ಣಾ ॥
ಯ ಎಂಬುವ ಅಕ್ಷರ ಯಾರಿಗೆ ನಿಲುಕಿಲ್ಲ ।
ತಾನು ತನ್ನನು ಬಲ್ಲನಣ್ಣಾ ॥
ಷಡಕ್ಷರ ಮುನಿಗಳು ಹೊಸ ಮಂತ್ರ ಹೇಳಿದರು ।
ಮರುಳ, ಕಾಡಸಿದ್ಧ, ಷಣ್ಮುಖ, ಸಿದ್ಧರಾಮ ॥
ಬಬಲಾದಿಯಲ್ಲಿ ಇರುತಾರಣ್ಣಾ ॥

೪

ಅಲ್ಲಮ ಪ್ರಭುವಿನ ನಾಮದ ಮಹಿಮೆ

(ವಚನ)

ಅ ಎಂಬ ವರ್ಣ ಐಶ್ವರ್ಯ ವರ್ಧಿಪುದು.
ಲ ಎಂಬ ವರ್ಣ ಲಕುಲೀಶ ಘನಪದಮಕ್ಕು.

ಮು ಎಂಬ ವರ್ಣ ಮಾಯಾಬ್ಧಿಯನು ದಾಟಿಪುದು.
ಪ್ರ ಎಂಬ ವರ್ಣ ಸತತ ಕಾಯದ ಹೀನ ಗುಣಂಗಳ
ಕತ್ತರಿಸಿ ಬಿಸುಟಿಪುದು, ಪ್ರಭೆಯನು ಕಾಣಿಪುದು.
ಭು ಎಂಬ ವರ್ಣ ಭೂತೇಶ್ವರನ ಕಾಣಿಪುದು.
ಒಯ್ಯಾರದಿಂ ನಂಬಿ ಆಲ್ಲಮ ಪ್ರಭು ಎಂಬ
ಮಂತ್ರವನು ಜಪಿಸುವದು.

೫

ಶ್ರೀಗುರು ಮಂತ್ರವನ್ನು ತುಂಬ ಪ್ರೀತಿಯಿಂದ ನೆನೆಯುತ್ತಿರು

ಶ್ರೀಗುರುಮಂತ್ರವ ರಾಗದಿ ಜಪಿಸಲು |
ಭೋಗಸಂಪತ್ತು ಸುಖವಾಗುವದು ॥ ೧ ॥
ಮಾಜದ ಮಂತ್ರದ ಮೊದಲಿನಕ್ಷರವನು |
ತೇಜಸಿನಲಿ ನಿತ್ಯ ನಡಿಸುವದು ॥ ೨ ॥
ಬಿಡದೆರಡಕ್ಷರ ನಡುವಿನ ಶೂನ್ಯದಿ |
ದೃಢವಿಡಿದಾತ್ಮದಿ ನಿಲಿಸುವದು ॥ ೩ ॥
ಬರಿದೆ ಮೂರಕ್ಷರ ನಿರುತ ಸೇವಿಸಲು |
ದುರಿತಕೋಟಿಗಳೆಲ್ಲ ನೀಗುವವು ॥ ೪ ॥
ನೀ ಕಲಿ ಸುಮ್ಮನೆ ನಾಲ್ಕು ಅಕ್ಷರಗಳ |
ಬೇಕೆನಿಸುವ ವಸ್ತು ಸಿಗುತಿಹುದು ॥ ೫ ॥
ಶಿಶುನಾಳಧೀಶನ ಹೆಸರಿನೈದಕ್ಷರ |
ಬಿಡದೆ ಜಪಿಸಲಹುದೆನಿಸುವದು ॥ ೬ ॥

೬

ಎಲ್ಲ ಶಾರೀರಿಕ, ಮಾನಸಿಕ, ಆಕಸ್ಮಿಕ ಸ್ಥಿತಿಗಳಲ್ಲಿ ಪರಮಾತ್ಮನ ನಾಮವನ್ನು ನೆನೆಯಬಾರದೇ?

(ರಾಗ-ಭೂಪ, ತಾಲ-ದೀಪಚಂದಿ)

ಮಾತುಮಾತಿಗೆ ಶಂಕರಾ | ಶ್ರೀಗುರುವೆ |
ಸರ್ವೋತ್ತಮೆನಬಾರದೆ ॥
ಜ್ಯೋತಿ-ಸಂಗದಿ ಉರಿದು ಹೋಗುವ ಕರ್ಪುರದಂತೆ ॥
ಪಾತಕ ರಾಶಿಯು ಉರಿದು ಹೋಗುವದಾಗಿ ॥ ಪ ॥
ಸ್ನಾನಮಾಡುವಾಗ | ನೇಮದಿ ಆತ್ಮನ |
ಧ್ಯಾನಮಾಡುವಾಗ ॥

ಜಾಣತನದಿ ಅನ್ನ ಉಂಡು । ಅಮೃತವನ್ನು ।
ಪಾನವ ಮಾಡುವ ಕಾಲಕ್ಕೆ ಮನವೆ ॥ ೧ ॥
ಬೆಟ್ಟವನೇರುವಾಗ । ಕಾಲೂರಿದಲ್ಲಿ ।
ಫಟ್ಟನೆ ಬೀಳುವಾಗ ॥
ಫಳಿಜ್ವರ ಕೆಮ್ಮು ಉಬ್ಬಸರೋಗ ಬಂದಾಗ ।
ಮಳೆಗಾಳಿ ಸಿಡಿಲಿನಾರ್ಭಟದಲ್ಲಿ ಮನವೆ ॥ ೨ ॥
ಬಿಸಜಾಕ್ಷಿ ನೋಡುವಾಗ । ಕುಳಿತು ನಿತ್ಯ ।
ಒಸೆದು ಮಾತಾಡುವಾಗ ॥
ಅಷ್ಟಭೋಗದಲಿ ನಿತ್ಯ ಲೋಲುಪ್ತಿ ಪಡೆಯುವಾಗ ।
ನಷ್ಟ ದಾರಿದ್ರ್ಯವು ಬಂದಾಗಲು ಮನವೆ ॥ ೩ ॥
ಸುಲಿಯುವ ಕಳ್ಳನು ಬಂದಾಗ। ಘೋರಾರಣ್ಯದೊಳು ।
ವ್ಯಾಘ್ರವು ಹರಿಯುವಾಗ ॥
ಗುರುವೆ ಗುರುವೆ, ಕಲ್ಪತರುವೆ ಪಾಲಿಸು ! ಎಂದು ।
ಗುರುಮಹಾಲಿಂಗನ ನೆನಿಯಲ್ಲೊ ಮನವೆ ॥ ೪ ॥

೭

ಸಂತರ ಸಂಗದಲ್ಲಿ ಉತ್ಸಾಹಿತರಾಗಿ, ಪರಮಾತ್ಮನಲ್ಲಿ ಬೆರೆಯಬೇಕು

(ರಾಗ–ಶಂಕರಾಭರಣ, ತಾಲ–ದೀಪಚಂದಿ)

ನಿನ್ನ ನಿಜವ ನೀ ನೋಡೋ ।
ಅನುಮಾನಿಸ ಬ್ಯಾಡೋ ॥ ಪ ॥
ತನು ನೆನಪ ಪೋಗಿ ।
ಘನ ಸುಖವಾಗಿ ॥
ಜನನ ಮರಣ ಭಯ ನೀಗಿ ।
ಪರಬ್ರಹ್ಮ ತಾನಾಗಿ ॥ ೧ ॥
ಮರಳಿ ಮರಳಿ ಹುಟ್ಟಿ ।
ಮರವಿಗೆ ಮೈಕೊಟ್ಟಿ ॥
ಗರಿಗಟ್ಟಿ ಶರಣರೊಳಾಡೊ ।
ಅನುಭವಕೆ ಕೂಡೊ ॥ ೨ ॥
ಒಡೆಯ **ನೀರಲಕೇರಿ** ।
ನುಡಿ ಪಂಚಾಕ್ಷರಿ ॥
ಒಡೆಯನ ಒಲಿಸಿ ಒಡಗೂಡೊ ।
ಸಂಸಾರಕ ಕೇಡೊ ॥ ೩ ॥

ಪ್ರಕರಣ ಹದಿಮೂರು

ಪರಮಾತ್ಮನ ನಾಮ (ಭಾಗ ೨)

೧

ದೇವರ ನಾಮವನ್ನು ಕುರಿತು ಉದ್ಯಾನವಿದ್ಯೆಯ ಮಹಾರೂಪಕ

(ರಾಗ-ಬಿಹಾಗ, ತಾಲ-ಕೇರವಾ)

ಹರಿನಾರಾಯಣ । ಗುರು ನಾರಾಯಣ ।
ಹರಿನಾರಾಯಣ ಎನು ಮನವೆ ॥
ನಾರಾಯಣವೆಂಬೊ ನಾಮದ ಬೀಜವ ।
ನಾರದ ಬಿತ್ತಿದ ಧರೆಯೊಳಗೆ ॥ ಪ ॥

ತರಳ ಧ್ರುವನಿಂದಂಕುರಿಸಿತು ಆದು ।
ವರ ಪ್ರಹ್ಲಾದನಿಂ ಮೊಳಕ್ಕಾಯಿತು ॥
ಫರುಣಿಪ ರುಕ್ಮಾಂಗದನಿಂದೆ ಚಿಗುರಿತು ।
ಕುರುಪಿತಾಮಹನಿಂದ ಹೂವಾಯಿತು ॥ ೧ ॥

ವಿಜಯನ ಸತಿಯಿಂದ ಕಾಯಾಯಿತು ಆದು ।
ಗಜರಾಜನಿಂದೆ ದೊರೆ ಹಣ್ಣಾಯಿತು ॥
ಶ್ರೀ ಶುಕಮುನಿಯಿಂದೆ ಫಲ ಪಕ್ವವಾಯಿತು ।
ಆಜಾಮಿಳ ತಾನುಂಡು ರಸ ಸವಿದಾ ॥ ೨ ॥

ಕಾಮಿತ ಫಲವೀವ ನಾಮವೊಂದಿರಲಿಕ್ಕೆ ।
ಹೋಮ ನೇಮ ಜಪ ತಪವ್ಯಾಕೆ ॥
ಸ್ವಾಮಿ ಶ್ರೀ ಪುರಂದರ ವಿಠಲನ ಪಾದವ ।
ಏಕೋ ಭಾವದಿ ನೆನೆ ಮನವೆ ॥ ೩ ॥

೨

ಪರಮಾತ್ಮನ ದಿವ್ಯನಾಮವು ಸಮ್ಮನೆ ದೊರೆಯಲರಿಯದು

(ರಾಗ-ಆನಂದಭೈರವಿ, ತಾಲ-ತ್ರಿಪುಟ)

ಸುಮ್ಮನೆ ದೊರಕುವದೇನೋ ಶ್ರೀರಾಮನ ದಿವ್ಯನಾಮವು ।
ಜನ್ಮ ಜನ್ಮಾಂತರದಾ ದುಷ್ಕರ್ಮ ಹೋದವಗಲ್ಲದೆ ॥ ಪ ॥

ಕಂತುಪಿತನ ದಿವ್ಯನಾಮ ಅಂತರಂಗದೊಳಗಿಟ್ಟು ।
ಚಿಂತೆಯೆಲ್ಲ ಬಿಟ್ಟು ನಿಶ್ಚಿಂತನಾದವಗಲ್ಲದೆ ॥ ೧ ॥

ಭಕ್ತಿರಸದಲ್ಲಿ ತನ್ನ ಚಿತ್ತ ಪರವಶವಾಗಿ ।
ಅಚ್ಯುತನ್ನ ನಾಮವ ಬಚ್ಚಿಟ್ಟುಕೊಂಡವಗಲ್ಲದೆ ॥ ೨ ॥

ಕಣ್ಣಿನೊಳಗೆ ಇದ್ದ ಮೂರುತಿ ತನ್ನೊಳಗೆ ತಾ ಕಂಡು ।
ಘನ್ನಪೂರ್ಣ **ಪುರಂದರ ವಿಠಲನ** ಕೊಂಡಾಡದೆ ॥ ೩ ॥

ಅಯ್ಯ ! ನಿನ್ನ ನಾಮವೇ ತುಂಬ ಪ್ರಬಲವಿರಲು, ಎನಗೆ ನಿನ್ನ ಪರಿವೆಯೇನು ?

(ರಾಗ-ಕಾಫಿ, ತಾಲ-ತ್ರಿತಾಲ)

ನೀ ಯಾಕೋ ನಿನ್ನ ಹಂಗ್ಯಾಕೋ । ರಂಗಾ ।
ನಿನ್ನ ನಾಮದ ಬಲವೊಂದಿದ್ದರೆ ಸಾಕೋ ॥ ಪ ॥
ಕರಿ ಮಕರಿಗೆ ಸಿಲುಕಿ ಮೊರೆಯಿಡುತಿರುವಾಗ ।
ಆದಿಮೂಲನೆಂಬ ನಾಮವೆ ಕಾಯ್ತೋ ॥ ೧ ॥
ಪ್ರಹ್ಲಾದನ ಪಿತ ಬಾಧಿಸುತಿರುವಾಗ ।
ನರಹರಿಯೆಂಬೊ ನಾಮವೆ ಕಾಯ್ತೋ ॥ ೨ ॥
ಬಾಲೆಯ ಸಭೆಯಲ್ಲಿ ಸೀರೆಯ ಸೆಳೆವಾಗ ।
ಕೃಷ್ಣ ಕೃಷ್ಣ ಎಂಬ ನಾಮವೆ ಕಾಯ್ತೋ ॥ ೩ ॥
ಯಮನ ದೂತರು ಬಂದು ಆಜಮಿಳನೆಳೆವಾಗ ।
ನಾರಾಯಣನೆಂಬ ನಾಮವೆ ಕಾಯ್ತೋ ॥ ೪ ॥
ಆ ಮರಾ ಈ ಮರಾ ಧ್ಯಾನಿಸುತಿರುವಾಗ ।
ರಾಮ ರಾಮ ಎಂಬ ನಾಮವೆ ಕಾಯ್ತೋ ॥ ೫ ॥
ಹಸುಳೆ ಆ ಧ್ರುವರಾಯ ಅಡವಿಗೆ ಪೋಪಾಗ ।
ವಾಸುದೇವನೆಂಬ ನಾಮವೆ ಕಾಯ್ತೋ ॥ ೬ ॥
ನಿನ್ನ ನಾಮಕೆ ಸರಿ ಕಾಣೆವು ಜಗದೊಳು ।
ಘನ್ನ ಮಹಿಮ ಸಿರಿ **ಪುರಂದರ ವಿಠಲ** ॥ ೭ ॥

೪

ಹಿಂದಿನ ಸಂತರಿಂದ ದೇವರ ನಾಮಸುಧೆಯ ಸಂಗ್ರಹ

(ರಾಗ-ಜಂಗಲಾ, ತಾಲ-ಕೇರವಾ)

ಏನ ಸವಿ ಏನ ಸವಿ ಹರಿನಾಮ ।
ಮನಸು ತೃಪ್ತಿ ಆಗುದು ಪ್ರೇಮ ॥
ಈ ಜನರಿಗೆ ತಿಳಿಯಲಿಲ್ಲ ಇದರ ಮರ್ಮ ।
ಘನಮಹಿಮ ಸಾಸಿರ ವಿಷ್ಣು ನಾಮ ॥ ಪ ॥
ನಾಮದ ಸವಿಯುಂಡ ವಾಲ್ಮೀಕಾ ।
ನಾಮವ ಸ್ಮರಿಸಿದ ನರಹರಿ ಕನಕ ॥

ಪ್ರೇಮದ ಹರಿಭಕ್ತ ಪುಂಡಲೀಕಾ ।
ರಾಮ ರಾಮ ರಾಮ ಸಾರ್ವ ಜನಕ ॥ ೧ ॥
ಆತ್ಮನ ಸವಿಯನು ನೋಡಿದವರು ।
ತುಂಬರ ನಾರದ ಪುರಂದರದಾಸರು ॥
ಅಂಬರೀಷ ಋಷಿಗಳು ದುರ್ವಾಸರು ।
ತುಂಬಿಕೊಂಡರು ತಾವು ವ್ಯಾಸರಾಯರು ॥ ೨ ॥
ಹರಿ ಹರಿ ಹರಿಯ ಸ್ಮರಣಿ ಮಾಡಬೇಕು ।
ಮೂರು ಗುಣಗಳಳಿದಿರಬೇಕು ॥
ಬಿರುದ ಸಾರುತಿವೆ ವೇದ ನಾಲ್ಕು ।
ಪರಮ ಭಕ್ತ **ಭೀಮದಾಸ** ಸಾರ್ವ ಜನಕೆ ॥ ೩ ॥

೫

ದೇವರ ನಾಮವು ಕಾಮ ಪೂರೈಸುವ ಕಾಮಧೇನು

ಕರೆಯದಲೆ ಬಂದಿಹುದು—
ಕರದುಣ್ಣಲಿಲ್ಲ—ಹರಿನಾಮ ಕಾಮಧೇನುವನು ॥ ಪ ॥
ನೆನವರ ಹೊರಿಯಲು ಅನುವಾಗಿ ಬಂದಿರಲು ।
ಮನುಜ ಮೈಮರೆವರೆ ನೀನು ॥ ೧ ॥
ಮನವೆಂಬ ಕರುಬಿಟ್ಟು, ಘನಭಕ್ತಿ ಮುರವಿಟ್ಟು ।
ತನುವಿನ ಪಾತ್ರಿಲಿ ನೀನು ॥ ೨ ॥
ಕರುಣ ಕೆಚ್ಚಲ ತೊರೆದು ಭೋರ್ಗರೆಯಲು ।
ಅರುವ್ಹೊಂಬ ಕೈಯಿಂದ ನೀನು ॥ ೩ ॥
ಗುರು ಮಹಿಪತಿ ಕಂದಗರುಹಿದ ನಿಜಾನಂದ ।
ಸಿರಿಸುಖ ಪಡಿಯಲೊ ನೀನು ॥ ೪ ॥

೬

ಡಾಂಭಿಕ ಸಂತರೂ ನಿಜವಾದ ಸಂತರೂ

(ರಾಗ–ಪುರಿಯಾಧನಾಶ್ರಿ, ತಾಲ–ದೀಪಚಂದಿ)

ದಾಸನೆಂದರೆ ಪುರಂದರ ದಾಸನಯ್ಯ ॥ ಪ ॥
ವಾಸುದೇವ ಕೃಷ್ಣನ್ನ ಸೂಸಿ ಪೂಜಿಸುವ ॥ ಅ.ಪ. ॥
ಗ್ರಾಸಕಿಲ್ಲದೆ ಪೋಗಿ ಪರರ ಮನೆಗಳ ಪೊಕ್ಕು ।
ದಾಸನೆಂದು ತುಲಸಿಮಾಲೆ ಧರಿಸಿ ॥
ವ್ಯಾಸರಿಲ್ಲದೆ ಅವರ ಕಾಡಿ ಬೇಡಿ ಬಳಲಿಸುತ ।
ಕಾಸು ಗಳಿಸುವ ಪುರುಷ ಹರಿದಾಸನೇ ? ॥ ೧ ॥

ಕದಿ ಹರಿಸ್ಮರಣೆಯ ಮಾಡಿ ಜನರ ಮುಂದೆ ।
ವ ಸಂಭ್ರಮದಿ ತಾನುಂಬ ಊಟ ಬಯಸಿ ॥
ಂಬುಜೋದ್ಭವ ಪಿತನ ಆಗಮಗಳರಿಯದೆ ।
ತಂಬೂರಿ ಮೀಟುವವ ಹರಿದಾಸನೇ ? ॥ ೨ ॥

ಯಾಯವಾರವ ಮಾಡಿ ವಿಪ್ರರಿಗೆ ಮೃಷ್ಟಾನ್ನ ।
ಪ್ರೀಯದಲೆ ತಾನೊಂದು ಕೊಡದ ಲೋಭಿ ॥
ಮಾಯ ಸಂಸಾರದಲಿ ಮಮತೆ ಹೆಚ್ಚಾಗಿಟ್ಟು ।
ಗಾಯನವ ಮಾಡಿದವ ಹರಿದಾಸನೇ ? ॥ ೩ ॥

ಪಾತಕನ ತೆರನಂತೆ ಪದಗಳನು ತಾ ಬೊಗಳಿ ।
ಕೂಟ ಜನರ ಮನವ ಸಂತೋಷಪಡಿಸಿ ॥
ಗೂಟನಾಮವನಿಟ್ಟು ಕೊಟ್ಟರಿಯೆ ತಾನೆನುತ ।
ತೋಟಿಕ ಮಾಡಿದವ ಹರಿದಾಸನೇ ? ॥ ೪ ॥

ನೀತಿಯಿಲ್ಲವನರಿತು ನಿಗಮವೇದ್ಯನ ನಿತ್ಯ ।
ವಾತಸುತನಲ್ಲಿಹನ ವರ್ಣಿಸುತಲಿ ।
ಗೀತನರ್ತನದಿಂದ ಕೃಷ್ಣನ್ನ ಪೂಜಿಸುವ ।
ಪೂತಾತ್ಮ ಪುರಂದರದಾಸನಿವನಯ್ಯ ॥ ೫ ॥

೭

ಭಕುತಿ ಭಾವವಿಲ್ಲದ ಗಾನವು ಹರಮಾತ್ಮನಿಗೆ ರುಚಿಸದು

(ರಾಗ–ಭೈರವಿ, ತಾಲ–ದೀಪಚಂದಿ)

ಕೇಳನೋ ಹರಿ ತಾಳನೋ ॥ ಪ ॥
ತಾಳಮೇಳಗಳಿದ್ದು ಪ್ರೇಮವಿಲ್ಲದ ಗಾನ ॥ ಅ.ಪ. ॥
ತಂಬೂರಿ ಮೊದಲಾದ ಅಖಿಲ ವಾದ್ಯಗಳಿದ್ದು ।
ಕೊಂಬು ಕೊಳಲು ಧ್ವನಿ ಸ್ವರಗಳಿದ್ದು ॥
ತುಂಬುರ ನಾರದರ ಗಾನ ಕೇಳುವ ಹರಿ ।
ನಂಬಲಾರ ಈ ಡಂಭಿಕರ ಕೂಗಾಟ ॥ ೧ ॥

ನಾನಾ ಬಗೆಯ ರಾಗ ಭಾವ ತಿಳಿದು ಸ್ವರ ।
ಜ್ಞಾನ ಮನೋಧರ್ಮ ಜಾತಿಯಿದ್ದು ॥
ಮಾನವಾರಿಯ ದಿವ್ಯ ನಾಮರಹಿತವಾದ ।
ಹೀನ ಸಂಗೀತ ಸಾಹಿತ್ಯಕ್ಕೆ ಮನವಿತ್ತು ॥ ೨ ॥

ಅಡಿಗಡಿಗಾನಂದಬಾಷ್ಪ ಪುಳಕದಿಂದ ।
ನುಡಿ ನುಡಿಗೆ ಶ್ರೀಹರಿ ಎನ್ನುತ ॥
ದೃಢ ಭಕ್ತರನು ಕೂಡಿ ಹರಿಕೀರ್ತನೆ ಮಾಡಿ ।
ಕಡೆಗೆ ಪುರಂದರವಿಠಲನೆಂದರೆ ಕೇಳುವ ॥ ೩ ॥

ಧ್ಯಾನಪದ್ಧತಿ ॥ ೧ ॥

೧

ಮೂರು ದಳದ ಬಿಲ್ವಪತ್ರಿಯನ್ನು ಪರಮಾತ್ಮನಿಗೆ ಏರಿಸಿರಿ

(ರಾಗ-ಪುರಿಯಾ ಧನಾಶ್ರಿ, ತಾಲ-ದೀಪಚಂದಿ) ॥ ೨ ॥

ಬಿಲ್ವಪತ್ರಿಯು ಧರಿಸಬೇಕಣ್ಣಾ । ಅಣ್ಣಯ್ಯ ಕೇಳೋ ॥ ಪ ॥

ಬಿಲ್ವಪತ್ರಿಯು ಧರಿಸಬೇಕೊ । ಮಲ್ಲಿಕಾರ್ಜುನ ಪೂಜೆಗಿನ್ನು ।
ಸೊಲ್ಲಿನಲ್ಲಿ ಇರುವ ಶಿವನ । ಮೆಲ್ಲನಾಗಿ ನೋಡಬೇಕು ॥ ಆ.ಪ. ॥

ಮೂರು ದಳದ ಬಿಲ್ವಪತ್ರಿಯು । ಆದನೇರಿ ನೋಡಲು ।
ಸಾರಿ ಶಿವನ ಬೆಳಕ ತೋರುವದು ॥
ವಾರಿಜೋದ್ಭವ ತಾನು ಆಗಿ । ಘೋರ ಪಾತಕ ದೂರವಾಡಿ ।
ಭೋರನೆಂಬುವ ನಾದದಲ್ಲಿ । ಧೀರನಾಗಿ ನಿಲ್ಲಬೇಕು ॥ ೧ ॥

ಮತ್ತೆ ಸಾಸಿರ ದಳದ ಕಮಲವನು । ಆದನ್ಹತ್ತಿ ನೋಡಲು ।
ಸುತ್ತು ಮುತ್ತಲಿ ಬೆಳಕ ತೋರುವದು ॥
ಸತ್‌ಚಿತ್ತಾನಂದನಾಗಿ । ಕರ್ತುವನ್ನು ನೆನಿಸಿಕೊಂಡು ।
ಮತ್ಯ್ರದೊಳು ಚಲಿಸುವಂಥಾ । ನಿತ್ಯನಿರ್ಮಲನಾಗಬೇಕು ॥ ೨ ॥

ಧರೆಯ ಭೋಗವ ಬಯಸಬೇಡಣ್ಣಾ । ನೀ ಮರೆಯದಂತೆ ।
ಗುರುವಿನಂಘ್ರಿಯ ಭಜಿಸಬೇಕಣ್ಣಾ ॥
ಉರಗಗಿರಿಯ ನಿಲಯನಾದ । ಹರನ ಪಾರ್ವತಿ ರಮಣನಿಂದು ।
ಚರಣಸೇವೆಯನ್ನು ಮಾಡಿ । ಕರುಣವನ್ನು ಪಡೆಯಬೇಕು ॥ ೩ ॥

೨

ಬ್ರಹ್ಮನ ಗುರಿಯನ್ನು ಹೊಡೆಯುವ ಅಭ್ಯಾಸವನ್ನು ಕುರಿತು ಆಂದವಾದ ಪೂರ್ಣರೂಪಕ

(ರಾಗ-ಸಾರಂಗ, ತಾಲ-ಕೇರವಾ)

ಗುರಿಯಾ ಒಗೆದೆನೊ ಬ್ರಹ್ಮಕೆ ।
ಗುರಿಯಾ ಒಗೆದೆನೊ ॥ ಪ ॥
ಸರ್ವಕಾಲದಲಿ ಶರೀರವ ಮರೆದು ।
ಸ್ಮರಣೆ ಗುರುನರಸಿಂಹನ ಆಗಿ ॥ ಅ. ಪ. ॥

ಮಾತಾಡು ಮುಚ್ಚಳವ ಬಿಗಿದು ।
ಭೂತಪಂಚಕ ತುಬಾಕಿಲಿ ॥
ಖ್ಯಾತಿಯ ಭಕ್ತಿಜ್ಞಾನ ವೈರಾಗ್ಯ ।
ಜಾತಿ ಮದ್ದು ಮೂರು ಬೆರಳಲೆ ಹೊಯ್ದು ॥ ೧ ॥
ಇಡಾಪಿಂಗಳ ಗುಂಡಿಲಿ ಹಾಕಿ ।
ರೂಢಿಗೆ ಎನಿಸುವ ಗಜವನು ಜಡಿದು ॥
ಗಾಢಾನುಗ್ರಹ ರಂಜಕ ಸುರಿದು ।
ಹೂಡಿ ವಿರಾಸನ ಒಳಿತಾಗಿ ಕುಳಿತು ॥ ೨ ॥
ಗುರುಕರುಣಿಂಬುವ ಜಾವಗಿ ಒತ್ತಿ ।
ಎರಡೂ ದೃಷ್ಟಿ ಒಂದೇ ಮಾಡಿ ॥
ಊರ್ಧ್ವ ಮುಜರಿಯನು ನೆಟ್ಟಗೆ ನಿಲಿಸಿ ।
ಇರುವ ನಾಸಿಕದ ಕೊನೆಯಲಿ ಮುಳುಗಿ ॥ ೩ ॥
ಘನ ರಂಜಕ ಈ ತನುವ ಮುಚ್ಚದಲಿ ।
ತನು ತುಬಾಕಿಯು ತೂಗಾಡಗೊಡದೆ ॥
ಮನ ಮಿಸುಕದೆ ಮತ್ತೊಂದು ನೆನೆಯದೆ ।
ವಿನಯದಿ ನಿತ್ಯ ಎಚ್ಚರದಿಂದ ॥ ೪ ॥
ಬೆದರಿ ಓಡಲು ಅಷ್ಟಮದಗಜಗಳು ತಾವು ।
ಉದುರಿ ಬೀಳಲು ವೈರಿ ಷಡ್ವರ್ಗದ ತಲೆ ॥
ಸಾಧು ಜ್ಞಾನಿಗಳು ಹೌದು ಹೌದು ಯೆನ್ನಲು ।
ಸಚ್ಚಿದಾನಂದ **ನರಸಿಂಹನು** ಆಗಿ ॥ ೫ ॥

೩

ಸಂತನು ಹೆಡೆಯನು ಮೇಲಕ್ಕೆತ್ತಿದ ವಿಷಯಸರ್ಪವನ್ನು ಮುಂತ್ರಿಸಿ ಭಕ್ತಿಯ ಬುಟ್ಟಿಯಲ್ಲಿರಿಸುವ ಧೀರ ಗೊಲ್ಲನು

(ರಾಗ–ಪುರಿಯಾ ಧನಾಶ್ರೀ, ತಾಲ–ದೀಪಚಂದಿ)

ಗೊಲ್ಲರೋ ನಾವು ಗೊಲ್ಲರೋ ॥ ಪ ॥
ಈ ಘಟವೆಂಬ ಹುತ್ತಿನೊಳು । ದಿಟವಾಗಿ ಹಾವ ಹಿಡಿದು ।
ಕಟಬಾಯೊಳಗಿನ । ಕಡಿಹಲ್ಲು ಮುರಿವಂಥ ॥ ಅ.ಪ. ॥
ನಡು ನಾಡಿಗೆ ಹೆಡೆ ಇಟ್ಟಹುದು ।
ಸರ್ಪದ ಬಾಲಾ ಕಡಿಚಕ್ರ ಮುಟ್ಟಿಹುದು ॥
ಒಡೆಯ ಶ್ರೀಗುರು ಮಂತ್ರ । ಅಡಿಗಡಿಗೆ ಜಪಿಸುತ್ತ ।
ಕಡಿದೀತೆಂಬುವ ಅಂಜಿಕೆ । ಇಲ್ಲದೆ ಹಿಡಿಯುವಂಥ ॥ ೧ ॥

ಹೆಡಿಯ ಮೇಲಕ್ಕೆ ೇರಿಸಿ |
ಮ್ಯಾಗಿನ ಬಾಲಾ ಕೆಳಭಾಗಕ್ಕೆ ಳಿಸಿ |
ಒಳಗಿರುವ ತ್ರಿಕೋಣ | ಗಳಿಗಿಯೊಳಗೆ ಪೊಕ್ಕು |
ಕಳೆನಾದ ಸರ್ಪದ | ಫಣಿರತ್ನ ಪಡೆದಂಥ ॥ ೨ ॥
ಸದ್ಭಾವವೆಂಬೊ ಬುಟ್ಟಿಯಲಿ |
ಈ ಹಾವ ಹಿಡಿದು ಒಳಗೆ ಹಾಕಿದೆವಿಲ್ಲಿ ॥
ದೇವ ದೇವರಿಗೆಲ್ಲಾ | ದೇವಶಿಖಾಮಣಿ |
ದೇವ ಬಲಭೀಮನ | ಮೂಲವ ತಿಳಿದಂಥ ॥ ೩ ॥

೪

ಪಾರಮಾರ್ಥಿಕ ಅನುಭವದ ಸಂಕ್ಷೇಪರೂಪ

(ರಾಗ-ಅಲೈಯ್ಯಾ ಬಲಾವಲಿ, ತಾಲ-ದೀಪಚಂದಿ)

ಕಣ್ಣಿನೊಳಗೆ ನೋಡೊ ಹರಿಯ ॥ ಪ ॥
ಒಳಗಣ್ಣಿನೊಳಗೆ ನೋಡೊ ಮೂಜಗದೊಡೆಯನ ॥ ಅ.ಪ.॥
ಆಧಾರ ಮೊದಲಾದ ಆರು | ಚಕ್ರ |
ಶೋಧಿಸಿ, ಬಿಡಬೇಕು ಈಷಣ ಮೂರು ॥
ಸಾಧಿಸಿ ಸುಷುಮ್ನಾ ಏರು | ಅಲ್ಲಿ |
ಭೇದಿಸಿ ನೀ ಪರಬ್ರಹ್ಮನ ಸೇರು ॥ ೧ ॥
ಎವೆ ಹಾಕದೆ ಮೇಲೆ ನೋಡಿ | ಬೇಗ |
ಪವನನಿಂದಲಿ ವಾಯುಬಂಧನ ಮಾಡಿ ॥
ಸವಿದು ನಾದವ ಪಾನ ಮಾಡಿ | ಅಲ್ಲಿ |
ನವವಿಧ ಭಕ್ತಿಲಿ ನಲಿನಲಿದಾಡಿ ॥ ೨ ॥
ಅಂಡಜದೊಳಾಡುತಾನೆ | ಭಾನು- |
ಮಂಡಲದೊಳು ನಾರಾಯಣನೆಂಬೊವನೆ ॥
ಕುಂಡಲಿ ತುದಿಯೊಳಿದ್ದಾನೆ | ಶ್ರೀ ಪು- |
ರಂದರವಿತಲ ಪಾಲಿಸುತಾನೆ

೫

ಶ್ರೀಗಿರಿಯನ್ನು ಅಂತರಂಗದಲ್ಲಿ ಕಾಣಬೇಕು

(ರಾಗ-ಆನಂದಭೈರವಿ, ತಾಲ-ದೀಪಚಂದಿ)

ಶ್ರೀಗಿರಿಯ ಸುಕ್ಷೇತ್ರಕಿಂದು |
ಹೋಗಿ ಯಾತ್ರೆಯ ಮಾಡಿ ಬಂದೆ ॥ ಪ ॥

ಶ್ರೀಗಿರಿಯು ಶರೀರದೊಳಗುಂಟು । ಓಂ ಶ್ರೀಗುರುಸಿದ್ಧಾ ।
ಯೋಗಿ ಜನರ ಮರ್ಮ ಬ್ಯಾರುಂಟು ॥ ಅ.ಪ. ॥

ಆರು ಬಿಟ್ಟವ ದಾಟಿ ನಡೆದು ।
ಮೂರು ಕೊಳ್ಳದ ಮೂಲಕ್ಕಿಳಿದು ॥
ಏರಿದೆನೊ ಕೈಲಾಸ ದ್ವಾರವ । ಓಂ ಶ್ರೀಗುರುಸಿದ್ಧಾ ।
ಸಾರಿ ಬಡಗಲ ಗುಡಿಯ ಕಂಡೆನು ॥ ೧ ॥

ಏಳು ಸುತ್ತಿನ ಕೋಟೆಯೊಳಗೆ ।
ನೀಲದುಪ್ಪರಿಗೆಗಳ ನಡುವೆ ॥
ತಾಳ ಮದ್ದಲೆ ಗಂಟೆ ಭೇರಿಗಳು । ಓಂ ಶ್ರೀಗುರುಸಿದ್ಧಾ ।
ವೇಳೆ ವೇಳೆಗೆ ತಾವೆ ನುಡಿಯುವವೊ ॥ ೨ ॥

ಒಂಭತ್ತು ಬಾಗಿಲಗಳದರೊ- ।
ಳಿಂಬಾದ ಬೀದಿಗಳು ನಾಲ್ಕು ॥
ತುಂಬಿ ಸೂಸುವ ಕೊಳಗಳೇಳುಂಟು । ಓಂ ಶ್ರೀಗುರುಸಿದ್ಧಾ ।
ಸ್ತಂಭವೆರಡು ಶಿಖರವೊಂದುಂಟು ॥ ೩ ॥

ಪಾತಾಳ ಗಂಗೆಯೊಳು ಮಿಂದು ।
ಓತು ಶಿಖರೇಶ್ವರನಿಗೇರಿ ॥
ಜ್ಯೋತಿರ್ಲಿಂಗಕೆ ದೃಷ್ಟಿಯನಿಟ್ಟಿಹೆನೊ । ಓಂ ಶ್ರೀಗುರುಸಿದ್ಧಾ ।
ಜ್ಯೋತಿರ್ಲಿಂಗವು ಕರದಿ ಕಾಣಿಸಿತೋ ॥ ೪ ॥

ಬರುವ ಕೋಣಗಳೆಂಟ ಬಡಿದೆ ।
ಹಿರಿಯ ಹುಲಿಗಳನಾರ ತಡೆದೆ ॥
ಮೊರೆವ ಸರ್ಪದ ಹೆಡೆಯ ಮೆಟ್ಟಿದೆನೊ । ಓಂ ಶ್ರೀಗುರುಸಿದ್ಧಾ ।
ಚರಿಪ ಕಪಿಯನು ಹಿಡಿದು ಕಟ್ಟಿದೆನೊ ॥ ೫ ॥

ಸಪ್ತ ನದಿಯ ಸಂಗಮ ದಾಟಿ ।
ಗುಪ್ತ ಕದಳೀ ಬನದಲ್ಲಿ ಸುಳಿದು ॥
ಲಿಪ್ತ ಗುಹೆಯೊಳಗೊಬ್ಬನೆ ಪೊಕ್ಕಿದೆನೊ । ಓಂ ಶ್ರೀಗುರುಸಿದ್ಧಾ ।
ಸಪ್ತವರ್ಣದ ಲಿಂಗವ ಕಂಡಿಹೆನೊ ॥ ೬ ॥

ಇಂದ್ರ ದಿಕ್ಕಿನೊಳೆದ್ದು ಸೂರ್ಯ- ।
ಚಂದ್ರ ಗುಪ್ತದ ಪುರದೊಳು ಮುಳುಗಿ ॥
ಚಂದಚಂದದ ಬೆಳಕು ತೋರುವದು । ಓಂ ಶ್ರೀಗುರುಸಿದ್ಧಾ ।
ನಿಂದು ನೋಡಲು ಬಯಲಿಗೆ ಬಯಲಾಯಿತೊ ॥ ೭ ॥

ಗಿರಿಶಿಖರಕಗ್ನಿ ಮುಖದೊ- ।
ಳಿರುವ ಆರ್ಕೇಶ್ವರನ ಹಿಂದೆ ॥
ಸುರಿಯುವಮೃತ ಪಂಚಧಾರಗಳು । ಓಂ ಶ್ರೀಗುರುಸಿದ್ಧಾ ।
ಆರಿತು ಸೇವಿಸೆ ಮರಣವಿಲ್ಲವೊ ॥ ೮ ॥

ಇಂತು ಶ್ರೀಶೈಲದ ಘನವ ।
ಭ್ರಾಂತಿಯಳಿದು ತಿರುಗಿ ನೋಡಿ ॥
ಅಂತರಂಗದ ಗುಡಿಯ ಹೊಕ್ಕೆನೊ । ಓಂ ಶ್ರೀಗುರುಸಿದ್ಧಾ ।
ಶಾಂತಮುಲ್ಲ ತಾನೆ ತಾನಾದೆನೊ ॥ ೯ ॥

೬

ಪ್ರಾಕೃತಿಕ, ಪಾರಮಾರ್ಥಿಕ ಹಾಗೂ ತಾತ್ವಿಕ ಅಂಗಗಳು

(೧)

(ಇಷ್ಟಲಿಂಗ)

(ರಾಗ-ಕಾಂಬೋಧಿ, ತಾಲ-ದೀಪಚಂದಿ)

ಪರತರ ಶಿವಲಿಂಗವೆಳಸಿ ನಿನಗಾಗಿ ।
ಕರ ಕಂಜದೊಳು ಕಾಣಿಸಿತು ಯೋಗಿ ಯಜಿಸು ॥ ಪ ॥

ಮೊದಲ ಪೀಠವೆ ಬಿಂದುವಾಗಿ ಮೇಲೆ ನಿಂದೆ- ।
ಸೆದ ಪೀಠವದು ನಾದವಾಗಿ ಗೋಮುಖವೆ ॥
ಸದಮಳ ಕಳೆಯಾಗಿ ಸಕಲಾತೀತವೆ ಲಿಂ- ।
ಗದ ನಿಜವಾಗಿರಲದರೊಳುಜ್ವಲಿಪ ॥ ೧ ॥

ತರು ವಿಸ್ತಾರವನೊಳಕೊಂಡಿರ್ದ ಬೀಜದ ।
ಪರಿಯಂತರಾರಧ್ವಗಳಿಗಿಂಬುವಡೆದ ॥
ಪರಬೊಮ್ಮಕಾಶ್ರಯವಾಗಿಹ ನಿಜಶಕ್ತಿ ।
ವೆರಸಿ ತನಗೆ ತಾನಾಧಾರವಾಗಿರ್ಪ ॥ ೨ ॥

ಮೂರು ಮಂಡಲವನುಚ್ಚಳಿಸಿ ಗುಣವರ್ಣ ।
ಮೂರನು ಮೀರಿ ಬೋಧಮಾತ್ರವಾಗಿ ॥
ತೋರುವ ನಿಜಗುರು ಶಂಭುಲಿಂಗವದು ತಾನೆ ।
ಬೇರೆನಿಸದೆ ನಿನ್ನ ಕಣ್ಣ ಮುಂದಿಹುದು ॥ ೩ ॥

(೨)

(ಪ್ರಾಣಲಿಂಗ)

(ರಾಗ-ಸೋಹನಿ, ತಾಲ-ದೀಪಚಂದಿ)

ಪ್ರಾಣಲಿಂಗವಿದನು ಗುರುವಿ । ನಾಣತಿಯೊಳು ಕೇಳಿ ನೋಡಿ ।
ಮಾಣದೇಕಚಿತ್ತದಿಂದೆ ಜಾನಿಪನೆ ಕೃತಾರ್ಥನು ॥ ಪ ॥

ಅಸುವೆ ರವಿಯ-ಪಾನಮಿಂದು । ವೆನಿಪುದವರೊಳಗಲದೊಂದಿ ।
ಮಿಸುಪ ಶ್ರಾಂತ ಸಾಂತವಾದ ಶೈವಶಕ್ತಿ ಬೀಜದ ॥
ಬಿಸುಗೆಯಾದ ತಾಣದೇಕವರ್ಣದಖಿಳ ವೃತ್ತಿ ಮಯದ ।
ಪೆಸರು ತಳೆದು ಶ್ರವಣವಿಷಯವಾದ ಪರಮನಾದವೆ ॥ ೧ ॥

ಮೂಲಲಿಂಗ ನಾಭಿಹೃದಯ ಕಂಠ ಕೂರ್ಚ ಗೋತ್ರ ಮೊತ್ತ ।
ಜಾಲದಂಬುಜಾಕ್ಷರಾದಿ ದೈವ ಮಂತ್ರಶಕ್ತಿ ಯು ॥
ಮೇಳದೊಡನೆ ಕೆಂಪು ಮಿಂಚು ರನ್ನ ಚಿನ್ನ ಸೊಡರು ಜಂಚ- ।
ಲಾಲತಾಗ್ನಿ ದೀಪ್ತರೂಪದೋರ್ಪ ದಿವ್ಯ ಬಿಂದುವೆ ॥ ೨ ॥

ಪಲವು ವಿವರವಾಂತ ಕುಂಭದೊಳಗಣಚಲ ದೀಪದೊಂದು ।
ಬೆಳಗು ಮಸಗುವಂತೆ ದೇಹಕರಣ ನಿರಕ ಮುಖದೊಳು ॥
ಪೊಳೆದು ವಿಶ್ವ ದೃಶ್ಯ ವೀಥಿಗಳನು ಬೇರೆ ಬೇರೆ ತೋರ್ಕೆ- ।
ಗೊಳಿಪ ಚಾರು ಚಿತ್ಕಲ ಪ್ರಪೂರ್ಣ **ಶಂಭುಲಿಂಗವೆ** ॥ ೩ ॥

(೩)

(ಭಾವಲಿಂಗ)

(ರಾಗ-ಮಾಲಕಂಸ, ತಾಲ-ದೀಪಚಂದಿ)

ಭಾವಲಿಂಗವನೆ ಬಿಡದೆ ನೀನು । ಪರಿ- ।
ಭಾವಿಸು ಭೇದವಿಲ್ಲದೆ ಯೋಗಿ ॥ ಪ ॥

ಗುರುಮಂತ್ರ ಶಕ್ತಿಯಿಂದುದಿಸದೆ । ಯೋಗ ।
ಕರಣ ಮಥನದೊಳುಜ್ವಲಿಸದೆ ॥
ಕರಹೃದಯದ ಹವಣಿನಿಸದೆ । ನಿತ್ಯ ।
ಪರಿಪೂರ್ಣಾನಂದವಚ್ಚಳಿಯದೆ ॥ ೧ ॥

ದೀಪವು ದೀಪದ ಕಿರಣವ । ತಾನೆ ।
ವ್ಯಾಪಿಸಿ ತೋರುವ ಪ್ರಭೆಯಂತೆ ॥
ರೂಪಿಸಿ ಬೆಳಗುವಿಷ್ಟಪ್ರಾಣ । ಲಿಂಗಾ- ।
ರೋಪವಿಲ್ಲದ ನಿರುಪಾಧಿಯು ॥ ೨ ॥

ಸುಕರದರ್ಚನೆ ಧ್ಯಾನವೆಸಗಲು । ತೋರ್ಪ ।
ಸಕಲಾಸಕಲ ನಿಷ್ಕಳಂಗಳ ॥
ನಿಕರ ವಿಷಯ ವಿಕಲ್ಪನೆ ಗೂಡ- । ದೊಪ್ಪು- ।
ವಕಲಂಕ ನಿತ್ಯನಿರ್ಮಲವಾದ ॥ ೩ ॥

ಪೊರಗೊಳಗಣ ನೇತ್ರವಾನಸ । ದಿಂದೆ ।
ಕುರುಹುವಡೆದು ಬಣ್ಣ ಬಗೆಯಾಗಿ ॥
ಬರಿ ಬಳಕೆಯೊಳೊಂದದವಿರಳ । ದೀಪ್ತಿ ।
ಕರಿಗೊಂಡು ವಿಕೃತಿಯೊಂದಿಲ್ಲದ ॥ ೪ ॥

ಸ್ಥೂಲ ತತ್ವಾತ್ಮಕ ಜೀವನ । ವೃತ್ತಿ- ।
ಜಾಲವಂಟದ ಸೂಕ್ಷ್ಮಾಂತರದೊಳು ॥
ಮೇಳವಿಸದ ಸದಮಳ ಪರ- । ಮಾನು- ।
ಕೂಲದಿಂದಖಿಳ ಸಾಕ್ಷಿಕವಾದ ॥ ೫ ॥

ನೋಟದ ಸಮರತಿ ಕೂಟದ । ಮೇಲೆ ।
ಮೀಟಿನಿಸುವ ಪರವಶನಂತೆ ॥
ನಾಟಿಸುತಿಹ ರೂಪ ರುಚಿಗಳ । ಮೀರಿ ।
ಸಾಟಿದೋರದ ತೃಪ್ತಿಮಯವಾದ ॥ ೬ ॥

ತರುಮೂಲ ಶಾಖೆಯನೊಳಕೊಂಡ । ಬೀಜ- ।
ದಿರವಿನಂದದೊಳು ಷಡಧ್ವದ ॥
ನೆರವಿಗೆ ಪರಮ ಕಾರಣವಾಗಿ । ಕಾರ್ಯ- ।
ಕಾರಣ ಕರ್ಮದ ತೋರ್ಕೆವಡೆಯದ ॥ ೭ ॥

ಮಂದರಾಚಲದ ಜಲನೆ ನಿಂದ । ಸದಾ ।
ಸಿಂಧುವಿನಂತೆ ಬುದ್ಧಿ ವೃತ್ತಿ- ॥
ಯೊಂದಿಲ್ಲದಿಹ ಕಾಲದೊಳು ನಿತ್ಯ । ಬೋಧಾ- ।
ನಂದಮುದ್ರೆಯೊಡೆಯದಿರ್ಪ ॥ ೮ ॥

ತನುಕರ್ಮವನು ವಾಯುಜಯವನು । ಹಾರ- ।
ದನುಭವ ಮಾತ್ರದೊಳು ಅಪರೋಕ್ಷ- ॥
ವೆನಿಸುವ ಗುರು ಶಂಭುಲಿಂಗದ । ನಿಜ- ।
ದನುವಿನ ಚಿನ್ಮಾತ್ರವೆನಿಸುವ ॥ ೯ ॥

ಪ್ರಕರಣ ಹದಿನೈದು

ಅನುಭಾವದ ಉಗಮವೂ ಪ್ರಮಾಣಗಳೂ

೧

ಅನುಭಾವದ ತಾತ್ವಿಕ ಪ್ರಮಾಣ

ನಿಜ ಊಹಿಸಬಾರದು ಸಂಪನ್ನಾ ॥ ಪ ॥
ಅದು ವಚನಕೆ ಗೋಚರಮಲ್ಲೆಂದು ।
ಆದು ಮನಸಿಗೆ ವಿಷಯಮಲ್ಲೆಂದು ॥
ಕೇಳು ಮತ್ತೊಂದು ಅನುಭಿಂದ ।
ಪೇಳು ಉಪದೇಶಿಸಬೇಕದರಿಂದ ॥
ಸತ್ಯಜ್ಞಾನ ಸುಖಾತ್ಮಕವೆಂದು ।
ನಿತ್ಯಪರಿಪೂರ್ಣತೆಯೆಂದು ॥
ದೃಶ್ಯವಿಲಕ್ಷಣ ವೀಕ್ಷಿಸುದೆಂದು ।
ಜಾನಿಸಿ ಪೇಳಿತು ಶ್ರುತಿಗಳ ಮೊತ್ತ ॥

೨

ಅನುಭಾವದ ನೈತಿಕ ಪ್ರಮಾಣ

(ರಾಗ–ಸಾರಂಗ, ತಾಲ–ಕೇರವಾ)

ನಿಜ ಗುಹ್ಯದ ಮಾತು ।
ಸಾಧುರಿಗಲ್ಲದೆ ತಿಳಿಯದು ಗೊತ್ತು ॥ ಪ ॥
ಕಣ್ಣಿಲಿ ಕಂಡು ಹೇಳದ ಮಾತು ।
ಪುಣ್ಯವಂತರಿಗಿದೆ ಹೊಳಿದೀತು ॥
ಇನ್ನೊಬ್ಬರಿಗೇನ ತಿಳಿದೀತು ।
ಚಿನ್ಮಯದ ವಸ್ತು ॥ ೧ ॥
ನೀತಿಗೆ ನಿಜವಾಗಿಹ ಮುಕುಟ ।
ಮಾತಿಗೆ ಮುಟ್ಟಿದವನೆ ಬಲು ನಿಗಟ ॥
ಮತಿಹೀನರಿಗೆ ಒಗಟ ।
ಯತಿಜನರಿಗೆ ಪ್ರಗಟ ॥ ೨ ॥

ಸೋಽಹಂ ಸೊನ್ನೆಯ ಮಾತನೆ ಕೇಳಿಕೊ ।
ಗುಹ್ಯ ಗುರುತು ಹೇಳುವ ಗುರು ಬಳಿಕೊ ॥
ಮಹಿಪತಿ ನಿನ್ನೊಳು ನೀ ತಿಳಕೊ ।
ಸಿದ್ಧದ ಬಲು ಬೆಳಕೊ ॥ ೩ ॥

೩

ಅನುಭಾವದ ಅತೀಂದ್ರಿಯ ಪ್ರಮಾಣ

(ರಾಗ–ಆನಂದಭೈರವಿ, ತಾಲ–ದೀಪಚಂದಿ)

ಆಂದವಾದ ಶ್ರೀಗಂಧದ ಗಿಡದೊಳು ।
ನಿಂದ ಹಣ್ಣುಗಳನು ಕಾಣದೆ ಇವನ್ನು ।
ಸವಿಯದೆ ಹೋಗದಿರೆಂದಾದರೂ ॥
ಓಂ ಸುಜ್ಞಾನಿಗಳಿರಾ ! ಆಂದವರಿಗೆ ಆಮೃತಸಾರವು ॥ ೧ ॥
ಕಣ್ಣು ಇಲ್ಲದವನೆ ನೋಡಿ ।
ಕಾಲು ಇಲ್ಲದವನೆ ಏರಿ ।
ಕೈಯಿಲ್ಲದವನೆ ಹರಿಯಬಂದನು ॥
ಓಂ ಸುಜ್ಞಾನಿಗಳಿರಾ ! ಬಾಯಿ ಇಲ್ಲದವನೆ ತಿಂದನೊ ॥ ೨ ॥
ಏಳೆಂಟು ಆರು ಹತ್ತು ಮಂದಿ ।
ಕಳ್ಳರು ವೇಳೆ ಇದೇ ಎಂದು ನೋಡಿ ।
ಕಳ್ಳಮತಿಯಲ್ಲಿ ಕಾಯಿ ಹರಿಯಬಂದರು ॥
ಓಂ ಸುಜ್ಞಾನಿಗಳಿರಾ ! ಕೋಳಿ ಕೂಗಿತಷ್ಟರೊಳಗೆ ॥ ೩ ॥
ಗಿಡವ ಕಾಯುವ ಕಾವಲುಗಾರ ।
ನೋಡಲು ಬಂದು ತಡವಾಡದಲೆ ।
ಉಡಿಗೆ ಉಟ್ಟಿದ್ದು ಸಿಡಿಲಿನಂತೆ ಹೊಡೆದನೊ ॥
ಓಂ ಸುಜ್ಞಾನಿಗಳಿರಾ ! ಹಿಡಿದು ಪಾಲ್ಮೋರ ಜಿಲ್ಹೆಗೆ ಕಳುಹಿದನೊ ॥ ೪ ॥
ಜಿಲ್ಹಾ ದೊರೆಯು ಆಲ್ಲಿಯ ಸಾಹೇಬ ।
ಕಳ್ಳರನೆಲ್ಲ ವಿಚಾರಮಾಡಿ ।
ಕಳ್ಳತನಕೆ ಸಲ್ಲುವಷ್ಟು ಜುರ್ಮಾನವ ॥
ಓಂ ಸುಜ್ಞಾನಿಗಳಿರಾ ! ಆಳಿಗರವತ್ತು ದಂಡವ ಮಾಡಿದನು ॥ ೫ ॥
ದಂಡದ ರೂಪಾಯಿ ಕೊಡುವದಕ್ಕೆ ।
ಬಂದೆ ಗುರುವಿನ ಆಡಿಗಳ ಪಿಡಿದು ।
ದಂಡ ಕೊಟ್ಟು ಧನ್ಯರಾದರು ।
ಓಂ ಸುಜ್ಞಾನಿಗಳಿರಾ । ಕಂಡೆನಯ್ಯಾ ಶ್ರೀಗುರುಕರುಣದಿ ॥ ೬ ॥

೪

ಪಾರಮಾರ್ಥಿಕ ಅನುಭವಗಳಲ್ಲಿಯ ಅದಲುಬದಲು ಹಾಗೂ ಅನುಬೋಧೆ

(i)

(ರಾಗ-ಭೂಪ, ತಾಲ-ದೀಪಚಂದಿ)

ಇದರೊಳಾರಯ್ಯ ನೀನು । ಆತ್ಮಾ ।
ವರಗಿ ನಾನೆಂದಹಂಕರಿಸಿ ಓ ಎಂದೆಂಬೆ ॥ ಪ ॥

ನೋಡುವವನೊಬ್ಬ ತಾ ಕೇಳಲರಿಯನು ನುಡಿಯ ।
ನೋಡಲರಿಯನು ಕೇಳುವವ ರೂಪಾ ॥
ಆಡುವವ ನುಡಿಯೊಬ್ಬ, ಪರಿಮಳಂಗಳ ತಿಳಿಯಾ ।
ಆಡಲರುವಿಲ್ಲ ಘ್ರಾಣೇಂದ್ರಿಯವಗೆ ॥ ೧ ॥

ಕುಡುವವಗ ನಡೆಯಿಲ್ಲ, ನಡೆವವಗ ಕರವಿಲ್ಲ ।
ಬಿಡದೆ ಬೇಷ್ಟಿಸುವವಗೆ ರೂಪವಿಲ್ಲ ॥
ಬಿಡನಾರು ಮೂರು ಇಪ್ಪತ್ತ್ಮೈದು ಕೂಟದಲ್ಲಿ ।
ಗಡಣದಿಂದಿಹ ಮನಿಗೆ ಕ್ಷೇತ್ರಜ್ಞನೊಬ್ಬನಿಹ ॥ ೨ ॥

ತನ್ನ ನಿಜ ತಾನರಿಯೆ ಧನ್ಯ ತಾನೆಂದೆಂಬೆ ।
ನಿನ್ನ ಬಲ್ಲರಿಕಿದು ನೋಡುಚಿತವೆ ॥
ಇನ್ನಾರೆ ತಂದೆ ಮಹಿಪತಿ ಬೋಧವನು ಸವಿದು ।
ಕಣ್ದೆರೆದಚ್ಚುತನ ನೆನೆದು ತಿಳಿಯೊ ॥ ೩ ॥

(ii)

(ಉಗಾಭೋಗ)

ಕಣ್ಣಿಲಿ ಕೇಳುವ ಕಾಂಬುವನರಿವ
ಆಘ್ರಾಣಿಸುವ ಆಸ್ವಾದಿಸುವ.
ಶ್ರವಣದಿ ಕೇಳುವ ಕಾಂಬುವನರಿವ
ಆಘ್ರಾಣಿಸುವ ಆಸ್ವಾದಿಸುವ.
ರಸನದಿ ಕೇಳುವ ಕಾಂಬುವನರಿವ
ಆಘ್ರಾಣಿಸುವ ಆಸ್ವಾದಿಸುವ.
ಸ್ಪರುಶದಿ ಕೇಳುವ ಕಾಂಬುವನರಿವ
ಆಘ್ರಾಣಿಸುವ ಆಸ್ವಾದಿಸುವ.

ಘ್ರಾಣದಿ ಕೇಳುವ ಕಾಂಬುವನರಿವ
ಆಘ್ರಾಣಿಸುವ ಆಸ್ವಾದಿಸುವ.
ಲೋಕವಿಲಕ್ಷಣ ದಿವ್ಯ ಕರಣ
ಲೋಗರಿಗಾಶ್ಚರ್ಯ ಪುರಂದರವಿಠಲ.

೫

ಈ ಬೆಲೆಯುಳ್ಳ ದಿವ್ಯ ಮುತ್ತನ್ನು ದೀನಭಾವದಿಂದಲೇ ಕೊಳ್ಳಬಹುದು

(ರಾಗ-ಮಿಶ್ರಕಾಫೀ, ತಾಲ-ಕೇರವಾ)

ಮುತ್ತು ಕೊಳ್ಳಿರೊ ಜನರು ಮುತ್ತು ಕೊಳ್ಳಿರೊ ॥ ಪ ॥
ಮುತ್ತು ಬಂದಿದೆ ಕೊಳ್ಳಿ ಸಚ್ಚಿದಾನಂದ ದಿವ್ಯ ॥ ಅ.ಪ. ॥

ಜ್ಞಾನವೆಂಬೊ ದಾರದಲ್ಲಿ ಪೋಣಿಸಿದ ದಿವ್ಯ ಮುತ್ತು।
ಧ್ಯಾನದಿಂದ ಕೊಂಬುದಿದನು ದೀನರಾದ ಬಲ್ಲ ಜನರು ॥ ೧ ॥

ಕಟ್ಟಲಾಗದು ಮೂಗಿನಲ್ಲಿ ಇಟ್ಟು ಮೆರೆಯಲಾಗದಿದು।
ಭ್ರಷ್ಟಜನಕೆ ಕಾಣಿಸದಂಥ ಕೃಷ್ಣನೆಂಬೊ ಅಣಿ ಮುತ್ತು ॥ ೨ ॥

ಹಿಡಿಯಲಿಕ್ಕೆ ಸಿಲುಕದಿದು ಕಾಡೆ ಕಾಣದೆಂದು ಬೆಲೆಯು।
ಪೊಡವಿಗೆಲ್ಲ ಪುರಂದರವಿಠಲ ಒಡೆಯನೆಂಬೊ ದಿವ್ಯ ಮುತ್ತು ॥ ೩ ॥

೬

ಈ ದಿವ್ಯ ಮುತ್ತು ಯಾರಿಗೂ ಕಾಣದು

(ರಾಗ-ಬಿಲಾವಲ, ತಾಲ-ದೀಪಚಂದಿ)

ಅರಿಗೆ ಕಾಣದೀ ಮುತ್ತು। ಗುರುವಿನ ಕರುಣಾಗದೆ।
ತಿಳಿಯದು ಗೊತ್ತು ॥ ಪ ॥

ಕಾಷ್ಟದೊಳಗ್ನಿಯಂತಿಹುದು। ಆದು।
ಕೋಟಿಸೂರ್ಯರ ಪ್ರಭೆ ಮೀಟಾಗಿಹುದು ॥
ನೋಟಕ್ಕೆ ಆದು ಕಾಂಬದು। ನಿಜ।
ನಿಷ್ಠೆಯುಳ್ಳವರಿಗೆ ಘಟ್ಟಿಗೊಂಡಿಹುದು ॥ ೧ ॥

ಕತ್ತಲೆಯೊಳು ಕಾಂಬುವುದು। ಇದು।
ಎತ್ತ ನೋಡಲು ಪ್ರಭೆಯೆತ್ತಿ ತೋರುವುದು ॥
ನೆತ್ತಿಯೊಳು ಗೊತ್ತುಮಾಡಿಹುದು। ಆದು।
ಉತ್ತರ ಉನ್ಮನಿ ಸೇರಿಕೊಂಡಿಹುದು ॥ ೨ ॥

ಸೂತ್ರದ ಬಲವಿರಬೇಕು । ಆ ।
ಸೂತ್ರವ ಹಿಡಿದು ತಾ ಬಂದಿರಬೇಕು ॥
ತಾಪತ್ರಿಗುಣ ಅಳಿಯಬೇಕು । ಸೂ- ।
ಪಾತ್ರ ಸುಜ್ಞಾನದ ನೆಲೆ ತಿಳಿಯಬೇಕು ॥ ೩ ॥
ಉದಯಾಸ್ತವೆರಡದಕಿಲ್ಲಾ । ವೇದ- ।
ಶ್ರುತಿಶಾಸ್ತ್ರ ಆಗಮಕದು ನೀಲಕಿಲ್ಲಾ ॥
ತನ್ನೊಳು ತಾ ತಿಳಿಯಲಿಲ್ಲಾ । ಇದು ।
ಕಲ್ಲು ಮೆತ್ತಗೆ ಮಾಡುವವನೆ ಬಲ್ಲಾ ॥ ೪ ॥
ರೇವಗಿಪುರಕೆ ಹೋಗಬೇಕು । ದೊಡ್ಡ ।
ಮಹಾಮೇರು ಪರ್ವತವನು ಹತ್ತಬೇಕು ॥
ಅಭಿಮಾನದಿ ಗವಿ ಹೊಗಬೇಕು । ದೊಡ್ಡ ।
ರೇವಣಸಿದ್ಧಲಿಂಗನ ನೋಡಬೇಕು ॥ ೫ ॥

೭

ಈ ಮುತ್ತಿನ ಮಹಿಮೆಯು ಮುಂದೆ ತಿಳಿಯಬಹುದು

(ರಾಗ–ಬಿಲಾವಲ, ತಾಲ–ದೀಪಚಂದಿ)

ಮುತ್ತು ಬಂದಿದೆ ಕೊಳ್ಳಿರಣ್ಣಾ । ಅದಕೆ ।
ಎಜ್ಜಿಲ್ಲಾ ಏನಿಲ್ಲಾ ಬೆಲೆಯಾಗದಣ್ಣಾ ॥ ೧ ॥
ಥಳ ಥಳ ಹೊಳೆಯುತದಣ್ಣಾ । ಅದು ।
ಬಲ್ಲ ಜಾಣರಿಗೆ ಬಯಲೊಳಗಣ್ಣಾ ॥
ಕೂದಲ ಎಳೆಕಿಂತ ಸಣ್ಣಾ । ಅದು ।
ಬಣ್ಣ ಬಣ್ಣದ ಬ್ರಹ್ಮಲೋಕಣ್ಣಾ ॥ ೦ ॥
ತನುವೆಂಬ ತರಾಜ ಪಿಡಿದು । ಆದಿ ।
ಶರಣರು ತೂಗ್ಯಾರು ಬೇಸರ ಕಳೆದು ॥
ಮನವೆಂಬ ಮಣಿದಾರ ಪಿಡಿದು । ಝೋಕ ।
ಹೋಗದೆ ತೂಗ್ಯಾರು ಯೋಗ ಮಾಡಿದವರು ॥ ೨ ॥
ಮುತ್ತಿನ ಮಹಿಮೆ ಮುಂದದ । ಇದರ ।
ಗೊತ್ತು ತಿಳಿಯದ ಮುಂದಿ ಸತ್ತು ಹೋಗೇದ ॥
ಸುತ್ತು ಮುತ್ತಲು ಸುಳಿಯುತಲದ । ಗುರು ।
ಚಿದಾನಂದನ ಚಿತ್ತದೊಳಗದ ॥ ೩ ॥

ಲ

ಪಾಪವಳಿದಾಗ ಕಾಣುವ ಹಾಗೂ ಕಾಣಿಸಿದಾಗ ಪಾಪವನ್ನಳಿಸುವ ದಿವ್ಯರತ್ನದ ದರ್ಶನ

(ರಾಗ-ಭೂಪ, ತಾಲ-ದೀಪಚಂದಿ)

ರತ್ನ ಬಂದಿದೆ ನೋಡಿರೊ । ಉನ್ನತ ಜೀವಾ ।
ರತ್ನ ಬಂದಿದೆ ನೋಡಿರೊ ॥ ಪ ॥

ಪೃಥ್ವಿಗಧಿಕ ಬ್ರಹ್ಮಪುರದಿಂದ ಬಂದಿದೆ ।
ರತ್ನ ಪರೀಕ್ಷೆಯ ಬಲ್ಲ ಸತ್ಪುರುಷರೆ ॥ ಆ.ಪ. ॥

ಶಿರದೊಳು ಅಡಗಿ ಅದೆ । ಯಾವಾಗಲೂ ।
ಕರದಲ್ಲಿ ಕಾಣುತಿದೆ ॥
ಪರಚಂದ್ರ ಸೂರ್ಯ ಬೀದಿಗಳೊಳಗಿಟ್ಟದೆ ।
ದುರಿತ ಕರ್ಮಗಳಳಿದವಗೆ ಕಾಣುತಿದೆ ॥ ೧ ॥

ಅಷ್ಟ ದಳಗಳಿಂದೆ । ಆ ರತ್ನವು ।
ದಿಟವಾಗಿಹುದರಿಂದೆ ॥
ದೃಷ್ಟೀಯನಗಲದೆ ನೋಡಿದ ಪುರುಷನು ।
ನಷ್ಟಪಾತಕನಾಗಿ ಶ್ರೇಷ್ಠನಾಗುವನಂತೆ ॥ ೨ ॥

ಕಳ್ಳರ ಭಯವಿಲ್ಲವೊ । ಆ ರತ್ನಕ್ಕೆ ।
ಸುಳ್ಳರ ಸುಳವಿಲ್ಲವೊ ॥
ಎಲ್ಲೆಲ್ಲಿ ನೋಡಲು ಅಲ್ಲೆ ಕಾಂಬುದು ತಾನು ।
ಒಲ್ಲೆನೆಂದರೆ ಬಿಡದೆದುರಿಗೆ ನಿಲ್ಲುವದು ॥ ೩ ॥

ಶಿರದೊಳು ರತ್ನವನ್ನು । ಧರಿಸಿದಂಥಾ ।
ಉರಗನ ಹೃದಯವನ್ನು ॥
ಉರಗಭೂಷಣ ಪಕ್ಷಿ-ಹಂಸವಾಹನ ಮುಖ್ಯ ।
ಸುರಮುನಿ ಹೃದಯದಿ ನಿತ್ಯ ಬೆಳಗುವಂಥಾ ॥ ೪ ॥

ದೊರೆ ದೇಸಾಯಿಗಳಲ್ಲಿಯೂ । ನವಕೋಟಿ ।
ನರ ನಾರಾಯಣನಲ್ಲಿಯೂ ॥
ನೆರೆ ಚಕ್ರವರ್ತಿ ಬೊಕ್ಕಸದೊಳಗಿಲ್ಲ ಶ್ರೀ- ।
ಗುರುಪುಹಾಲಿಂಗ ರಂಗನ ಭಾಂಡಾರದೊಳಿಹ ॥ ೫ ॥

ಪ್ರಕರಣ ಹದಿನಾರು

ರೂಪ ತೇಜ ನಾದಾದಿಗಳ ಅನುಭಾವ

೧

ಪರಬಿಂದು ಮಿಂಚು ಚಂದ್ರ ಸೂರ್ಯ ಪ್ರಾಣಲಿಂಗ-ದರ್ಶನ

(ರಾಗ-ದುರ್ಗಾ, ತಾಲ-ದೀಪಚಂದಿ)

ಕಾಣುತಿದೆ ಪರಬಿಂದು ।
ಶಾಂಭವಿಯು ಕೊನೆಯಲ್ಲಿ ಲಕ್ಷವಿಡಲಾಕ್ಷಣದಿ ॥ ಪ ॥

ಸ್ಥಿರಕಾಯನಾಗಿ ಕುಳಿತು । ವ್ಯವ- ।
ಹರಿಪ ಕರಣೇಂದ್ರಿಯಗಳನು ತಡೆದು ॥
ಬಾಹ್ಯ ಪರಿಕರವನಳಿದು । ದೃಷ್ಟಿ ।
ಮನ ಪವನ ಬೆರಸಿ ನಾಸಾಗ್ರದಲಿ ನೋಡೆ ॥ ೧ ॥

ಎಳೆಯಾದ ಮುತ್ತಿನಂತೆ । ದೀಪ- ।
ದುರಿಯಂತೆ ಸೆಳೆ ಮಿಂಚಿನಂತೆ ರತ್ನದಂತೆ ॥
ತೊಳಪ ವಿದ್ರುಮ ಬಳ್ಳಿಯಂತೆ । ಥಳ- ।
ಥಳಿಪ ಶಶಿಸೂರ್ಯಕೋಟಿ ಪ್ರಭೆಯಂತೆ ॥ ೨ ॥

ಒಳಗಿರ್ಪ ಪ್ರಾಣಲಿಂಗಾ । ಅದು ।
ಪಳಕ ಕೊಡದೊಳು ದೀಪದ ತೆರದೀ ॥
ಹೊಳೆವ ನೇತ್ರದ್ವಾರದಿ ಹೊರ । ಹೊಮ್ಮಿ ।
ಬೆಳಗಿ ಗುರುಸಿದ್ಧ ತಾನೆ ಆಗಿ ॥ ೩ ॥

೨

ಶ್ರೀಸಮರ್ಥ ಸದ್ಗುರುವಿನ ಕರುಣದಿಂದ ನೆಲೆಯಿಲ್ಲದ ಸರ್ವವ್ಯಾಪಿಯಾದ ಪರಮಾತ್ಮನ ರೂಪವ ಕಂಡೆ

(ರಾಗ-ದುರ್ಗಾ, ತಾಲ-ದೀಪಚಂದಿ)

ವಸ್ತು ಕಂಡೆನೊ ಒಂದು ।
ಕರ್ತು ಸದ್ಗುರುವಿನ ಕೃಪೆಯಿಂದ ॥ ಪ ॥
ತೇಜಃಪುಂಜದ ರೂಪ ।
ಮೂರ್ಜಗದೊಳಗಿದು ಅಪರೂಪಾ ॥

ನಿಜ ನಿರ್ವಿಕಲ್ಪಾ ।
ಸಜ್ಜನ ಹೃದಯದಿ ಚಿದ್‌ಘನದೀಪಾ ॥ ೧ ॥
ರೂಪಕೆ ನೆಲೆಯಿಲ್ಲ ।
ವ್ಯಾಪಕವಾಗಿಹುದು ಮೂಜಗವೆಲ್ಲ ॥
ಗುಪ್ತ ಜ್ಞಾನಿಯೆ ಬಲ್ಲಾ ।
ಜಪ ತಪಗಳಿಗಿದು ಸಿಲುಕುವದಲ್ಲ ॥ ೨ ॥
ಬೈಲಿಗೆ ನಿರ್ಬೈಲ ।
ಭಾವಿಕ ಬಲ್ಲನು ಇದರ ಹೊಯಿಲಾ ॥
ಮಹಿಪತಿಗನುಕೂಲಾ ।
ಜೀವನ್ಮುಕ್ತಿಗಿದೆ ಮೂಲಾ ॥ ೩ ॥

೩

ಎನ್ನಂತರಂಗದಲ್ಲಿ ಲಿಂಗಪೂಜೆಯು ಸಂತತವಾಗಿ ನಡೆದಿರುವದು

(ರಾಗ-ಪುರಿಯಾ ಧನಾಶ್ರೀ, ತಾಲ-ದೀಪಚಂದಿ)

ಲಿಂಗಪೂಜಿ ಆಗತದಣ್ಣಾ । ಯಾವಾಗ ನೋಡಲು ।
ಲಿಂಗಪೂಜಿ ಆಗತದಣ್ಣಾ ॥ ಪ ॥
ಲಿಂಗಪೂಜಿ ಆಗತದ । ಅಂಗ ಎಂಬೊ ಗುಡಿಯ ಒಳಗೆ ।
ಲಿಂಗದಂಥಾ ಮನಸು ತನ್ನ । ಕಂಗಳಿಗೆ ಕಾಣತದ ॥ ಅ.ಪ. ॥
ಆರು ಮೂರು ಕಟ್ಟಬೇಕಣ್ಣಾ । ಆ ಲಿಂಗಪೂಜಿಗೆ ।
ಆರು ಮೂರು ಕೆಡಿಸಬೇಕಣ್ಣಾ ॥
ಆರು ಮನಿಯಾ ದಾಟಬೇಕು । ಮೂರು ನದಿಯಾ ನಟ್ಟನಡುವೆ ।
ಏರಿ ಶಿಖರದಲ್ಲಿ ನೋಡಲು । ಭೇರಿಗುಟ್ಟಿ ಕೂಗುತದ ॥ ೧ ॥
ನಾಲ್ಕು ದಾರಿ ಉಂಟು ನೋಡಣ್ಣಾ । ಆ ಲಿಂಗಪೂಜಿಗೆ ।
ಮೇಲ್ಕ ಏರಿ ನಿಲ್ಲಬೇಕಣ್ಣಾ ॥
ಕಾಕಬುದ್ಧಿ ಕಳೆಯಬೇಕು । ನೂಕಬೇಕೊ ಮುದಗಳೆಲ್ಲ ।
ಏಕನಾಗಿ ನೋಡಲು ಅ- । ನೇಕ ಬೆಳಕ ಕಾಣುತದ ॥ ೨ ॥
ಯೋಗಿ ಉನ್ಮನಿ ವಾಸ ನೋಡಣ್ಣಾ । ಆ ನಂಬಿದವರಿಗೆ ।
ಚಿನ್ಮಯ ರೂಪಾ ಹೊಳೆಯುತದಣ್ಣಾ ॥
ಆಗ ಈಗ ಎನ್ನದೆ ದೇಹ । ಸಾಗಿ ನಿನ್ನ ಹೋಗತದ ।
ಹೋಗುವಾಗ ಗಂಗಾಧರನ । ಬೇಗ ನೀವು ಬಲ್ಲಿರಣ್ಣಾ ॥ ೩ ॥

೪

ಅಷ್ಟವಿಧ ಪ್ರಾಣಲಿಂಗಪೂಜೆಯು

(ರಾಗ-ಭೂಪ, ತಾಲ-ದೀಪಚಂದಿ)

ಲಿಂಗಪೂಜೆಯು ಮಾಡಿರೊ । ನಿಮ್ಮೊಳು ಪ್ರಾಣ- ।
ಲಿಂಗಪೂಜೆಯು ಮಾಡಿರೊ ॥ ಪ ॥

ಗಂಗೆ ಯಮುನೆಗಳ ಸಂಗಮದೊಳು ಮಿಂದು ।
ಶೃಂಗಾಟಕದುಪರಿ ರಂಗಮಂಟಪದೊಳು ॥ ಅ.ಪ. ॥

ವರಭಕ್ತಿ ಜಲವ ನೀಡಿ । ಮಜ್ಜನಗೈದು ।
ವಿರತಿ ಗಂಧವನೆ ತೀಡಿ ॥

ಕರಣ ಇಂದ್ರಿಯ ಎಂಬ । ಮಿರುಗುವಕ್ಷತೆಯಿಟ್ಟು ।
ಅರಿವೆಂಬ ನಿರ್ಮಲ ಸರಸ ಪುಷ್ಪವ ಸೂಡಿ ॥ ೧ ॥

ಹರ್ಷವೆಂಬುವ ಧೂಪವ । ಸಮರ್ಪಿಸೆ ।
ಪರಬಿಂದು ರುಚಿ ದೀಪವ- ।

ನಿರದೆತ್ತಿ ಪರಿಪೂರ್ಣ ನೈವೇದ್ಯವನೆ ಮಾಡಿ ।
ಮೆರೆವ ತ್ರಿಗುಣವೆಂಬ ವರ ತಾಂಬೂಲವ ಕೊಟ್ಟು ॥ ೨ ॥

ಕರದಿಷ್ಟಲಿಂಗವಿದೆ । ಶರೀರದಲ್ಲಿ ।
ಪರವಸ್ತು ತಾನಾಗಿದೆ ॥

ಹೊರವೊಳಗೆರಡೆನ್ನದರಿದರಿವನೆ ಮೀರಿ ।
ಗುರುಸಿದ್ಧನಂಘ್ರಿಯೊಳ್ ಬೆರೆದೇಕಮಯವಾಗಿ ॥ ೩ ॥

೫

ಅಂತರಂಗದಲ್ಲಿಯು ಕಲ್ಪವೃಕ್ಷವನ್ನು ಕಾಣಿರಯ್ಯ !

(ರಾಗ-ಪುರಿಯಾ ಧನಾಶ್ರೀ, ತಾಲ-ದೀಪಚಂದಿ)

ಕಲ್ಲು ಮೆತ್ತಗೆ ಮಾಡಿಕೊಳ್ಳಣ್ಣಾ । ಬಲ್ಲವನ ಕೇಳಿ ॥ ಪ ॥
ಕಲ್ಲು ಮೆತ್ತಗೆ ಮಾಡಿಕೊಳ್ಳೊ । ಕಲ್ಲುಸಕ್ಕರೆಗಿಂತ ಸವಿಯೊ ।
ಸಾರ ಅಮೃತ ಸುರಿದು ನೀನು । ಜ್ಞಾನಜ್ಯೋತಿ ತುಂಬಿಕೊಳ್ಳೊ ॥ ಅ.ಪ. ॥

ಕಲ್ಲಿನೊಳಗೆ ಪರುಷ ಕಾಣಣ್ಣಾ । ಪರಬ್ರಹ್ಮನರಿಯದೆ ।
ಕೈಯ ಒಳಗೆ ಬಂದೀತು ಹ್ಯಾಂಗಣ್ಣಾ ॥

ಕಲ್ಲುಕುಟ್ಟಿಗ ಅಲ್ಲಮ ಪ್ರಭು । ಶಿಲೆಯ ಒಡೆದು ಸೆಲೆಯ ತೆಗೆದ ।
ನೀರು ನೀರು ಕೂಡಿದ ಬಳಿಕ । ಭೇದಭಾವಗಳ್ಯಾಕ ಬೇಕೊ ॥ ೧ ॥

ಕಲ್ಲಿನಲಿ ಕಲ್ಪವೃಕ್ಷ ಕಾಣಣ್ಣಾ । ಬೇಡೀದ ಫಲಗಳ ।
ಕೊಡುವ ಬ್ರೀದ ಉಂಟು ನೋಡಣ್ಣಾ ॥
ಗುರು ಲಿಂಗ ಜಂಗಮ ಚರಣ । ಹೊಂದಿಗೂಡೊ ಎಂದಿಗಗಲದೆ ।
ಬೆಲ್ಲ ಸವಿಯು ಕೂಡಿದಂತೆ । ಕೂಡಿಕೊಳ್ಳೊ ನೀನು ಇಲ್ಲಿ ॥ ೨ ॥

೨

ಅನಾಹತನಾದವು ಎಲ್ಲ ವಿಕಾರ ಕಾಮನೆಗಳನ್ನು ನಾಶಗೊಳಿಸುವದು

(ರಾಗ-ಮಾಂಡ, ತಾಲ-ಕೇರವಾ)

ನಾದವ ಕೇಳುತ ನಿದ್ರೆಯು ಮಾಡುತ ।
ಬ್ರಹ್ಮವು ತಾನಾಗಿ ॥
ನಾದವ ಕೇಳಲು ನಾನಾ ಗುಣಗಳು ।
ಹೋದವು ತಾವಾಗಿ ॥ ಪ ॥
ಕೂಡಿತು ದೃಷ್ಟಿ ಪರಬ್ರಹ್ಮದೊಳು ತಾ ।
ಅನುದಿನದಲಿ ಬೇಗೀ ॥
ಮನಸೇಂದ್ರಿಯಗಳು ಹುಡುಕಿದರಿಲ್ಲಾ ।
ಹೋದವು ತಾವಾಗಿ ॥ ೧ ॥
ನಾನಾ ವರ್ಣದ ಛಾಯವ ನೋಡುತ ।
ನಿದ್ರೆಯು ಮಾಡಿದೆನೊ ॥
ಭಾನುಕೋಟಿ ಪ್ರಕಾಶದ ಬೆಳಕಲಿ ।
ನಾದವ ಕೇಳಿದೆನೊ ॥ ೨ ॥
ಕಾಣದ ರೂಪವು ಕಾಣುತಲೆ ನಾ ।
ಕಾಮಿಸಿ ಮುಲಗಿದೆನೊ ॥
ಬೋಧ **ಚಿದಾನಂದ** ಸದ್ಗುರುನಾಥನ ।
ಧ್ಯಾನವ ಮಾಡಿದೆನೊ ॥ ೩ ॥

೭

ಪಾರಮಾರ್ಥಿಕ ಪರಮಾಮೃತದ ಸಿದ್ಧತೆಯನ್ನು ಬಣ್ಣಿಸುವ ಹಿರಿದಾದ ವಾಕ್‌ಸಿದ್ಧಿಯ ರೂಪಕ

(ರಾಗ-ಭೂಪ, ತಾಲ-ದೀಪಚಂದಿ)

ನೆಲ್ಲು ಕುಟ್ಟುಣು ಬಾರಮ್ಮಾ । ಇಬ್ಬರು ಕೂಡಿ ॥ ಪ ॥
ನೆಲ್ಲು ಕುಟ್ಟುಣು ಬಾರೆ । ನಿಲ್ಲವೆ ಬೆನ್ನು ಹತ್ತಿ ।
ಹನ್ನೆರಡು ಹದಿನಾರು ನಲ್ಲೆಯರು ಕೂಡಿಕೊಂಡು ॥ ಅ.ಪ. ॥

ತನುವೆಂಬ ಒಳ್ಳ ಮಾಡಿ। ಪ್ರಾಣವೆಂಬ।
ಒನಕಿಲಿ ಹೇರಿ ಹಾಕಿ ॥
ವಿವೇಕವೆಂಬ ಅಕ್ಕಿ ಹಸನ ಮಾಡಿ।
ಹಳ್ಳ ತಗಿಯವ್ಮಾ ಜ್ಞಾನದೃಷ್ಟಿಲಿ ನೋಡಿ ॥ ೧ ॥

ವಾಸನತ್ರಯಗಳೆಂಬ। ಒಲಿಗುಂಡು ಮಾಡಿ।
ಪ್ರಾರಬ್ಧ ಗಡಿಗೆ ಹೇರಿ ॥
ಕಾಮಕ್ರೋಧವೆಂಬ ಕಟ್ಟಿಗೆ ಉರಿಮಾಡಿ।
ಪ್ರಪಂಚ ಪರಮಾರ್ಥ ಒಳಹೊರಗೆ ನೋಡಿ ॥ ೨ ॥

ಕುದಿಯುವ ಸಮಯದಲ್ಲಿ। ಮುದದ ಉಕ್ಕು।
ಮೀರಿ ಬರುತಲದವ್ಮಾ ॥
ಸತ್ವಧೀರ ಎಂಬು ಹುಟ್ಟಿಲಿ ಹೊಡೆದು।
ನೆಟ್ಟಗೆ ಆಡಿಗೆಯ ಧಿಟ್ಟಾಗಿ ಮಾಡವ್ಮಾ ॥ ೩ ॥

ಪರಮಾನ್ನ ಪಾಯಸವು। ಪ್ರಾರಬ್ಧದಿ।
ಪ್ರಾಪ್ತವಾದೀತು ಏಳವ್ಮಾ ॥
ಗುರುಲಿಂಗ ಜಂಗಮ ಬೀಗರ ಕೂಡಿಕೊಂಡು।
ಸ್ವಾನಂದ ಎಡಿಮಾಡಿ ಸವಿಯ ನೋಡವ್ಮಾ ॥ ೪ ॥

ಪ್ರಕರಣ ಹದಿನೇಳು

ಸಮ್ಮಿಲಿತ ಅನುಭಾವ

೧

ಆನಂದಮಯ ಚಿದ್ಘನ, ಭಾನುವಿಲ್ಲದ ಬಿಸಿಲು, ಉಕ್ಕುವ ಅಮೃತಕುಂಭ

(ರಾಗ-ಭೂಪ, ತಾಲ-ದೀಪಚಂದಿ)

ಆನಂದವಾದ ಚಿದ್‌ಘನ ವಸ್ತು ನಾ ಕಂಡೆ।
ಭಾನುವಿಲ್ಲದ ಬಿಸಲೇನವ್ವಾ ॥ ಪ ॥
ತಾನು ಅಲ್ಲದೆ ತನ್ನ ತವರೂರ ಮನೆಯೊಳು।
ತಾನು ಮಾಡಿದ ಪುಣ್ಯ ತನಗವ್ವಾ ॥ ಅ.ಪ. ॥
ಕುಂಡಲದೊಳಗೊಂದು ನೀಲಗನ್ನಡಿ ಇಟ್ಟು।
ಮಂಡಲದೊಳಗಾಡುವದೇನವ್ವಾ ॥
ಸೇರಿ ಉನ್ಮನಿಯೊಳು ಗುರುವಿನ ಪುಣ್ಯದಿ।
ಘನವಸ್ತು ದೊರಕಿತು ಎನಗವ್ವಾ ॥ ೧ ॥
ನಡುನೀರ ಮಧ್ಯದಿ ವಟವೃಕ್ಷ ನಾ ಕಂಡೆ।
ಹೂವಿಲ್ಲ ಮಿಡಿಗಾಯಿ ಹಣ್ಣವ್ವಾ ॥
ಅಖಂಡ ವನದೊಳು ಅಮೃತ ಕೊಡ ಉಕ್ಕಿ।
ಉಂಡುಂಡು ಸುಖಿಸಿ ಬಾಳುವೆನವ್ವಾ ॥ ೨ ॥
ಕೈಲಾಸ ಭೂಮಿ ಅಲ್ಲಾ ಕನಕ ಭೂಷಣವಲ್ಲಾ।
ಬೈಲೊಳಗಾಡುವದೇನವ್ವಾ ॥
ವರಕವಿ ನಾಗಲಿಂಗ ಗುರುವಿನ ಪುಣ್ಯದಿ।
ಸ್ಥಿರಮುಕ್ತಿ ದೊರಕಿತು ಎನಗವ್ವಾ ॥ ೩ ॥

೨

ಸತ್ಸಂಗವು ಮೇಲ್ತರಗತಿಯ, ತೇಜ-ನಾದ-ಸುಧೆಗಳ ಅನುಭಾವ-ಸುಖವನ್ನು ನೀಡುವದು

(ರಾಗ-ಸಾರಂಗ, ತಾಲ-ಕೇರವಾ)

ಇಂಥಾದೆಲ್ಲಿದೆ ತಾ ನೋಡಿ। ಸತ್ಸಂಗದ ಸುಖಾ ॥ ಪ ॥
ಒಂದೊಂದು ಪರಿ ಕೇಳಿಸುವ।
ಹನ್ನೊಂದರ ಮೇಲಿನ್ನೊಂದರ ಘೋಷಾ ॥
ಧಿಮಿ ಧಿಮಿ ಧಿಮಿ ಧಿಮಿ। ಧಿಮಿ ಧಿಮಿ ಧಿಮಿ ಧಿಮಿ।
ಧಿಮಿಗುಡುತಿದೆ ಆನಂದದ ಘೋಷಾ ॥ ೧ ॥

ಉದಯಾಸ್ತಿಲ್ಲದ ಬೆಳಗಿನ ಪ್ರಭೆಯು ।
ತುದಿಮೊದಲಿಲ್ಲದೆ ತುಂಬಿತು ಪೂರ್ಣ ॥
ಬುಧಜನರನುದಿನ ಸೇವಿಸುತಿರುವ ।
ಸದಮಲವಾದ ಸದಾ ಸವಿ ಸುಖ ॥ ೨ ॥
ವಿಹಿತ ವಿವೇಕದ ಅನುಭವ ಗೂಡಿ ।
ಬಾಹ್ಯಾಂತರದಲ್ಲಿ ಘನ ತೋರುತಲಿಹ ॥
ಸ್ವಹಿತ ಸುಖದ ಸುಧಾರಸಗರೆವಾ ।
ಮಹಿಪತಿ ಗುರುಕರುಣದ ಕೌತುಕ ॥ ೩ ॥

೩

ನಿಜವಾದ ಬ್ರಾಹ್ಮಣನು ಪಡೆಯುವ ಬಗೆಬಗೆಯ ಅನುಭಾವಗಳು

(ರಾಗ-ಮಾಂಡ, ತಾಲ-ಕೇರವಾ)

ಬ್ರಾಹ್ಮಣನೆಂದರೆ ಬ್ರಹ್ಮನ ತಿಳಿದವ ।
ಅವನೀಗ ಬ್ರಾಹ್ಮಣನು ॥ ಪ ॥
ಬ್ರಹ್ಮಭೇದವೆಂದು ಜಗವನು ಕಂಡವ ।
ಅವನೀಗ ಬ್ರಾಹ್ಮಣನು ॥ ಅ.ಪ. ॥
ಮೂಗಲಿ ವಾಯುವ ತುಂಬಿ ಎಳೆಯುವ ।
ಅವನೀಗ ಬ್ರಾಹ್ಮಣನು ॥
ನಾಗಸ್ವರದ ಧ್ವನಿ ಕಿವಿಯಲಿ ಕೇಳುವ ।
ಅವನೀಗ ಬ್ರಾಹ್ಮಣನು ॥
ಬೇಗನೆ ನೆಲೆ ನೆಲೆ ಆರನ್ನು ಅಡರುವ ।
ಅವನೀಗ ಬ್ರಾಹ್ಮಣನು ॥
ವೇಗದಿ ಜಂದ್ರನ ಮಂಡಲದಮೃತವನು ।
ಉಂಡವ ಬ್ರಾಹ್ಮಣನು ॥ ೧ ॥
ಮುತ್ತಿನ ಮಳೆಹನಿ ಉದುರುವಾಗ ।
ತೊಯ್ಯದವ ಬ್ರಾಹ್ಮಣನು ॥
ಎತ್ತೆತ್ತ ನೋಡಲು ಸೂಸು ಬೆಳದಿಂಗಳ ।
ಕಾಣುವ ಬ್ರಾಹ್ಮಣನು ॥
ಮತ್ತೆ ದ್ವಿದಳದ ಸಿಂಹಾಸನದಲಿ ।
ಕುಳಿತವ ಬ್ರಾಹ್ಮಣನು ॥
ಉತ್ತಮ ಸಹಸ್ರ ಕಮಲದೇರಿಕೆಯಲಿ ।
ಸೇರುವ ಬ್ರಾಹ್ಮಣನು ॥ ೨ ॥

ಫಳಫಳಿಸುವ ಬ್ರಹ್ಮರಂಧ್ರದಿ ಸುಖದಿಂದ ।
ಮಲಗುವ ಬ್ರಾಹ್ಮಣನು ॥
ಬಲು ರವಿಶತಕೋಟಿ ಶಿಂಶುಮಾರದಲಿ ।
ಸೇರುವ ಬ್ರಾಹ್ಮಣನು ॥
ಕಲಿಯುಗದಲಿ ಹರಿನಾಮಾಮೃತವನು ।
ಉಂಡವ ಬ್ರಾಹ್ಮಣನು ॥
ಸುಲಭದಿ **ಪುರಂದರ ವಿಠಲರಾಯನ** ।
ಸೇರುವ ಬ್ರಾಹ್ಮಣನು ॥ ೩ ॥

೪

ಫಕೀರರಾಗಿ ಸುತ್ತೆಲ್ಲ ಜ್ಯೋತಿಯ ಕಂಡೆವು, ಸವಿಸವಿ ಪ್ರಸಾದ ಉಂಡೆವು

(ರಾಗ-ಭೂಪ, ತಾಲ-ಕೇರವಾ)

ಹುಸೇನಿ ಸಾಹೇಬರ ಬದಿಯಲಿ ಹೋಗಿ ।
ಹಸನಾಗಿ ನಾವು ಬಂದೇವು ॥ ಪ ॥

ಮಸೂತಿಯೊಳಗಿನ ಮೂಲವ ತಿಳಿದು ।
ದೀನ ದಯಾಳನ ನೆನೆದೇವು ॥ ಅ.ಪ. ॥

ಲಾಡ ಬಂಧನದ ಲಾಡಿಯ ಕಟ್ಟಿ ।
ಓಡ್ಯಾಡು ಪಂಜೆಯ ಹಿಡಿದೇವೊ ॥
ಸೂರ್ಯ ಚಂದ್ರರು ಎಂದಿಗೆ ಇಲ್ಲಾ ।
ಆಂದೊಬ್ಬ ಪೀರನ ಕಂಡೇವೊ ॥ ೧ ॥

ಹಸರು ಹಳದಿ ಬಿಳಿದು ಕೆಂಪು ।
ಕುಶಲದ ಜೌಕಿಯ ಕಂಡೇವೊ ॥
ಮುಸಲರಗೂಡ ಫಕೀರರಾಗಿ ।
ಸವಿ ಸವಿ ಪ್ರಸಾದ ಉಂಡೇವೊ ॥ ೨ ॥

ಖತಾಲವೆಂಬೊ ಕತ್ತಲೆಯೊಳಗೆ ।
ಸುತ್ತೆಲ್ಲ ಜ್ಯೋತಿಯ ಕಂಡೇವೊ ॥
ಉತ್ತರ ಪಶ್ಚಿಮ ನವಬಾಜೆ ವಾದ್ಯವ ।
ಆದರ ಭ್ರಮಿ ನಾವು ಗೊಂಡೇವೋ ॥ ೩ ॥

ಖಾಲಿಯೆಂಬುವ ಡೋಲಿಯ ಮುರಿದು ।
ಒಳಗಿನ ಮೂಲವ ತಿಳಿದೇವೊ ॥

ಕಲಬುರಗಿಯ ಸಿದ್ಧೇಶ್ವರನ |
ಬಾಲರಾಗಿ ಪಡಕೊಂಡೇವೊ ॥ ೪ ॥

೫

ಶರೀರದಲ್ಲಿ ರೋಮಂಗಳೆಲ್ಲ ಕಂಗಳಾಗಿ ಪರಮಾತ್ಮನ ದರ್ಶನಾನಂದವನ್ನು ಪಡೆಯುವವು

(ವಚನ)

ನಿಮ್ಮ ನೋಟ ಆನಂತ ಸುಖ
ಕೂಟ ಪರಮ ಸುಖವಯ್ಯಾ.
ಆಪ್ಯಕೋಟಿ ರೋಮಾಂಗಳೂ
ಕಂಗಳಾಗಿ ನೋಡುತ್ತಿದ್ದೆನು.
ಕೂಡಲಸಂಗಮದೇವಯ್ಯಾ! ನಿಮ್ಮ ನೋಡಿ ನೋಡಿ
ಮನದಲ್ಲಿ ರತಿ ಹುಟ್ಟಿ ನಿಮಿರ್ದುವೆನ್ನ ಕಂಗಳು.

೬

ಸಾಧುಸಂತರ ಸಭೆಯ ದರ್ಶನ

(ರಾಗ-ಮಿಶ್ರಕಾಫಿ, ತಾಲ-ಕೇರವಾ)

ಸೈ ಸೈ ಸೈ ಕುಂತಿದೆನೆ | ಕುಂತ ಜಾಗದಾಗೆಲ್ಲರನೆ ॥ ಪ ॥
ಎಲ್ಲರ ಮುಖವ ಕಂಡೆನೆ | ಅಲ್ಲಿ |
ಸಭೆಯೊಳಗೆ ಶಿವನ ನೋಡಿದೆನೆ ॥ ಅ.ಪ. ॥
ಸಾಧುಸಂತರ ಸಭಾ ಕಂಡೆನೆ |
ಯೋಗಿ ಜೋಗಿಯಿರುವದು ನೋಡಿದೆನೆ ॥
ಸಾಗ್ರದಲ್ಲಿ ಸಾಂಬನ ಕಂಡೆನೆ | ಈ |
ಯೋಗ ಮಾಡಿಕೊಂಡವ ಧನ್ಯನೆ ॥ ೧ ॥
ಸಭಾದೊಳಗಿನ ಆರ್ಭೇನ ಹೇಳಲಿ |
ಗುಲಾಲ ಝುಮ್ಮರ ಹಾರಿತರೀ |
ಸುತ್ತೆಲ್ಲ ತಾರಕ ವರ್ಣದರೀ | ಇದು |
ತಿಳಿದವರಿಗೆ ವೈಕುಂತದರೀ ॥ ೨ ॥
ಹಸರು ಹಳದಿ ಕುಶಲಾದೊಂದು |
ಶೇಷನ ವರ್ಣಾ ತೋರುವದು ॥
ಈಶನ ರೂಪವು ಒಂದೊಂದು | ಏನು |
ಹೇಳಲಿ ನಾನು ಆ ಛಂದು ॥ ೩ ॥

ಎಂಥ ಸುಲಭ ಇದ್ದಾನೊ ದೇವ ।
ಅಲ್ಲಿ ಏರಿ ಮಾಡಿ ಆತನ ಧಾವಾ ॥
ದ್ವಾರ ತೆರೆದು ನೋಡುವೆ ಅವನ । ಪರ ।
ನಾದ ದಿವ್ಯದೊಳು ಮುಳುಗುವೆ ನಾ ॥ ೪ ॥

ಇಷ್ಟ ಅರ್ಥವು ಎಲ್ಲಿ ಆದ ।
ಫಣಿ ನೇತ್ರ ಮಧ್ಯದ ನಡುವದ ॥
ಮೂರು ಮೀರಿದವಗ ತೋರೇದ । ಗುರು ।
ಸಾರಿ ಹೇಳಿದರ ತಿಳಿದದ ॥ ೫ ॥

ಆತ್ಮನ ಅನುಭವ ಬಲ್ಲವರು ।
ಗುರು ನಿಂಬರಗಿ ಮಹಾರಾಜ ಸಾಧುರು ॥
ಯೋಗದ ಮಾರ್ಗ ತಿಳಿದವರು । ಗುರು ।
ಲಿಂಗ ಜಂಗಮ ಕೂಡಿದವರು ॥ ೬ ॥

೭

ಅಯ್ಯ ಮನವೇ! ಉರಿಯುವ ಕರ್ಪೂರದಂತೆ ಬೆಳಗು! ಅಮೃತವ ಕುಡಿ!
ನೀಲ ಮಂಟಪದಲ್ಲಿ ಆಡು ! ಬಯಲ ತೊಟ್ಟಿಲಲ್ಲಿ ಮಲಗಯ್ಯ!

(ರಾಗ-ಮಿಶ್ರಕಾಫಿ, ತಾಲ-ಕೇರವಾ)

ಬಾ ಬಾ ಬಾ ಎನ್ನ ಮೋಹದ ಮನಸ ॥ ಪ ॥
ಯತಿ ಮುನೀಶ್ವರಿಗೆ ಗತಿಗ್ಹಚ್ಚುವ ಕೂಸ ॥ ಅ.ಪ. ॥

ಹರಗುರುವಿನ ಒಲಿಸುವದು ಬಿರಿಯಲ್ಲೊ ಮನಸ ।
ನೀನೊಲಿದರೆ ಮೂರು ಲೋಕ ಒಲಿಯುವವು ಕೂಸ ॥ ೧ ॥

ಮೂಲ ಸಾಲಿ ಬೀಜಮಂತ್ರಾ ಓದು ಕಲಿ ಮನಸ ।
ಆದಿ ಅನಾದಿ ಆಚಿಕಿನ ಸುದ್ದಿ ಕದ್ದುಹೇಳು ಕೂಸ ॥ ೨ ॥

ಸಾಧನ ಮಾಡಿ ನಾದ ಬಿಂದುಕಳೆ ತಿಳಿಯುವ ಮನಸ ।
ನೀಲ ಮನೆಯೊಳು ಮೇಲು ಮಂಟಪದಿ ಲೋಲ್ಯಾಡು ಕೂಸ ॥ ೩ ॥

ಆರಿತು ಅಮೃತ ಗಟಗಟ ಕುಡಿಯುವ ಮನಸ ।
ಬಿಟ್ಟ ಬೈಲ ತೊಟ್ಟಿಲದೊಳು ಮಲಗುವ ಕೂಸ ॥ ೪ ॥

ಉರಿ ಉಂಡ ಕರ್ಪೂರದಂತೆ ಬೆಳಗುವ ಮನಸ ।
ಸಂಗ ಲಿಂಗ ಅಂಗಸಹಿತ ನುಂಗುವ ಕೂಸ ॥ ೫ ॥

ಪ್ರಕರಣ ಹದಿನೆಂಟು

ಪರತರ ಅನುಭಾವ

೧

ಪರಮಾತ್ಮನ ಜ್ಯೋತಿರೂಪವು ಬಣ್ಣಿಸಬಾರದ ವೈಭವದಿಂದ ನನ್ನಿದುರು ಬೆಳಗುತಿದೆ

(ರಾಗ-ಪಿಲೂ, ತಾಲ-ಕೇರವಾ)

ಸದಾ ಬೆಳಗುತದೆ । ಜ್ಯೋತಿ ।
ಸದಾ ಬೆಳಗುತದೆ ॥ ಪ ॥

ಸದಾ ಬೆಳಗುತದೆ ಹೃದಯಕಮಲದೊಳು ।
ಅಕೊ ಇದೆ ಇಲ್ಯಾದ ನೋಡು ಸಖಿ ॥ ಅ.ಪ. ॥

ತಾನೆ ತಾನು ಕುಳಿತು । ತನ್ನೊಳು ।
ಏನು ಕಳೆಯ ತುಂಬಿ ॥
ಏನು ಹೇಳಲಿ ಸ್ವಾನುಭವದ ।
ಖೂನ ತೋರಿಸಿದ ಜ್ಞಾನಮೂರುತಿ ॥ ೧ ॥

ತನ್ನ ತಾನೆ ಬರೆದು । ನಿಜ ಸುಖ- ।
ದಲ್ಲೆ ಮೈಮರೆದು ॥
ಅಲ್ಲ ಹೌದು; ಇಲ್ಲೆ ಉಂಟು ।
ಬಲ್ಲ ಜಾಣರಿಗೆ ಸೊಲ್ಲ ಸೂಕ್ಷ್ಮವಿದು ॥ ೨ ॥

ನಿತ್ಯ ನಿರುಪಾಧಿಗೆ । ಹತ್ತದೆ ।
ಮೆರೆವುದು ಬಯಲೊಳಗೆ ॥
ಸತ್ತು ಚಿತ್ತು ಆನಂದವಾಗಿ,
ಎತ್ತ ನೋಡಲದು ಕರ್ತು ಮೂರುತಿ ॥ ೩ ॥

೨

ಬಗೆಬಗೆಯ ಆನಂದಮಯ ಅನುಭವಗಳ ಮುಖಾಂತರ ಆತ್ಮನನ್ನು ಸೇರುವ ಕಲೆಯನ್ನು ಸದ್ಗುರುಗಳಿಂದ ಕಲಿಯೋಣ

(ರಾಗ-ಆನಂದಭೈರವಿ, ತಾಲ-ದೀಪಚಂದಿ)

ಅರ್ಥಿಯಾಗಿ ಬನ್ನಿ ಅರಿತು ನೋಡುವ ಗುರುಮೂರ್ತಿಯಿಂದ ।
ನಿರ್ತವಾಗಿ ಪೂರ್ಣ ಬೆರೆತು ಕೂಡುವ ಬನ್ನಿ ಗುರ್ತದಿಂದ ॥ ಪ ॥

ಸೂರ್ಯನಿಲ್ಲದೆ ಸುಪ್ರಕಾಶ ತುಂಬಿದೆ ಹೇಳಲೇನಾ ।
ತುರಿಯಾವಸ್ಥೆಯಲ್ಲಿ ಬೆರಿತು ಕೂಡುವ ಜ್ಞಾನಿ ಬಲ್ಲ ಖೂನಾ ॥
ಬರಿಯ ಮಾತನಾಡಿ ಹೊರೆಯ ಹೇಳುವದಲ್ಲ ಅರಿವು ಸ್ಥಾನಾ ।
ಪರಿಯಾಯದಿಂದಲಿ ಪರಿಣಮಿಸಿ ನೋಡೊ ಪರಮ ಪ್ರಾಣ ॥ ೧ ॥

ಚಂದ್ರನಿಲ್ಲದೆ ಬೆಳದಿಂಗಳ ಬಿದ್ದದೆ ಬಹು ಭಾಳಾ ।
ಇಂದ್ರಿಯಾದಿಗಳೆಲ್ಲ ಹರುಷಾಗಿ ನೋಡುವವು ಸರ್ವಕಾಲಾ ॥
ಸುಂದರವಾದ ಸುವಸ್ತುವೊಂದೊಳಗದ ಬಲು ಮೇಲಾ ।
ಸಾಂದ್ರವಾದ ಸುಖ ತುಂಬಿ ತುಳುಕುತದೆ ಥಳಥಳಾ ॥ ೨ ॥

ಮನದ ಕೊನೆಯಲ್ಲಿದ್ದ ಘನಸುಖ ನೋಡಿರಿ ನೆನೆದು ಬೇಗಾ ।
ಅನುಭವಿಗಳಿಗಿದು ಅನುಕೂಲವಾಗಿದೆ ಬ್ರಹ್ಮಭೋಗಾ ॥
ನಾನೀನೆಂಬುವ ಮಾತು ಏನು ತಾಳುವದಲ್ಲ ರಾಜಯೋಗ ।
ಅನುದಿನ ಮಹಿಪತಿ ತಾನೆ ತಾನಾದನು ಸದ್ಗುರುವೀಗ ॥ ೩ ॥

೩

ಆತ್ಮಾನುಭಾವದ ಅನೂಲ್ಯ ಆನಂದವನ್ನು ಬಣ್ಣಿಸಲು ಸರಿಯಾದ ಶಬ್ದಗಳೇ ದೊರೆಯಲರಿಯವು

(ರಾಗ–ಕಾಫಿ, ತಾಲ–ದಾದರಾ)

ಪೇಳಲಳವೆ ಸ್ವಾನುಭವದ ಸುಖವ ಮಾನಿನೀ ।
ಭಾನುಕೋಟಿ ಪ್ರಭೆಗೆ ಮಿಗಿಲು ಕಂಡೆ ಕಾಮಿನೀ ॥ ಪ ॥

ಮೂಲದ್ವಾರ ಮೆಟ್ಟಿ ಮೂಲ ಕೊನೆಗೇರಿದೆ ।
ಮೇಲು ಮಂಟಪ ಆದಿ ಮೂಲ ಮೂರ್ತಿ ಹೊಳೆದಿದೆ ॥
ಲೀಲೆಯಿಂದ ಭ್ರಮರಸ್ವನದ ನಾದ ನುಡಿದಿತೆ ।
ಮೋಲವಿಲ್ಲದಂಥಾ ಸ್ವಾನಂದವಾಯಿತೆ ॥ ೧ ॥

ನಾದದೊಳು ಸೂಸು ನಾದಾ ಎದ್ದು ದಿಮ್ಮಿತೆ ।
ಜೋಧವಡಗಿ ಬ್ರಹ್ಮದೊಳಗೆ ಐಕ್ಯವಾದಿತೆ ॥
ಸೌಖ್ಯನುಂಡು ಸುಖಕೆ ಮೆಚ್ಚಿ ಮೈಯ ಮರೆತಿದೆ ।
ಆದಿ ಅನಾದಿಯಾಗಿ ತಾನೆ ನಿಂತಿತೆ ॥ ೨ ॥

ಉಣದೆ ಉಡದೆ ಉದರ ತುಂಬಿ ಉಕ್ಕಲೇರಿತೆ ।
ಉಕ್ಕಲೇರಿ ಇಂದ್ರಿಯಗಳ ಉಲವು ಅಡಗಿತೆ ॥
ಉಲವು ಅಡಗಿ ಸೂಸುಗಾಳಿ ಸುಮ್ಮ ನಿಂತಿತೆ ।
ಒಳಗೆ ಹೊರಗೆ ಒಂದೆ ಸವನೆ ಕಲ್ಮ ಬೆಳಗಿತೆ ॥ ೩ ॥

೪

ದಿವ್ಯ ದರ್ಶನ, ಶ್ರವಣ, ಆತ್ಮೈಕ್ಯಗಳ ಅಪೂರ್ವ ಅನುಭಾವಗಳು

(ರಾಗ-ಆನಂದಭೈರವಿ, ತಾಲ-ದೀಪಚಂದಿ)

ಕಣ್ಣಿನೊಳಗ ನೋಡಿ ಕೈವಲ್ಯವ ನೀವು ಕಣ್ಣು ತುಂಬಿ।
ಬಣ್ಣಿಸಲಳವಲ್ಲ ಸದ್ಗುರುಚರಣವ ನಿಜ ನಂಬಿ ॥ ಪ ॥

ಕತ್ತಲಿ ಮನೆಯಲಿ ರತ್ನದ ಮಣಿಯದೆ ನೋಡಿಕೊಳ್ಳಿ।
ಚಿತ್ತದ ಕೊನೆಯಲಿ ಶ್ರೀಹರಿ ಕುಂತಾನೆ ನೋಡಿಕೊಳ್ಳಿ ॥ ೧ ॥

ಒಳಹೊರಗೊಂದಾಗಿ ಹೊಳೆಯುತಲಿರುವದು ನಮನ ಮಾಡಿ।
ಥಳಥಳಿಸುವ ಸುವರ್ಣದ ಜ್ಯೋತಿಯ ತಾರಕ ನೋಡಿ ॥ ೨ ॥

ಉನ್ಮನಿಯೊಳಗಿದ್ದ ಓಂಕಾರ ನಾದವ ಕೇಳಿರಯ್ಯಾ।
ಸನ್ಮಾನದಿಂದಲಿ ಸಾಧುಸಂತರ ಬಲಗೊಂಬಿರಯ್ಯಾ ॥ ೩ ॥

ಕಾಯವು ಸ್ಥಿರವಲ್ಲ ಮಾಯದ ಸಂಸಾರ ಅಳಿಯಬೇಕು।
ಕಾಯವು ಇರಲಿಕ್ಕೆ ಕಮಲನಾಭನಲ್ಲಿ ಬೆರೆಯಬೇಕು ॥ ೪ ॥

ಜ್ಞಾನಿಯಾದ ಮೇಲೆ ತಾನೆ ತಾನಾದದ್ದು ತಿಳಿಯಬೇಕು।
ಸುಜ್ಞಾನಿ ಪುರಂದರ ವಿಠಲರಾಯನ ಕೂಡ ಬೆರೆಯಬೇಕು ॥ ೫ ॥

೫

ಧ್ಯಾನದಲ್ಲಿ ನಿರತನಾದ ಸಾಧಕನಿಗೆ ಪರಮಾತ್ಮನು ಕಾಣಿಸಿಕೊಳ್ಳುವ ವಿವಿಧ ಬಗೆಗಳು

(i)

ಷಟ್ಪದಿ

ಮಲಗಿ ಪರಮಾದರದಿ ಪಾಡಲು
ಕುಳಿತು ಕೇಳುವ; ಕುಳಿತು ಪಾಡಲು
ನಿಲುವ; ನಿಂತರೆ ನಲಿವ; ನಲಿದರೆ ಒಲಿವ ನಿಮಗೆಂಬ।
ಸುಲಭನೋ ಹರಿ ತನ್ನವರನರ-
ಗಳಿಗೆ ಬಿಟ್ಟಗಲದ ರಮಾಧವ-
ನೊಲಿಸಲರಿಯದೆ ಪಾಮರರು ಬಳಲುವರು ಭವದೊಳಗೆ ॥

(ii)

(ಉಗಾಭೋಗ)

ಮಲಗಿ ಪಾಡಿದರೆ ಕುಳಿತು ಕೇಳುವ।
ಕುಳಿತು ಪಾಡಿದರೆ ನಿಂತು ಕೇಳುವ।

ನಿಂತು ಪಾಡಿದರೆ ನಲಿದು ಕೇಳುವ ।
ನಲಿದು ಪಾಡಿದರೆ ಸ್ವರ್ಗ ಸೂರೆಬಿಟ್ಟೆನೆಂಬ ।
ಪುರಂದರ ವಿತಲಾ ॥

೬

ಬಗೆಬಗೆಯ ಅತೀಂದ್ರಿಯ ಅನುಭಾವಗಳು ಸಾಧಕನೆದುರು ಸುಳಿದಾಡುವ ರೀತಿ

(ರಾಗ-ಭೈರವಿ, ತಾಲ-ದೀಪಚಂದಿ)

ಕಣ್ಣಾರೆ ಕಂಡೆವು ಚಿನ್ಮಯದ ರೂಪ ।
ಕಣ್ಣಾರೆ ಕಂಡೆವು ಮಾ ॥ ಪ ॥

ಕಣ್ಣೊಳಗಿಹುದು ಕಾಣಿಸಿಕೊಳ್ಳದು ।
ಕಣ್ಣಿಗೆ ಕಣ್ಣಾಗಿ ದೋರುದು ಮಾ ॥
ಕಣ್ಣಿನೊಳಗಿನ್ನು ಕಣ್ಣಾರೆ ಕಾಣುವ ।
ಜಾಣರಿಗೆ ಪುಣ್ಯಗೈಸುವದು ಮಾ ॥ ೧ ॥

ಕೇಳಿಕಿಲಿಹುದು ಕೇಳಿಸಗೊಡದು ।
ಕೇಳಿಕೆಯೆ ತಾನಾಗಿಹುದು ಮಾ ॥
ಕೇಳಿಕೆಯೊಳಿನ್ನು ಕೇಳಲು ಕಿವಿಗೊಟ್ಟು ।
ಘೇಳಿನಿಸುತ ಘೋಷಗೈಸುವದು ಮಾ ॥ ೨ ॥

ಮೂಡುತ ಆಡುತ ಆಡಗುತಲಿಹುದು ।
ಗೂಢಗುಹ್ಯವಾಗಿ ದೋರುದು ಮಾ ॥
ನೋಡೆನೆಂದರೆ ತನ್ನ ಗೂಡಿನೊಳಗದೆ ।
ಹಿಡಿದೆನೆಂದರೆ ಕೈಗೂಡದು ಮಾ ॥ ೩ ॥

ಫಳಫಳಗುಡುತ ಹೊಳೆವುತಲಿಹುದು ।
ಸುಳಿವು ತನ್ನ ತಿಳಿಯಗೊಡದು ಮಾ ॥
ಒಲ್ಲೆನೆಂದರೆ ತನ್ನ ನೆಲೆ ನಿಭದೋರುತ ।
ಒಳಹೊರಗೆ ತಾನು ಭಾಸುದು ಮಾ ॥ ೪ ॥

ಉತ್ತಮತೊಳಗೆ ಅತ್ಯಂತವಾಗಿನ್ನು ।
ಅತ್ತಿತ್ತಲಾಗದೆ ಇಹುದು ಮಾ ॥
ನಿತ್ಯ ನಿಜವಾದ ವಸ್ತು ಮಹಿಪತಿ ।
ಹೃತ್ಕಮಲದೊಳು ಕಂಡನು ಮಾ ॥ ೫ ॥

೭

ಪಾರಮಾರ್ಥಿಕ ಮಗನ ಜನನವನ್ನು ಕುರಿತ ಜೋಗುಳ ಪದ

(ರಾಗ-ಸಿಲೂ, ತಾಲ-ಕೇರವಾ)

ಮಗಾ ಹುಟ್ಟಿದವ್ವಾ । ಎನಗೊಬ್ಬ ।
ಮಗಾ ಹುಟ್ಟಿದವ್ವಾ ॥ ಪ ॥
ಮಗಾ ಹುಟ್ಟಿ ಎನ್ನ ಮಾಯವನಳಿಸಿ ।
ಜಗಾ ಬಿಡಿಸಿ ಎನ್ನ ಜನ್ಮವ ಕಡಿಸಿದಾ ॥ ಅ.ಪ. ॥
ನವ್ವ ತಿಂಗಳವ್ವಾ । ಮೈಯೆಲ್ಲ ।
ನೋವ ತಿಂದೆನವ್ವಾ ॥
ದೇಹಕೆ ಹತ್ತದ ಮಾಯಕೆ ನಿಲುಕದ ।
ಮೋಸಗಾರನವ್ವಾ ॥ ೧ ॥
ಮಗಾ ಹುಟ್ಟಿದಾಗ । ಮನೆಯೆಲ್ಲ ।
ಬೆಳಕ ಕಂಡೆನವ್ವಾ ॥
ರಾಳ ಜ್ಯೋತಿಗಳ ಹೂವ ಬಾಣಗಳು ।
ಬಹಳ ಕಂಡೆನವ್ವಾ ॥ ೨ ॥
ಆಸೆ ಅಳಿಸಿದವ್ವಾ । ಆರು ।
ಮೂರು ಸುಡಿಸಿದವ್ವಾ ॥
ಘೋರ ಬಿಟ್ಟ ಎನ್ನ ಪೂರದ ಒಳಗೆ ।
ಸೂರ್ಯ ಹುಟ್ಟಿದವ್ವಾ ॥ ೩ ॥
ಘಟ್ಟಿ ತೊಟ್ಟಿಲವ್ವಾ । ಆತ ।
ಗಾಗಿ ಕಟ್ಟೀನವ್ವಾ ॥
ಪಂಚವರ್ಣದವ್ವಾ । ಪ್ರಭುವಿನ ।
ತೂಗು ತೊಟ್ಟಿಲವ್ವಾ ॥
ತೊಟ್ಟಿಲದೊಳಗ ಧಿಟ್ಟನ ಮಲಗಿಸಿ ।
ಮುಟ್ಟಿ ತೂಗಿನವ್ವಾ ॥ ೪ ॥
ಹೆಸರ ಇಟ್ಟೀನವ್ವಾ । ಕುಶಲದ ।
ವಸ್ತು ರಂಗನವ್ವಾ ॥
ಅಗಾಧ ಗುರುವಿನ ತೂಗುತ ನಾನು ।
ಜೋಗುಳ ಹಾಡಿದೆನವ್ವಾ ॥ ೫ ॥
ಯಾರ ಪುಣ್ಯನವ್ವಾ । ನಿಂಬರಗಿ ।
ಗುರುನ ತಂದಿದವ್ವಾ ॥
ಚಂದಾಗಿ ಆತನ ಪಾದಕ ಹೊಂದಿ ।
ಕಂದನ ಹಡೆದೆನವ್ವಾ ॥ ೬ ॥

ಪ್ರಕರಣ ಹತ್ತೊಂಬತ್ತು

ಸಾಕ್ಷಾತ್ಕಾರದ ಪರಿಣಾಮಗಳು (ಭಾಗ-೧)

೧

ಆತ್ಮಾನುಭಾವಿಯು ಪುನರ್ಜನ್ಮರಹಿತನು

(ರಾಗ-ದೇಸ, ತಾಲ-ದೀಪಚಂದಿ)

ಗುರುವೆ ನಿಮ್ಮಾಜ್ಞೆಯನು ಮೀರದೆ ನಡೆದವನು ।
ನರನನ್ನಲು ಬೇಡಾ ಆವ ಪರಮಾತ್ಮನು ॥ ಪ ॥

ಅರಿಯದ ಪ್ರಾಣಿಗಳು ಅವರೇನು ಬಲ್ಲರು ।
ಪರಕೆ ಪರತರವಾದ ಪರವಸ್ತು ಅವನು ॥ ಅ.ಪ. ॥

ಹೆಪ್ಪು ಹಾಲಿಗೆ ಕೊಡಲು, ತುಪ್ಪ ಅದರೊಳಗಾಗಿ ।
ತುಪ್ಪ ಕೂಡುವದೆ ಮರಳಿ ಹಾಲಿನೊಳು ॥
ನಿಪ್ಪತ್ತಿ ನಿಜರೂಪನಾದಂಥ ಪುರುಷನು ।
ಅಪ್ಪಿ ಸಂಸಾರಕ್ಕೆ ಒಳಗಾಗನವನು ॥ ॥ ೧ ॥

ನದಿಯು ತಾ ಪುಟ್ಟಿ ಆದು ಸಮುದ್ರವ ಕೂಡಲು ।
ನದಿಯು ತಾ ಪೋಗುವದೆ ಪುಟ್ಟಿದೆಡೆಗೆ ॥
ಸದಮಲ ಸುಜ್ಞಾನಿ ಪ್ರಪಂಚ ಮಾಡಲು ।
ಆದರೊಳು ಕೂಡಿದರೂ ಬೆರೆಯನು ಅವನು ॥ ೨ ॥

ಮುತ್ತು ನೀರೊಳು ಪುಟ್ಟಿ, ಮತ್ತೆ ನೀರಾಗುವದೆ ?
ಮುತ್ತು ಲಕ್ಷಾಂತರಕೆ ಬೆಲೆಯಾದೀತು ॥
ತತ್ವದ ಜ್ಞಾನಿಯವನು ಹುಟ್ಟುವ ನರನಲ್ಲ ।
ಅತ್ಯಂತ ಆನಂದಪರಿಪೂರ್ಣನವನು ॥ ೩ ॥

ಗರುಡನ ಮಂತ್ರವನು ಕಲಿತಿರುವಾತಗೆ ।
ಉರಗ ಕಚ್ಚಿದರೇನು ವಿಷವೇರುವದೆ ॥
ಪರಿಪರಿ ವಿಷಯದೊಳ ಮುಳುಗಾಡಿದರಾತಗೆ ।
ಧರ್ಮ ಕರ್ಮಗಳಿಂದ ಆತಗೇನು ॥ ೪ ॥

ಜಾತಿಯೊಳು ಪುಟ್ಟಿ ಅಜಾತನಾದವಗೆ |
ಜಾತಿ ಧರ್ಮಗಳು ಅತಗೇನು ||
ಜ್ಯೋತಿಪ್ರಕಾಶ ನಮ್ಮ ಕೂಡಲೂರೇಶನು |
ದಾತ ಪ್ರಖ್ಯಾತ ಅವಧೂತನವನು ॥ ೫ ॥

೨

ತನ್ನ ತಾ ಕಂಡ ಬಳಿಕ ದೇಹ ಇದ್ದರೂ ಸರಿ, ಬಿದ್ದರೂ ಸರಿ !

(ರಾಗ-ದರಬಾರಿ, ತಾಲ-ಕೇರವಾ)

ಇದ್ದರಿರಲೀ ದೇಹಾ ಹೋದರೆ ಹೋಗಲಿ ॥ ಪ ॥
ಪಂಚತತ್ವ ಭಾವನಳಿದು ಪರಮ ಆಸನ ಮುದ್ರೆ ಬಲಿದು |
ಸಂಚಿತಾರ್ಥ ಕರ್ಮ ಹರಿದು, ಸರ್ವಸಾಕ್ಷಿಯಾದ ಮೇಲೆ ॥ ಅ.ಪ. ॥
ಹೆಣ್ಣು ಹೊನ್ನು ಮಣ್ಣು ಬಿಟ್ಟು ಕಣ್ಣಿನೊಳಗೆ ಕಣ್ಣು ಕಂಡು |
ಕನ್ನಡಿ ಹಿಡಿದು ನೋಡಿದಂತೆ ತನ್ನ ನಿಜವ ತಿಳಿದ ಬಳಿಕ ॥ ೧ ॥
ಸುತ್ತು ಸುಳಿವ ಮನವ ನಿಲಿಸಿ, ಚಿತ್ತ ಕಳೆ ಪೂರ್ಣ ತುಂಬಿ |
ಮತ್ತೆ ಗಂಗಾ ಯಮುನೆ ಸ್ನಾನ ನಿತ್ಯನೇಮದಿ ಮಾಡಿದ ಮೇಲೆ ॥ ೨ ॥
ಮೂಲ ಮಂತ್ರ ಜಪವು ಬಲಿದು, ಸ್ಥೂಲಸೂಕ್ಷ್ಮ ಕಾರಣ ತಿಳಿದು |
ಕಾಲತ್ರಯದ ಸಮಯನಳಿದು, ಮೂಲಬ್ರಹ್ಮನಾದ ಮೇಲೆ ॥ ೩ ॥
ಗುರುವಿನ ಜ್ಞಾನ ಕಣ್ಣಿಲಿ ಕಂಡು, ಪರಕೆ ಪರನ ನೆನಿಸಿಕೊಂಡು |
ಶ್ರೀಗಿರಿಮುಲ್ಲೇಶನ ಕಂಡು, ಪರಮಪಾವನನಾದ ಮೇಲೆ ॥ ೪ ॥

೩

ವಿಶ್ವದ ಮೂಲೆಮೂಲೆಗಳಲ್ಲಿ ಪರಮಾತ್ಮನನ್ನು ಕಂಡು ಸಂತನು ಅತ್ಯಾನಂದದಲ್ಲಿ ಮೈಮರೆಯುವನು

(ರಾಗ-ಕಾಫಿ, ತಾಲ-ಕೇರವಾ)

ತನ್ನ ತಾ ತಿಳಿದ ಮೇಲೆ ಇನ್ನೇನಿನ್ನೇನು |
ತನ್ನಂತೆ ಪರರ ಜೀವರ ಮನ್ನಿಸಿ ಮೂಕನಾದ ಮೇಲೆ ॥ ಪ ॥
ತಾನೆ ಪೃಥ್ವಿ ಆಪ ತೇಜಾ | ತಾನೇ ವಾಯು ಆಕಾಶಾತ್ಮಾ |
ತಾನೆ ಸೂರ್ಯ ಚಂದ್ರ ತಾರಾ | ತಾನೇ ಬ್ರಹ್ಮಾಂಡಾದ ಮೇಲೆ ॥ ೧ ॥
ತಾನೆ ಜಿಹ್ವಾ ಘ್ರಾಣ ನೇತ್ರಾ | ತಾನೆ ಶ್ರೋತೃ ತ್ವಕ್ಕು ಹೃದಯಾ |
ತಾನೆ ಕಾಯಾ ಕರಣಾ ಹರಣಾ | ತಾನೆ ಪಿಂಡಾಂಡಾದ ಮೇಲೆ ॥ ೨ ॥

ತಾನೆ ಲಕ್ಷ ಸಾವಿರ ನೂರು । ತಾನೆ ಹತ್ತೊಂಬತ್ತು ಎಂಟೇಳು ।
ತಾನೆ ಆರೈದು ನಾಲ್ಕು ಮೂರು । ತಾನೆ ಎರಡೊಂದಾದ ಮೇಲೆ ॥ ೩ ॥

ತಾನೆ ಸತ್ತಾ ಅತ್ತಾ ಹೊತ್ತಾ । ತಾನೆ ನಿತ್ಯಾ ಸತ್ಯಾ–ನೃತ್ಯಾ ।
ತಾನೆ ಅರಿತಾ ಬೆರಿತಾ ಮರಿತಾ । ತಾನೆ ಸರ್ವೋಂದಾದ ಮೇಲೆ ॥ ೪ ॥

ತಾನೆ ನೀನು ನೀನೆ ತಾನು । ತಾನು ಇಲ್ಲಾ ನೀನು ಇಲ್ಲಾ ।
ತಾನೇ **ಮಹಂತ** ತಾನೆ ನಾನು । ಏನೂ ಏನೊಂದಾದ ಮೇಲೆ ॥ ೫ ॥

೪

ಕಣ್ಣಿನೊಳಗೆ ಕಣ್ಣು ನೆಟ್ಟು ನಿಂತಾಗ, ಈಗ ಕಾಣುವ ಸೃಷ್ಟಿಯು ಅಳಿದು ಅನುಪಮ ಆನಂದದಿಂದ ತುಂಬಿದ ನವಸೃಷ್ಟಿಯೆ ಕಂಗಳೆದುರು ನಿಲ್ಲುವದು

(ರಾಗ–ಆನಂದಭೈರವಿ, ತಾಲ–ದೀಪಚಂದಿ)

ದೃಷ್ಟಿಯೊಳಗೆ ದೃಷ್ಟಿ ನಿಂತಿತು । ನೀ ನೋಡು ಸಖಿಯೆ ।
ದೃಷ್ಟವೆಲ್ಲ ನಷ್ಟವಾಯಿತು ॥ ಪ ॥

ಕಷ್ಟವೆಲ್ಲ ಕಡೆಗೆ ಒತ್ತಿ । ದೃಷ್ಟವನ್ನು ಮೀರಿ ನಿಂತು ।
ಸೃಷ್ಟಿಯೊಳಗೆ ತುಷ್ಟಿಗೈದನೆ ॥ ಅ.ಪ. ॥

ಕರ್ಮವೆಲ್ಲ ಕಾಣದೆ ಹೋಯಿತು । ಈ ಸರ್ವಕಾಲ ।
ಧರ್ಮವೆಲ್ಲ ತೂಗಿ ನಿಂತಿತು ॥

ಸರ್ವವೆಲ್ಲ ಇನ್ನು ಮತ್ತೆ । ಉರ್ವಿಯೊಳಗೆ ಜನಿಸಲಾಗಿ ।
ಪರ್ವತಾಗ್ರ ಭೂಮಿಯಿನ್ನು । ನಿರ್ವಿಕಾರ ತೋರಿತಲ್ಲಾ ॥ ೧ ॥

ಐದು ಮಂದಿ ಕೂಡಿ ಬಂದರು । ಕೂಡಿ ಬಂದು ।
ಐದಕೈದು ಆಗಲದಾದರು ॥

ಐದರೊಳಗೆ ನೋಡಲಿನ್ನು । ಐದಕೈದು ತಾನೆಯೆಲ್ಲಾ ।
ಐದರೊಳಗೆ ಬಂದು ನಿಂತೆನೆ ॥ ೨ ॥

ಹಿಂದು ಎಂದು ಕಂಡಿದ್ದಿಲ್ಲವೆ । ಇಂಥಾ ಸುಖವು ।
ಮುಂದು ನಾನು ಯಾರಿಗುಸುರಲೆ ॥

ತಂದೆ **ಗುರು ಭವತಾರಕನ** ಪಾದ । ಹೊಂದಿದವರಿಗೆ ಕೇಳಿದೆನೊ ।
ಎಂದಿಗಿಂದಿಗೆ ಹೀಂಗೆ ಆಂಬುರೆ ॥ ೩ ॥

೫

ಪರಮಾತ್ಮನ ಪ್ರೀತಿಯಿಂದ ಮತ್ತನಾದ ಸಂತನ ವಿವಿಧ ಚಟುವಟಿಕೆಗಳು

(ರಾಗ-ಮಿಶ್ರಕಾಫಿ, ತಾಲ-ಕೇರವಾ)

ಎಂಥಾ ಹುಚ್ಚು ಹಿಡಿದೀತವಗ ।
ಯಾರು ಕಲಿಸಿ ಬಿಟ್ಟರವ್ವಾ ॥
ಅಂತು ಅವನು ಏನೇನಾದ ।
ಸಂತಾನಳಿದು ನಿಃಸಂತಾನಾದಾ ॥ ಪ ॥

ಕಟ್ಟಿದ ಗೋಡೆ ಕೆಡುವುತಲಾನ ।
ಉಟ್ಟ ಆರವಿ ಹರಿವುತಲಾನ ॥
ಅಟ್ಟ ಗಡಿಗಿ ಯೆಲ್ಲನೆ ಒಡೆದು ।
ಹುಟ್ಟಾ ಮುರಿದು ಬಿಟ್ಟಾನವ್ವಾ ॥ ೧ ॥

ತನ್ನ ದೇಹದ ಸುಖವನರಿಯಾ ।
ಪರರ ಸುಖವನೇನು ಬಲ್ಲಾ ॥
ತನ್ನ ಮಾತಾ ತಾನೆ ಹೇಳಿ ।
ಇನ್ನು ಎಷ್ಟು ನಗುತಿಹನವ್ವಾ ॥ ೨ ॥

ಹಮ್ಮು ದಮ್ಮನೆಲ್ಲಾ ನಳಿದಾ ।
ಬ್ರಹ್ಮನೆಂಬುದ ತಾನೆ ತಿಳಿದಾ ॥
ಸೃಷ್ಟಿಯೊಳು **ಕೂಡಲೂರೇಶನ** ।
ಬಟ್ಟ ಬಯಲ ಪ್ರಭೆಯಾದಾ ॥ ೩ ॥

೬

ದೈವೀ ಉನ್ಮಾದಾವಸ್ಥೆಯ ಬಣ್ಣನೆ

(ರಾಗ-ಮಿಶ್ರಕಾಫಿ, ತಾಲ-ಕೇರವಾ)

ಹುಚ್ಚು ಹಿಡಿಯಿತು ಎನಗೆ ಹುಚ್ಚು ಹಿಡಿಯಿತು ।
ಅಚ್ಯುತನ ನಾಮವೆಂಬ ಮೆಚ್ಚು ಮದ್ದು ತಲೆಗೆ ಏರಿ ॥ ಪ ॥

ವಾಸುದೇವ ಹರಿಯೆ ಎಂದು ವದನದಿಂದ ಒದರುವೆ । ಮಾಯಾ- ।
ಪಾಶವೆಂಬ ಆಂಗಿಯನ್ನು ಹರಿದು ಹರಿದು ಹಾಕುವೆ ॥ ೧ ॥

ಕೇಶವಗೇರಿಸಿದ ಹೂವ ಮುಡಿದು ಕುಣಿದು ಆಡುವೆ । ಕೆಟ್ಟ ।
ದೋಷವೆಂಬ ಗೋಡೆಯನ್ನು ಕೆದರಿ ಕೆದರಿ ಹಾಕುವೆ ॥ ೨ ॥

ಕೃಷ್ಣನಂಘ್ರಿಕಮಲದಲ್ಲಿ ಸೊರಗಿ ಕೊರಗಿ ಬೀಳುವೆ । ಭವ- ।
ಕಷ್ಟವೆಂಬ ಕುಂಭವನ್ನು ಒಡೆದು ಒಡೆದು ಹಾಕುವೆ ॥ ೩ ॥

ನಿಷ್ಠುರನ್ನು ಕಂಡು ಅವರ ಹಿಂದೆ ಹಿಂದೆ ತಿರಗುವೆ । ಕಡು ।
ದುಷ್ಟರನ್ನು ಕಂಡು ಕಲ್ಲುಕಲ್ಲಿನಿಂದ ಬೀಸುವೆ ॥ ೪ ॥

ಬಂಧು ಬಳಗದವರೊಳುದಾಸೀನನಾಗಿ ಬಾಳುವೆ । ಎನ್ನ ।
ತಂದೆ ಪುರಂದರ ವಿಠಲನ್ನ ನೆನೆದು ಕುಣಿದು ಹಾಡುವೆ ॥ ೫ ॥

೭

ಪರಮಾತ್ಮನ ಸಾಕ್ಷಾತ್ಕಾರದಿಂದುಂಟಾದ ಆನಂದಪರವಶತೆ

(ರಾಗ-ಮಾಂಡ, ತಾಲ-ಕೇರವಾ)

ಸದ್ಗುರು ಸಾಕಿದ ಮುದ್ದಾನಿ ಬರುತಿದೆ ।
ಎದ್ದು ಹೋಗಿರಿ ಇದ್ದ ನಿಂದಕರು ॥ ಪ ॥

ಬಿದ್ದು ಭವದೊಳು ಹೊರಳ್ಯಾಡು ಜನರನ್ನು ।
ಉದ್ಧಾರ ಮಾಡುತ ಬರುತಲಿದೆ ॥ ಅ.ಪ. ॥

ಆಕಾಶ ನೋಡುತ ವಾಯುವ ನುಂಗುತ ।
ಝೇಂಕರಿಸುತಲದು ಬರುತಲಿದೆ ॥

ಓಂಕೀಲ ಹಿಡಿದು ಚೌಕ ಪೀಠದಿ ಬಂದು ।
ಆನಂದಭರಿತಾಗಿ ಬರುತಲಿದೆ ॥ ೧ ॥

ಅಷ್ಟಮದಗಳೆಂಬೊ ದುಷ್ಟ ನೀಚರನೀಗ ।
ಶಿಟ್ಟಲೆ ಶೀಳ್ಯಾಡಿ ಬರುತಲಿದೆ ॥

ಹುಟ್ಟು ಸಾವುಗಳೆಂಬೊ ಹಾದಿ ಬಟ್ಟೆಯ ಕಟ್ಟಿ ।
ಸುಟ್ಟು ಕಾಮಕ್ರೋಧ ಬರುತಲಿದೆ ॥ ೨ ॥

ಪ್ರಣಮಸ್ವರೂಪಪ ಅನುದಿನ ನೋಡುತ ।
ಘನ ಸುಖದಲ್ಲಿದು ಬರುತಲಿದೆ ॥

ಪ್ರಣಯಿ ಕಲ್ಮೇಶನೊಳ್ ಮನ ಮಗ್ನವಂ ಮಾಡಿ ।
ಚಿನ್ಮಯಾತ್ಮನಾಗಿ ಬರುತಲಿದೆ ॥ ೩ ॥

ಪ್ರಕರಣ ಇಪ್ಪತ್ತು

ಸಾಕ್ಷಾತ್ಕಾರದ ಪರಿಣಾಮಗಳು (ಭಾಗ – ೨)

೧

ಪಾರಮಾರ್ಥಿಕ ಜೀವನವು ಉನ್ನತತಮ ಜಟುವಟಿಕೆಯ ಜೀವನ

(ರಾಗ–ದರಬಾರಿ, ತಾಲ–ದೀಪಚಂದಿ)

ಬ್ರಹ್ಮಾನಂದದ ಸುಖವೇನು ನಿನಗೆ।
ಸುಮ್ಮನಿದ್ದರೆ ಹ್ಯಾಂಗಾಗುವದರುವೆ ॥ ಪ ॥
ದ್ವಾರಗಳೊಂಬತ್ತು ಬಾಗಿಲ ಮುಚ್ಚುವ ತನಕ।
ಪರಮಪ್ರಕಾಶದ ಕದ ತೆರೆಯುವ ತನಕ ॥
ಹರಿವ ತ್ರಿನದಿ ಸಂಗಮ ದಾಟುವ ತನಕ।
ಎರಡು ದಾರಿಯ ಬಿಟ್ಟು ನಡು ಹೋಗುವ ತನಕ ॥ ೧ ॥
ರಂಗಮಂಟಪ ಪೊಕ್ಕು ಸ್ಥಿರವಾಗುವ ತನಕ।
ಹಿಂಗದ ರವಿಕೋಟಿ ಪ್ರಭೆ ಕಾಣುವ ತನಕ ॥
ಕಂಗೊಳಿಸುವನಾರ್ಭಟ ಕೇಳುವ ತನಕ।
ಕಂಗಳಲ್ಲಿ ಕಣ್ಣ ಕಂಡು ಬೆರಗಾಗುವ ತನಕ ॥ ೨ ॥
ಘನ ಮಹಾಲಿಂಗನ ಪೂಜಿ ಆಗುವ ತನಕ।
ಅನುಹತದಿಂದ ಮೈಮರೆದಿರುವ ತನಕ ॥
ಮನಸಿನ ಮೈಲಿಗಿ ತೊಳೆದು ಹೋಗುವ ತನಕ।
ದಿನಕರ ಬಸವನ ದಯವಾಗುವ ತನಕ ॥ ೩ ॥

೨

ಎಲ್ಲೆಲ್ಲಿಯೂ ಆತ್ಮದರ್ಶನವಾದ ಸಾಧಕನಿಗೆ ಪೂರ್ಣ ಸಮದೃಷ್ಟಿ ಉಂಟಾಗುವದು

(ರಾಗ–ಭೂಪ, ತಾಲ–ಕೇರವಾ)

ಎಂದು ಮೈಯಾ ಮರೆಸಿ ಇದರಂತೆ।
ಈ ಜಗವೆಲ್ಲಾ ಶಿವಮಯವಾಗುವಂತೆ ॥ ಪ ॥
ಹುಲಿ ಕರಡಿ ನೋಡಿದರೆ ಆಕಳಂತೆ।
ವಿಷದ ಹಾವು ಜೇಳು ಕಂಡರೆ ಕೂಸಿನಂತೆ ॥ ಅ.ಪ. ॥

ಸೂಳೆ ನೆಳೆಯರು ಕೂಡಿ ಬಂದರೆ ಹಿಗ್ಗುವಂತೆ ।
ನಮ್ಮ ತಾಯಿ ತಂದೆಯೆಂದು ಪಾದಕ್ಕೆರಗುವಂತೆ ॥
ರಾತ್ರಿ ತುಡುಗರು ಬಂದರೆ ಸದ್ದುರುವಿನಂತೆ ।
ಇದ್ದದೆಲ್ಲಾ ಕೊಟ್ಟು ಕಾಲ ಹಿಡಿಯುವಂತೆ ॥ ೧ ॥

ವೈರಿ ಹೊಡೆಯಲಿಕ್ಕೆ ಬಂದರೆ ನಗುವಂತೆ ।
ನಾ ಬಡಿಸಿಕೊಂಡು ಕಾಲ ಹಿಡಿದುಕೊಳ್ಳುವಂತೆ ॥
ನನ್ನ ಕೈಮುಟ್ಟಿ ದೇಹ ಕಡಿದು ಕೊಡುವಂತೆ ।
ಗುರು ಆಶೀರ್ವಾದ ಪೂರ್ಣ ಆಯಿತಂತೆ ॥ ೨ ॥

ವಾದವೆಲ್ಲ ವೇದಾರ್ಥ ಆಗುವಂತೆ ।
ನಾ ಅರ್ಥವಾಡಿ ಹಾಡ್ಯಾಡಿ ನಗುವಂತೆ ॥
ಷಡ್ ರುಜಿಗಳು ಬೇವಿನ ಕಾಯಿ ತಿಂದಂತೆ ।
ನಿಮ್ಮ ನಾಮದ ರಸವು ಜೇನತುಪ್ಪಾ ಸುರದಂತೆ ॥ ೩ ॥

ಈ ದೃಶ್ಯವೆಲ್ಲಾ ಶಿವಮಯವಾಗುವಂತೆ ।
ಈ ದೃಶ್ಯವಿಲ್ಲದಾಗಿ ಅಡಗಿ ಹೋಗುವಂತೆ ॥
ಶಬ್ದದೊಳು ಶಬ್ದ ಹೋಗಿ ಕೂಡುವಂತೆ ।
ನಿಃಶಬ್ದದೊಳು ಓಂಕಾರ ಪಾಡುವಂತೆ ॥ ೪ ॥

ಕತ್ತಲಿ ಬಿತ್ತಲಿ ಗೊತ್ತು ಇಲ್ಲದಂತೆ ।
ನಾ ಅಲ್ಲಿ ಇಲ್ಲಿ ಎಲ್ಲಿ ಏನು ಎಂಬುವಂತೆ ॥
ತಾರೆ ಕಡಿದು ಸೂರ್ಯ ಕೆಳಗೆ ಬಂದಂತೆ ।
ಗುರು **ನಂದ್ಯಾಳ ಸಂಗನ** ದಯ ಪೂರ್ಣವಾಗುವಂತೆ ॥ ೫ ॥

೩

ನೈತಿಕ ಕಾಳಗದಿಂದ ಲಭಿಸಿದ ಆನಂದಪರವಶತೆ

(ರಾಗ-ಮಿಶ್ರಕಾಫಿ, ತಾಲ-ಕೇರವಾ)

ಮಣಿಯದೆ ಮಲಗಿದೆನೊ । ನಾನು ।
ದಣಿಯದೆ ಮಲಗಿದೆನೊ ॥ ಪ ॥

ಮಣಿದು ಗುರುವಿಗೆ । ಹಣಿದು ಶತ್ರುವ ।
ಹರಿಸಿ ರಕ್ತವಾ । ಕುಣಿಸಿ ತಲೆಗಳ ।
ಧಣಿ ಧಣಿ ಧಣಿ ಧಣಿ ನಾದವ ಕೇಳುತ ।
ಮಣಿ ಮಂಟಪದುನ್ಮನಿ ಬೈಲಲಿ ನಾ ॥ ೧ ॥

ಹರಿಸಿ ತಾಪವನು । ಕಾಲಿಲೆ । ವರಿಸಿ ಮಮತೆಯನು ।
ತರಿಸಿ ಸಂಶಯ ಹರಿಸಿ ದುರ್ಗುಣ ।
ಕೊರಿಸಿ ವ್ಯಸನವ । ಜಾರಿಸಿ ಮದಗಳ ।
ಸುರಿ ಸುರಿ ಸುರಿದು ಸುಧಾರಸ ರಂಜಕ ।
ಮೆರೆವ ಸಹಸ್ರದಳ ಮಂಚದ ಮೇಲೆ ॥ ೨ ॥

ತಡಿಯೊ ವಾಯುಗಳನು । ತುಂಡಾಗಿ । ಕಡಿಯೊ ಕ್ಲೇಶಂಗಳನು ।
ಮುಡಿಯೊ ಸಂಶಯ । ಬಡಿಯೊ ಶತ್ರುವ ।
ಕಿಡಿ ಕಿಡಿ ಉದರಿಸಿ ಮೋಹಾಜ್ಞಾನಗಳ ।
ಬಿಡಿ ಮುತ್ತುದುರುವ ಹಂಸತಲ್ಪದ ಮೇಲೆ ॥ ೩ ॥

ಅಳಿದೆ ಮಮತೆಗಳನು । ಕಾಲಿಲೆ । ತುಳಿದೆ ವೃತಗಳನು ।
ಕಳಿದೆ ವ್ಯಸನವ । ಅಳಿದೆ ಸೊಕ್ಕವ ।
ಎಳದೆ ನ್ಯಾಯವ । ಬಳಿದೆ ಮೋಹವ ।
ಥಳ ಥಳ ಥಳ ಬೆಳದಿಂಗಳಿನೊಳು ।
ಬಲ್ಲ **ಚಿದಾನಂದನ** ಬೆಳಕಿನೊಳು ॥ ೪ ॥

೪

ನಿತ್ಯಾನಂದದಲಿ ನೆಲೆಸಿರುವವನು ಅನಿತ್ಯವ ಬಯಸುವನೆ ?

(ರಾಗ- ಪಿಲ್ಲೂ, ತಾಲ-ಕೇರವಾ)

ಕಾಲ ಕರ್ಮವ ಕಾಲಿಲೆ ಒದಿದವ ।
ಕತ್ತಲಿಗಂಜುವನೆ ॥
ಆಲಿಯ ಮೇಲಾತ್ಮನ ನಿಲಿಸಿದ ಪುರುಷ ।
ಬಾಲೇರ ಬಯಸುವನೆ ॥ ೧ ॥

ಅಮೃತದ ತೃಪ್ತಿ ಆದ ಮಹಿಮನು ।
ಅಂಬಲಿ ಬಯಸುವನೆ ॥
ಕುಂಭಕ ವಾಯು ನಿಲಿಸಿದ ಮನುಜನು ।
ಕುಂದಿ ಕುದಿಯುವನೆ ॥ ೨ ॥

ವೇದ ಆಗಮವ ಸಾಧಿಸಿದವ ಭವ ।
ಬಾಧೆಗೆ ಅಂಜುವನೆ ॥
ನಿತ್ಯಾನಂದ ಆನಂದದೊಳಿದ್ದವ ।
ಅನಿತ್ಯ ಬಯಸುವನೆ ॥ ೩ ॥

ತತ್ವಮಸಿ ಮಹಾವಾಕ್ಯ ಕೇಳಿದವ
ಮೃತ್ಯುವಿಗಂಜುವನೆ ॥
ಆದಿ ಮೂರುತಿ ಗುರು ಭವತಾರಕನು।
ಭೇದವ ಮಾಡುವನೆ ॥ ೪ ॥

೫

ಆತ್ಮಾನಂದ ಪರವಶತೆಯಲ್ಲಿಯ ಸ್ವಗತ ಭಾಷಣ

(ರಾಗ-ಭೈರವಿ, ತಾಲ-ದೀಪಚಂದಿ)

ಇನ್ನೇನಿನ್ನೇನು। ಎನಗಿನ್ನು।
ಇನ್ನೇನಿನ್ನೇನು ॥ ಪ ॥
ಎನ್ನೊಳು ತನ್ನ ಮರ್ಮವ ತೋರಿದ।
ಇನ್ನೇನಿನ್ನೇನು ॥
ಮುನ್ನಿನ ಕರ್ಮವು ನಿರ್ಮೂಲವಾಯಿತು।
ಇನ್ನೇನಿನ್ನೇನು ॥
ಎನ್ನೊಳಾತ್ಮನ ಕುರುಹವು ತಿಳಿಯಿತು।
ಇನ್ನೇನಿನ್ನೇನು ॥
ಕನಸು ಮನಸು ಎಲ್ಲ ನಿನ್ನ ಸೇವೆಯಾಯಿತು।
ಇನ್ನೇನಿನ್ನೇನು ॥
ಭಾವದ ಬಯಲಾಟ ನಿಜವಾಗಿ ತೋರಿತು।
ಇನ್ನೇನಿನ್ನೇನು ॥
ಜೀವ ಶಿವದ ಗತಿ ಸೋಹ್ಯವು ತಿಳಿಯಿತು।
ಇನ್ನೇನಿನ್ನೇನು ॥
ಜನ್ಮ ಮರಣದ ಜಂತ್ರವು ಮುರಿಯಿತು।
ಇನ್ನೇನಿನ್ನೇನು ॥
ಸಂದೇಹ ಸಂಕಲ್ಪ ಸೂತ್ರವು ಹರಿಯಿತು।
ಇನ್ನೇನಿನ್ನೇನು ॥
ಇಮ್ಮನವಿದ್ದುದು ಒಮ್ಮನವಾಯಿತು।
ಇನ್ನೇನಿನ್ನೇನು ॥
ಮಹಿಮತಿ ಜೀವನ ಪಾವನವಾಯಿತು।
ಇನ್ನೇನಿನ್ನೇನು ॥
ತನ್ನೊಳು ಭಾಸ್ಕರ ಗುರು ತಾನೆ ಆದನು।
ಇನ್ನೇನಿನ್ನೇನು ॥

೬

ಹರಿದಾಸರ ಸಂಗವೂ ಆನಂದಕಂದನ ಒಲುಮೆ–ದರ್ಶನಗಳೂ ಲಭಿಸಿದುದರಿಂದ ಹೊರಹೊಮ್ಮಿದ ಧನ್ಯೋದ್ಗಾರಗಳು !

(ರಾಗ–ಭೈರವಿ, ತಾಲ–ದೀಪಚಂದಿ)

ಹರಿದಾಸರ ಸಂಗವು ದೊರಕಿತು ಎನಗೀಗ
ಇನ್ನೇನಿನ್ನೇನು ॥
ವರಗುರೂಪದೇಶ ಸಫಲವಾಯಿತು ಎನಗೀಗ
ಇನ್ನೇನಿನ್ನೇನು ॥ ಪ ॥

ಹಲವು ದೇವಗಳೆಂಬ ಹಂಬಲ ಬಿಡಿಸಿತು । ಇನ್ನೇ ।
ಜಲಜನಾಭನ ನಾಮ ಜಿಹ್ವೆಯೊಳು ನೆಲೆಯಿತು । ಇನ್ನೇ ॥ ೧ ॥

ಮಾಯದ ಸಂಸಾರ ಮಮಕಾರ ತಗ್ಗಿತು । ಇನ್ನೇ ।
ತೋಯಜಾಕ್ಷನ ಧ್ಯಾನ ಹೃದಯದೊಳು ನೆಲೆಸಿತು । ಇನ್ನೇ ॥ ೨ ॥

ತಂದೆ ತಾಯಿ ಮುಜುಕುಂದ ವರದನಾದ । ಇನ್ನೇ ।
ಸಂದೇಹವಿಲ್ಲದ ಮುಕುಂದ ದಯವಾಡಿದ । ಇನ್ನೇ ॥ ೩ ॥

ಏನೆಂದು ಹೇಳಲಿ ಆನಂದಸಂಭ್ರಮ । ಇನ್ನೇ ।
ಆನಂದ ಕಂದನ ಒಲುಮೆಯ ಗಳಿಸಿದೆ । ಇನ್ನೇ ॥ ೪ ॥

ಎನ್ನ ವಂಶಗಳೆಲ್ಲ ಪಾವನವಾದವು । ಇನ್ನೇ ।
ಚಿನ್ಮಯ ಪುರಂದರವಿತಲಯ್ಯ ದೊರಕಿದ । ಇನ್ನೇ ॥ ೫ ॥

೭

ಭೂಕೈಲಾಸದಂತಿರುವ, ಸಂತರ ಸಭೆಯೊಂದ ಅನುಭವಮಂಟಪ

(ರಾಗ–ಭೂಪ, ತಾಲ–ದೀಪಚಂದಿ)

ಇದೆ ಅನುಭವಮಂಟಪವು ॥ ಪ ॥
ಇದು ಘನತರ ಮೋಕ್ಷದುನ್ನತಿಯ ಸಾಧನವು ॥ ಅ.ಪ. ॥

ಇದೆ ಗುರು ಜರಲಿಂಗ ಸ್ತೋತ್ರ ।
ಇದೆ ಕರಸ್ಥಲ-ಇಷ್ಟ-ಪ್ರಣಮ ॥
ಇದೆ ಷಟ್‌ಸ್ಥಲ-ಬ್ರಹ್ಮಘೋಷ ।
ಇದೆ ಪ್ರಾಂಜಳ ಬ್ರಹ್ಮಜ್ಞಾನ ॥ ೧ ॥

ಗುರುತರ ಶರಣನೆ ಕರೆಸಿ ।
ಪರಮಾತ್ಮನನುಭವಮಂಟಪವ ವಿಸ್ತರಿಸಿ ॥
ಉರುವ ಕನ್ನಡಿಯ ಶೃಂಗರಿಸಿ ।

ಗುರುಮೂರ್ತಿ ಜಂಗಮರಂಘ್ರಿಪೂಜಿ ವಿಸ್ತರಿಸಿ ||
ಕರಡಿ ಕಂಸಾಳ ರುದ್ರವೀಣೆಯು |
ಮೆರೆವ ಝಾಂಗಟಿ ತಾಳ ಮುದ್ದಲಿ ||
ಸುರರು ಘನರು ಆಡು ಪಾಡುತ |
ನೆರೆವ ಧುಮುಧುಮು ಘಡನೆ ಆಗುತ || ೨ ||
ಪಡವಾಗ್ನಿ ಮಂಟಪದೊಳಗೆ | ಆ |
ಮೃಡನು ಒಲಿದು ಅನುಭಾವದುಜ್ವಲಿಗೆ ||
ಪೊಡವಿಯೊಳು ಶರಣ ಸಂತತಿಗೆ ||
ಕಡಲು ಉಕ್ಕತು ಗಿರಿಯು ಕರಗಿತು |
ಷಟ್‌ಸ್ಥಲದೊಳು ತುಂಬಿ ತುಳುಕಿತು ||
ಗುಡುಗು ಹೊಡೆದಿತು ಸಿಡಿಲು ಮಿಂಚಿತು |
ಬಿಡದೆ ಜಲದೊಳು ಜ್ಯೋತಿ ಉರಿಯಿತು || ೩ ||
ಶಶಿಭಾನು ವಕ್ರದೊಳಿರಲು ನಾಲ್ಕು |
ದೇಶದ ಭಕ್ತರು ಲಯದೊಳಿರಲು ||
ಭಸಿತ ರುದ್ರಾಕ್ಷೆ-ಮಾಲೆಯೊಳು ||
ಎಸೆವ ಜಂಗಮ ಬಂದ ಮಾರ್ಗದಿ |
ಹೃಷಿತದಾಡುವ ಶಿಶುವಿನಂದದಿ ||
ಬಸವ ಸಂತತಿಯಾದ ಪ್ರಮಥರು |
ಪಡೆದರಾಗತಿಹರ್ಷ ಮನದೊಳು || ೪ ||
ಮುನ್ನ ಕಲ್ಯಾಣ ಪಟ್ಟಣದಿ |
ಚನ್ನಬಸವದೇಶಿಕನನುಭವಮಂಟಪದಿ ||
ರನ್ನ ಕೆಚ್ಚಿದ ಸಿಂಹಾಸನದಿ ||
ಬಣ್ಣ ಹರಿಯಿತು ಚಿನ್ನವಾಯಿತು |
ಹೊನ್ನ ಕಳಸವ ಶೂನ್ಯ ನುಂಗಿತು ||
ತಾನು ತನ್ನೊಳು ಆದ ಮೇಲೆ |
ಚನ್ನಬಸವನ ಜ್ಯೋತಿ ನುಂಗಿತು || ೫ ||
ಬೈಲು ಆದವರೆಲ್ಲ ಬೈಲು |
ನಿರ್ಬೈಲ ಮಟ್ಟಿಯ ಕಟ್ಟಿ ಹಿಡಿದರೆಂಬುವರು ||
ಸಹಾಯ ಸಂಪತ್ತು ಉಳ್ಳವರು ಹೀಗೆ |
ನ್ಯಾಯ ಮಾಡುತಲವರು ಸತ್ತಿಲಿದ್ದರು ||
ಕಾಯರಹಿತ ಜೀವರಹಿತ | ಮಾಯರಹಿತ ಬೆರಟುರೇಶ ||
ಛಾಯರೂಪ ಷಡಕ್ಷರಿ ಮನ- | ವಾಯಿತಿಂದನುಭಾವಮಂಟಪ || ೬ ||

ಅನುಬಂಧ – ೧

ಕವಿಗಳ ಕಾಲ – ಗ್ರಂಥಗಳು

ಹೆಸರು	ಕಾಲ		ಪ್ರ. ಗ್ರಂಥಗಳು
೧. ಪ್ರಭುದೇವರು	ಸು. ಕ್ರಿ. ಶ.	೧೧೬೦	ವಚನಗಳು
೨. ಬಸವಣ್ಣನವರು	,, ,,	೧೧೬೦	ವಚನಗಳು
೩. ಮಹಾದೇವಿಯಕ್ಕನವರು	,, ,,	೧೧೬೦	ವಚನಗಳು
೪. ಕುಮಾರವ್ಯಾಸ	,,	೧೪೦೦	ಭಾರತ
೫. ವ್ಯಾಸರಾಯರು	,, ,,	೧೪೪೭–೧೫೧೯	'ತರ್ಕತಾಂಡವ' 'ನ್ಯಾಯಾಮೃತ' 'ತಾತ್ಪರ್ಯಚಂದ್ರಿಕಾ'
೬. ಪುರಂದರದಾಸರು	,,	೧೪೮೪–೧೫೬೪	ಕೀರ್ತನೆಗಳು
೭. ಕನಕದಾಸರು	,,	೧೫೦೯–೧೬೦೭	'ಕೀರ್ತನೆಗಳು' 'ಮೋಹನ ತರಂಗಿಣೀ' 'ಹರಿಭಕ್ತಿಸಾರ'
೮. ನಿಜಗುಣಾರ್ಯರು	,,	೧೫೫೦	'ಕೈವಲ್ಯಪದ್ಧತಿ' 'ವಿವೇಕ ಚಿಂತಾಮಣಿ' 'ಪರಮಾನುಭವಬೋಧೆ'
೯. ರಾಘವೇಂದ್ರರಾಯರು	,, ,,	೧೬೦೧–೧೬೭೧	'ಪರಿಮಳ' 'ಗೀತಾವಿವೃತಿ'
೧೦. ಮಹಿಪತಿರಾಯರು	,, ,,	೧೬೧೧–೧೬೮೧	ಕೀರ್ತನೆಗಳು
೧೧. ಕೃಷ್ಣರಾಯರು	,, ,,	೧೬೬೩–೧೭೨೪	ಕೀರ್ತನೆಗಳು
೧೨. ವಿಜಯದಾಸರು	,,	೧೬೮೭–೧೭೫೫	ಕೀರ್ತನೆಗಳು
೧೩. ಷಣ್ಮುಖಸ್ವಾಮಿಗಳು	,, ,,	೧೭೦೦	ವಚನಗಳು
೧೪. ಗೋಪಾಲದಾಸರು	,,	೧೭೨೧–೧೭೬೩	ಕೀರ್ತನೆಗಳು
೧೫. ಜಗನ್ನಾಥದಾಸರು	,,	೧೭೨೮–೧೭೮೯	'ಹರಿಕಥಾಮೃತಸಾರ'
೧೬. ಚಿದಾನಂದಾವಧೂತರು	,, ,,	೧೭೫೦	ವಚನಗಳು
೧೭. ಸರ್ಪಭೂಷಣರು	,, ,,	೧೭೯೫–೧೭೩೮	'ಕೈವಲ್ಯವಲ್ಲರಿ'
೧೮. ನಿಂಬರಗಿ ಮಹಾರಾಜರು	,, ,,	೧೭೮೯–೧೮೪೫	ಬೋಧಸುಧೆ
೧೯. ಶಂಕರಾನಂದರು	,, ,,	೧೮೦೦	'ಕೈವಲ್ಯನವನೀತ'
೨೦. ಶಿವಲಿಂಗವ್ವನವರು		—	ಪದಗಳು
೨೧. ಶರೀಫ ಸಾಹೇಬರು	,,	೧೮೧೯–೧೮೮೯	ಪದಗಳು
೨೨. ಹೊರ್ತಿ ರಾಮರಾಯರು	,,	೧೯೩೭ (ಸಮಾಧಿಸ್ಥರಾದರು)	
೨೩ ಭಗವಂತಪ್ಪನವರು	,,	೧೮೮೪–೧೯೪೬	ಪದಗಳು
೨೪. ಲಿಂಗಪ್ಪನವರು	,,	೧೮೮೯–೧೯೧೫	ಪದಗಳು
೨೫. ಹರಿವಿಠಲೇಶರು	,,		ಪದಗಳು

ಅನುಬಂಧ – ೨

ಟಿ ಪ್ಪ ಣಿ ಗ ಳು

ಪ್ರಕರಣ ಎರಡು

(೧)

ಮೂಡಲು ದಿಕ್ಕು-ಪೂರ್ವ:—ಯೋಗಶಾಸ್ತ್ರದಲ್ಲಿ ಇದಕ್ಕೆ 'ತ್ರಿಕೂಟ' ಎಂಬ ಹೆಸರು. ಇದೊಂದು ಚಕ್ರ (Plexus).

ಎಡ-ಬಲ-ಮಧ್ಯ:—ಇಡಾ, ಪಿಂಗಳಾ, ಸುಷುಮ್ನಾ ಎಂಬ ಹೆಸರಿನ ಶ್ವಾಸನಾಡಿಗಳು

ಐದರೊಳಗೈದು ಹುದುಗಿಕೊಂಡಿಹುದು:—The Panch Prāṇas lie inactive in the body made up of the Panch Mahābhūtas.

ಪ್ರಭುಮಹಿಮೆಯೊಳಗೆ ಲಯವಾಗಬೇಕು:-One must lose oneself in the glory of God.

ಪಶ್ಚಿಮ ದಿಕ್ಕು:—ಯೋಗಶಾಸ್ತ್ರದಲ್ಲಿ ಇದಕ್ಕೆ 'ತ್ರಿಹಾಟ' ಎಂಬ ಹೆಸರು. ಇದೊಂದು ಚಕ್ರ (Plexus).

ಕೆಂಡವ ಕರೆದು:—ಜಿಂಕೆಯ ಮಳಿಯನ್ನು ಕರೆದು.

ಕಿಚ್ಚಿದ್ದು ಆಡಗಿತಲ್ಲೊ:—cf. 'ಆಡುತ ಮೂಡುತ ಆಡಗುತಲಿಹುದು' —ಪುರಂದರದಾಸ, ಮತ್ತು 'ದಿಸೇ ತವ ತವ ಲಪೇ। ಲಪೇ ತವ ತವ ಆಭಾಸೇ'।—ಜ್ಞಾನೇಶ್ವರ.

ಋಷಿಗಿರಿ-ಊರ್ಧ್ವಗಿರಿ:-ಇದಕ್ಕೆ 'ಗೊಲ್ಲಾಟ' ವೆಂತಲೂ 'ಸಹಸ್ರದಲಕಮಲ' ಎಂತಲೂ ಯೋಗಶಾಸ್ತ್ರದಲ್ಲಿ ಹೆಸರು. Top or focal centre of the brain.
cf. ಶ್ರೀಗಿರಿಯು ಶರೀರದೊಳಗುಂಟು
—ಸರ್ಪಭೂಷಣ.

ಜೈಲಿಗೆ ಜೈಲು ನಿರ್ಜೈಲು:—The space of space is spacelessness. It is not merely a void. It is a positive entity, viz. the Absolute.

ಮೂಲ ಬ್ರಹ್ಮ:—Foundational Reality.

ಶ್ರೀಸಿದ್ಧಲಿಂಗೇಶನ ಶರಣ:— Bondsman of Siddhalingeśa. cf. ಜಗದಾಧಿಪನ ಕಿಂಕರನೆಂದು ಮೆರೆಸಿದೆ.-ಜಗನ್ನಾಥದಾಸ

(೨)

ಜಾವ ಜಾವಕೆ ಒನ್ಮೆ ನೋಡಿ ಹಿಗ್ಗುತಲಿ:—
Why are you smiling? Are you having a re-vision of God?
cf. Not in entire forgetfulness
And not in utter nakedness.
But trailing clouds of glory do we come
From God who is our home;
Heaven lies about us in our infancy
—Wordsworth

(೩)

ಘ್ರಾಣೇಂದ್ರಿಯ ವಿಷಯದಿಂದ...ಪುಷ್ಪದಲ್ಲಿ:
cf. ಜೇಲು ಭ್ರಮರ ಭೇದಿ ಕೋಡೇ।
ಫಲತೈಸೆ ಕಾಷ್ಠ ಕೋರಡೇ।
ಪರೀ ಕಳಿಕೇ ಮಾಜೀ ಸಪಗಡೇ।
—ಜ್ಞಾನೇಶ್ವರ.

Note:—
The relationship of a bee with a lotus is more apparent than that with the Champak flower. The petals of a Champak

flower are loose and disconnected. Hence a bee cannot be hidden in a Champak flower.

ಇಂತಿಷ್ಟು ಪ್ರಾಣಿಗಳು.....ಹರಿದಾಡುವ ಮಂದಮತಿ:—

cf. ಶಬ್ದಾದಿಭಿಃ ಪಂಚಭಿರೇವ ಪಂಚ
ಪಂಚತ್ವಮಾಪುಃ ಸ್ವಗುಣೇನ ಬದ್ಧಾಃ।
ಕುರಂಗ-ಮಾತಂಗ-ಪತಂಗ-ಭೃಂಗ-
ವಿನಾ ನರಃ ಪಂಚಭಿರಂಚಿತಃ ಕಿಮ್ ॥

—ಭಾಗವತ ೧೧ ಸ್ಕಂದ.

(೪)

ಎನ್ನ ಭಾಗದ ವೈದ್ಯ ನೀನೆಯಾದಿ:—cf.
ಸದ್ಗುರು ಬೈದ ಮಿಲೇ ಅವಿನಾಶಿ.

—ಮತ್ಸ್ಯೇಂದ್ರನಾಥ.

(೫)

ಈ ರಾಜ್ಯಕೆ:—Two suggestions:
(i) This world or (ii) This Kingdom.

ಮನ್ನಿಸುವ ದೊರೆಯಿಲ್ಲ ..... ಕರುಣೆ-ತೋರುವರಿಲ್ಲ:—cf. ಪರರ ಬೇಡಿಪ್ಪಂತೆ ಗತಿಯಾಯಿತಲ್ಲ!
ನರರ ಸ್ತುತಿಸಿ ನಾಲಿಗೆ ಬರಡಾಯಿತಲ್ಲ!

—ಪುರಂದರದಾಸ.

ಇನ್ನಿಲ್ಲಿ ತರವಲ್ಲ:—cf. The utterances of Mahatma Gandhi towards the end of his career.

(೬)

ಕಾಯ-ಕಾಂತಾರ :— ದೇಹರೂಪಿಯಾದ ಅಡವಿ-ದುರ್ಗುಣಗಳು ಪ್ರಾಣಿಗಳು.

ಅಷ್ಟಮದಗಳು :— ದ್ರವ್ಯ-ಯೌವನ-ಸ್ತ್ರೀ-ಕುಲ-ರೂಪ-ವಿದ್ಯಾ-ಅಧಿಕಾರ-ಅನ್ನ.

ಭರತ ಸದೃಕ್ಕ್ಕಿ.....ಕೆಡಹುತೆ:— cf.
ಪ್ರಣವೋ ಧನುಃ ಶರೋ ಹ್ಯಾತ್ಮಾ।

—ಮುಂಡಕೋಪನಿಷತ್ II. 2.4.

ಇದರಲ್ಲಿ 'ರೂಪಕ-ಮಾಲೆ' ಅಥವಾ 'ಸಾಂಗ-ರೂಪಕ' ಅಲಂಕಾರ ಇರುವದು

ಎಚ್ಚಿ: ಎಚ್ಚು:— ಹೊಡೆದು ಇಸು-ಎಸು-To shoot.

(೭)

ಎಲೋ ದಾರಿಕಾರನೇ ಮಲಗಿಕೊಂಬರೆ ಹೀಗೆ?:—cf.
Indulging the flesh, to use that rest for ease to my flesh.
—Bunyan's Pilgrims' Progress.

Also cf. ಕಹಾಂ ಕೇ ಪಥಿಕ ಕಹಾಂ:

—ತುಳಸಿರಾಮಾಯಣ.

And cf. the following poem of Krishnanand.

ಮುಸಾಫಿರ ಸೋತಾ ಹೈ ಬೇಹೋಸ।
ನೈನ ಮೇಂ ಭರಾ ನೀಂದ ಕಾ ರೋಸ ॥ಟೆ॥
ಪೂಂಜಿ ಪಾಸ ಬಹುತ ತೂ ಲಾಯಾ।
ಇಸ್ ನಗರೀ ಮೇಂ ಜಬ ತೂ ಆಯಾ।
ಕಹೀಂ ನ ಠಗ ಲೇ ಜಾವೇ ಜೋಂಸ ॥೧॥

ಜಿಸ ಕಾರಜ ಕೋ ಜೋ ತೂ ಆಯಾ।
ಸೌದಾ ವಹ ಕಛು ಕರ ನಾ ಪಾಯಾ।
ಯಹೀ ಬಧಾ ಅಫಸೋಸ ॥೨॥

ಝೂಂಠೇ ಸುಖ ಕಾ ನಿದಿಯಾ ಸೋಯಾ।
ಬಿನಾ ಬಿಚಾರ ಮಾಲ ಸಬ ಖೋಯಾ।
ದೀ ಜೈ ಸಬ ಕೋ ದೋಸ ॥೩॥

ಕೃಷ್ಣಾನಂದ ಜಾನ ಲೊ ಹರಿಕೋ।
ಜಾನಾ ಹೈ ಜೋ ಅಪನೆ ಘರ ಕೋ।
ಪ್ರಭು ಪದ ಕರ ಸಂತೋಸ ॥೪॥

ನಗುವಳು: Another reading is ಕುಣಿವಳು. Death masculine or feminine

ತೊಳಲು:— To roam, ಅಲೆದಾಡು.

ಬರುವ ಮುಂದೆ.....ತೀರಿತು. ಮುಂದಿನ್ನು .....ಸುಖಿಸಿಲೋ ಮಾನವಾ. cf.
In this mortal fair the only profit is God. —Bacon.

Also cf.
There are three kinds of people who come to this mortal fair. Some come to buy and sell, others to take part in the games, still others who come simply to look on. The last are the philosophers.

—Pythagoras.

ಕರಿ, ಹುಲಿ,.....ಕರಡಿಗಳು:— Dante also compares the leopard with lust, the lion with pride and the she-wolf with avarice.

ಪ್ರಕರಣ ಮೂರು

(೧)

ಪ್ರಾಚೀನ-ಪ್ರಾಕ್ತನ—Fate.

ಹಕ್ಕಿ ಆಂಗಳದಲ್ಲಿ...ಹಾರಿಹೋದಂತೆ:—cf.

ಪಕ್ಷೆ ಅಂಗಣಿ ಉತರತಿ। ತೇ ಕಾ ಗುಂತೋ
ನಿಯಾ ರಾಹತಿ । —ಏಕನಾಥ.

ನಾನಾಪರಿಯಲ್ಲಿ ಸಂತೆ ನೆರೆದಂತೆ.....
ಹೋದಂತೆ:—cf.

ಹಿರಿದಾದ ಸಂತೆ ನೆರೆದೊಂದು ಜಾವಕ್ಕೆ
ಹರಿದು ಹೋದಂತೆ ಸರ್ವಜ್ಞ ।
—ಸರ್ವಜ್ಞ.

ಮುಕ್ಕಳಾಡಿ...ಅಳಿಸಿ ಪೋದಂತೆ:—cf.

ಬಾಳಿ ಘರಾಚಾರ ಮಾಂಡಿಲಾ ।
ತೋ ಸವೇಜೆ ಮೋಡೋನಿ ಗೇಲಾ ॥
—ಏಕನಾಥ.

ನಸತಿಕಾರನು.....ಹೋದಂತೆ:—cf.

ಪಾಂಥಸ್ಥ ಘರಾಸೀ ಆಲಾ ।
ಪ್ರಾತಃಕಾಳೀ ಉಠೋನಿ ಗೇಲಾ ॥
—ಏಕನಾಥ.

Note:— The coincidences between Ekanāth and Purandardās are remarkable. Who is the borrower? or Is Pandharpur the inspirer of both ?

(೨)

ಒಡಗೂಡು:—(i) To enter, (ii) To become one with.

ತೊಂಡ:—Vagabond.

ತೊಂಡನಾಗಿ ಪೊತ್ತು, ತಿರುಗುವ ಚಿಂತೆ:-cf.
'If a man is fat he is liable to be made a carrier of loads.'

Note:—cf.

'ಚಿಂತ್ಯಾಕ ಮಾಡತಿ ತಿವನೇ ಇದ್ದಾನೇಳು'
—ನಿಂಬರಗಿ ಮಹಾರಾಜ.

'ಚಿಂತೆ ಯಾತಕೊ ಬಯಲ ಭ್ರಾಂತಿ
ಯಾತಕೊ ?
—ಪುರಂದರದಾಸ.

(೩)

ಗುಂಗುರಿಗೆ :—ಗುಂಗೀ ಹುಳದ ಮರಿಗೆ.

ಪರದಲ್ಲಿ ಪದವಿಯುಂಟು, ಇಹದಲ್ಲಿ
ಸೌಖ್ಯವುಂಟು:—cf.

'ಉಭಯಮೇವ ಸಮ್ರಾಟ್' !
—ಬೃಹದಾರಣ್ಯಕ.

(೪)

ವಾಕ್ಯವೊರೆಗಳು :— ಪ್ರಾರ್ಥನೆಯ ನುಡಿಗಳು cf. ಹಾಲನು ಬೇಡುತ ಮೊರೆ ಯಿಡಲುಪಮನ್ಯು.

ಪೇಳುವೆ ನಾ ನಿನಗೆ:-Another reading is ಪೇಳಲೇನು ನಿನಗೆ ? :— It will mean—Is it necessary for me to express by word of mouth?

ಸಾರುವೆ:—(i) I will approach you (ii) I will proclaim your glory.

(೫)

ಅಂತರಂಗದ ಏಕಾಂತ ಭಜನಿ:—Meditation of God in the recesses of the heart.

ಮುಂದಿನ ಪದವನು ಹೊಂದಿಸಿ ಪೊರೆಯಲು :— To lead me to a higher stage and protect me there.

ಪದಾಬ್ಜ ತೋರುತ :— The vision of God's feet comes towards the end of man's spiritual career.

(೬)

ನಾಲ್ಕಾರು ಹದಿನೆಂಟು :— ನಾಲ್ಕು ವೇದ, ಆರು ಶಾಸ್ತ್ರ, ಹದಿನೆಂಟು ಪುರಾಣ.

ಮಲಕು : ತೊಡಕು:— (here) Births and deaths—ಯೋನಿ.

ನೆಲೆ :— Foundational Source-Being.

ಖೂನ :— ಕುರುಹು Sign.

ನೀನಿರುವ ಸ್ಥಳದ ಗಾಳಿಯು ಬೀಸದೆ:— Not a breeze of your existence came to me.

ತಲೆ ಕೆಳಗನೆ ಮಾಡಿ ತಪವ ಮಾಡಿದೆ:— I hung my head down and made penance in that position. Remember, it is not *Śīrṣāsana.*

ಅಡಕ:—Hiding. ಮರೆಯಾಗಿರುವಿಕೆ.

ಮನೋನ್ಮನವಾಗಿ :— Raised my consciousness to the super conscious level.

ಪ್ರಕರಣ ನಾಲ್ಕು

(೧)

ಹರಿನಾಮಾಮೃತ:—cf.

ನಾಮು ಘೇತಾ ಮನ ನಿವೆ ।
ಜಿವ್ಹೇ ಅಮೃತಚಿ ಸ್ರವೇ ।

—ತುಕಾರಾಮ.

ಕಾಲನ ದೂತರು.....ದಾಳಿ ಬಾರದ ಮುನ್ನ ಧರ್ಮವ ಕೈಕೊಳ್ಳಿ:—cf.

ಗೃಹೀತ ಇವ ಕೇಶೇಷು ಮೃತ್ಯುನಾ—
ಧರ್ಮಮಾಚರೇತ್ । —ಸುಭಾಷಿತ

ಸುಳಿಗಾಳಿ :— Whirlwind.

ಇನ್ನೂ ಆದರು :— cf.

ಅಬ ಭೀ ನಹಿ ಬಿಗಡಾ ಹೈ ಕುಛ್ ।

(೨)

ಮನಸಿನ ಮುರಿಗೆ:—Twists of the mind, crookedness

ಆರ್ಜವ ಮಾಡು-ಮನವೊಲಿಸು :— To flatter cf. ಆರ್ಜವ ಕರಣೇ- Marathi.

(೩)

ಸುಮ್ಮನಿರು ನಾಲಿಗೆ :— Maintain an absolute epoche–ಮೌನ. cf. Tulsidasa's apostrophe to the tongue viz.

'ಕಾಹೇ ನ ರಸನಾ ರಾಮುಹಿ ಗಾವಹಿ'

ಪರತರಾನಂದ :— Highest bliss.

Note:-This poem and the poem 'ಹೌದಪ್ಪಾ ಹೌದಪ್ಪಾ ಹೌದು ದೇವರ' were given to us by a Jangam of Bardol.

(೪)

ಗೊಬ್ಬರವ ಚಿಲ್ಲಿ:-Another reading ಕುಂಟಿಲಿ ಹರಗಿ.

ದಣ್ಣನೆ ದಣಿದು (Frequentative) :— ಪೂರ್ಣ ತೃಪ್ತನಾಗಿ

(೫)

ಮೊದಲ ಭಕ್ತಿಗೆ ಬದಲವಾಗದೆ:—cf.

ದಿವಸೇ ದಿವಸ ಅಧಿಕಚಿ ಪ್ರೀತಿ ।
ಯಾಸಾನ ಚಢತೀ ವಾಢತೀ ಭಕ್ತಿ ॥
—ರಾಮದಾಸ.

Also cf.

ದಿನ ದಿನ ಬಢತ ಚಲಿ. —ಕಬೀರ.

ಮಧುರವಚನದಲ್ಲಿ ..... ಕದಲದೇಕರೂಪವಾಗಿ:–Merge your mind in the sweet instructions of the spiritual teacher without allowing it either to become fickle or turbid.

ಬ್ರಹ್ಮನಾಳ:—Spinal cord or ಸಹಸ್ರದಲಚಕ್ರ or ನಾಭಿಕಮಲ. Another reading is ಬ್ರಹ್ಮನಳಿನ.

ಕೀಲು :— Secret-key.

(೬)

ಶಬ್ದಸೂತಕ :— Sin of loquacity or mere words.

ಕಾಳಕತ್ತಲೆ:—Dark night of the soul.

ಪರುಷವು ತನ್ನಲ್ಲಿ.....ಬಡತನವ:–cf.

'ಬೇಡಿಕೊಂಬುವದೇಕೊ ಸೆರಗೊಡ್ಡಿ'
ಬಡತನವೇ ಇಲ್ಲ ! —ಭಗವಂತಪ್ಪಾ.

And, ರಾಜಯಾಚೀ ಕಾಂತಾ ಕಾಯ ಭೀಕವಾಗೆ ? —ಜ್ಞಾನೇಶ್ವರ.

ಕರುಣವಿಲ್ಲದೆ ಚರಣ ಕಾಣವು:—cf.

ಸಮಚರಣ ದೃಷ್ಟಿ ।
—ತುಕಾರಾಮ.

and ಪಾನಲೆ ಚಿತ್ತೀ ಸಮಾನ ।
—ನಿಳೋಬಾ.

ಪ್ರಕರಣ ಐದು

(೧)

ಆದಿಯೊಳು:—In ancient times

ಭೇದವ ಬಿಡಿಸಿದ:—ಜೀವ ಶಿವ ಎಂಬ ಭೇದವನ್ನು ಅಳಿಸಿದ.

ಪ್ರಪಂಚದ ಕಡಲ ಮಧ್ಯದಲಿ ನಿಂದು:–cf.

(i) ಯಾ ಲಾಗಿ ಶತಜರ್ಜರ ನಾವೇ !
ರಿಗೋನ ಕೇವಿ ನಿಶ್ಚಿಂತ ಹೊಆವೆ ?
—ಜ್ಞಾನೇಶ್ವರ.

(ii) ಟೂಟಿ ನಾವ ಉಪರ ಜಾ ಬೈಠಾ ।
—ಕಬೀರ.

ಅರಿತು–ಮರೆತು–ತಿಳಿದು–ತಿಳಿಯದೆ:—Wittingly or unwittingly. Too much stress has been put on the word 'unwittingly'.

ಭಕ್ತಿ-ಭಾವವ ನೋಡದೆ.....ನಂಬಿದವರಿಗೆ ಮುಕ್ತಿಯ ಪಾಲಿಸುವ:–Mere belief to the present poet is enough even without faith or devotion.

cf. Believe that God, Freedom and Immortality are real and they will one day become real to you. —James.

This is a pragmatic view of belief.

As against this *Basaveśvar* advocates a full devotional attitude in the following *vachana*.

ನಂಬರು ನೆಚ್ಚರು ಬರಿದೆ ಕರೆವರು,
ನಂಬಲರಿಯರೀ ಲೋಕದ ಮನುಜರು;
ನಂಬಿ ಕರೆದರೆ ಓ ಎನ್ನನೆ ಶಿವನು ?
ನಂಬದೆ ನೆಚ್ಚದೆ ಬರಿದೆ ಕರೆವರ
ಕೊಂಬ ಮೆಟ್ಟಿ ಕೂಗೆಂದ ನಮ್ಮ
ಕೂಡಲಸಂಗಮದೇವ.

cf. also, ನಂಬುನಂಬಿಲೊ ಮನುಜ ಹಲವು
ಹಂಬಲಿಸಿದರು ನಂಬಿಗೆಯೆ ಕಾರಣವು
ಸಾಂಬಸೊಲಿವುದಕೆ ।
—ಸರ್ವಭೂಷಣ.

and :

'Thrice blessed are those who believe '

Note:—This is a poetical but unpsychological statement. There is no difference between belief and devotion.

(೨)

ಗಾರುಡಿಗಾ:—Magician, wonder-worker.

ಮರಕಿವಿಯೊಳು:—Expectant and expanded ears.

cf. 'ಶ್ರವಣ ಸಮುದ್ರ-ಸಮಾನ'

—ತುಲಸೀದಾಸ.

ನಾರಿ ಬದಕು ಮನೆ.....ಸೇರಿ ಸೇರದಂತೆ ಮಾಡಿದ:—He made me love them and not love them. Not that I had lost my love for my wife and children and wealth and home, but these became to me subordinate to the all-absorbing love of God.

cf. ಆತ್ಮನಸ್ತು ಕಾಮಾಯ
ಸರ್ವಂ ಪ್ರಿಯಂ ಭವತಿ ।
—ಉಪನಿಷತ್.

ಎಡಬಟ್ಟೆ:—By path.

ಮರುಳು ಎನ್ನ ಮನ.....ಬಗ್ಗಿತಲ್ಲ :— Foolish mind came into his grip.

(೩)

ಹಾವು:— Two-fold significance:

(i) A symbol of the senses of man.

(ii) A symbol of the spiritual power.

Note :—If it makes its head downwards it tends towards sensuous life; if it makes it upwards, it tends towards God.

ಹಾವು ತುಳಿದು ಹಾರಿನಿಂತೆ...ಕಳವಳ ಗೊಂಡಿತು:—

Having trampled upon the serpent I took a jump and became bewildered and agitated.

Action first and emotion afterwards.

—James Lange Theory of Emotion.

ಭಾವ ಸ್ಮೃತಿ ತಪ್ಪಿ :—Lost all Power of thought and memory.

ಹರಿಗೆ ಹಾಸಿಗೆಯಾದ ಹಾವು, ಹರನ ಕೊರಳೊಳಿರುವ ಹಾವು—

cf. ನಾಗಶಯನನ ಮೂರ್ತಿಯು ಕಂಡೆ ।
ಭೋಗಿಭೂಷಣ ತಿವನ ಕಂಡೆ ॥
—ಕನಕದಾಸ.

It is bed of *Viṣṇu* and necklace of *Śiva*. It reconciles the opposite claims of *Vaiṣṇavism* and *Śaivism*.

ಮೋದ ರೂಪ ಕ್ರೋಧರೂಪ :— In a joyous and angry mood combined together.

(೪)

ಹುತ್ತು:-Ant-hill; Body with nine holes.

ಗೊರಲಿ:—White-ant; Spiriton.

ಬಾಲ ಮೇಲಕೆತ್ತಿ :— With its tail turned upwards. Symbol of sensuality.

ಮಣಿಪುರ ಕಮಲ :— One of the six *cakrās* the *cakra* of the navel. The six *cakrās* are : ಮೂಲಾಧಾರ, ಸ್ವಾಧಿಷ್ಠಾನ. ಮಣಿಪುರ, ಅನಾಹತ, ವಿಶುದ್ಧೀ, ಆಜ್ಞಾ.

ಸಣ್ಣ ಗೊರಲಿ ಬಂತು.....ನುಂಗಿತು :— The spiriton enters and eats up both the serpent and the ant-hill.

cf. When love enters the sphere (Universe) it drives away Hate and when Hate enters, it drives away Love.'
—Empedocles.

ಯಾವ ಸ್ಥಾನದಲಿ...ಗೊತ್ತು:— Where the spiriton was, the charmer (Guru) knows and even he does not know.

cf. ಸೋ ಅಂಗ ವೇದ ಯದಿ ವಾ ನ ವೇದ। ನಾಸದೀಯಸೂಕ್ತ
—ಋಗ್ವೇದ.

(೫)

ಖೂನ :- ಕುರುಹು. A 'sign',—a symbol through which spiritual experience acquaints itself and makes its appearance. (See Marathi word ಖೂಣ).

ಬಿಡದೆ :— May be taken along with both ಜೀಡುವದು and ನಿಜ ರೂಪ.

(i) Continuous petition.
(ii) Continuous vision.

ರೂಢಿಯೊಳಗೆ :—In worldly affairs.

ಕಡಲು ಹೊಕ್ಕಿಹೆ :— I have entered the ocean of existence.

Another reading is ಒಡಲು ಹೊಕ್ಕಿಹೆ :— It means I have entered Thy stomach (like the young of a Kangaroo).

ಕಡೆಗಾಣಿಸೊ ..ಪಿಡಿದು ಕೈ:—Take me by the hand and lead me to the other shore.

cf. ನಡು ನೀರಿನಲ್ಲಿ ಕೈ ಬಿಡುವರೇ?
ಕಡೆಗಾಣಿಸೋ ಹೇ ಮುರಾರೇ।
— ಪುರಂದರದಾಸ.

ತಾಯಿಯೋಪಾದಿ :- ತಾಯಿಯಂತೆ.

(೬)

ಜೀಡಿಕೊಳ್ಳದೆ ನೀಡುತ ಪೊರೆವ:— He offers me His protection without my asking Him for it. It shows the pre-fulfilment of desires.

ತನ್ನನುಭವ...ತೋರಿಸಿಕೊಟ್ಟು:— Made me participate in the secrets of his realisation and even in realisation itself.

(೭)

ಕಂಗಳ ಕೊನೆ:- Corners of the eyes.

ತಿಂಗಳ ಬೆಳಕು:—Moonlight.

ಭೂರಿ ಬ್ರಹ್ಮಾನಂದ:—Repleteness of beatification

ವಿರತಿ...ಬತ್ತಿ, ಭಕ್ತಿ.....ಸುಘೃತ, ಅರಿವು ಜ್ಯೋತಿ:—cf.

ನಾಮಕೆ ತೈಲ ಸುರತ ಕೈ ಜಾತಿ
ಬ್ರಹ್ಮ ಅಗಿನ ಉದಗಾರು ರೇ ॥ ೧ ॥
ಜಗಮಗ ಜೋತ ನಿಹಾರ ಮಂದಿರಮೆ
ತನು ಮನ ಧನ ಸಬ ವಾರು ರೇ ॥ ೨ ॥
—ಕಬೀರ.

ಎರಕ—(೧) ಕರಗಿದ (೨) ಪ್ರೀತಿ.

ಪ್ರಕರಣ ಆರು

(೧)

ಚಿತ್ತ ನಿತ್ಯದಲ್ಲಿ ನಿಲಿಸುವಂಥ :—Makes the mind rest in the Eternal.

ತಮ್ಮ ತಾವು ಮರೆತು..ಬಿದ್ದಿರುವರು:— Egoism springs from not

understanding the true nature of the self.

ಪಾದ ಹೊಂದಿದವರಿಗೆಲ್ಲ.. ಮುಕ್ತಿಪಡಿಸುವಂಥ:— He lifts up all his disciples to the pinnacle of liberation. The poet speaks of *Parivāra* Mukti.

cf. ಲೈ ಪರಿವಾರ ತರೀ। —ಕಬೀರ.

ಪರಿವಾರ:—Constitutes the galaxy of devotees.

(೨)

ದರೋಡೆ:- Assault of robbers.

cf. Bunyan's Pilgrim's Progress and the Hindi song 'ಮುಸಾಫಿರ ಸೋತಾ ಹೈ ಜೇಹೋಸ.'

ಶಕುನದ ಹಕ್ಕಿ:-The Prophetic bird. It means ಶಕುಂತ both in Kannada and Sanskrit. It is also called ಭಾರದ್ವಾಜ.

ನೆಲೆಗಳ್ಳರು:-Head-thieves. The five *Vikāras*:— ಕಾಮ, ಕ್ರೋಧ, ಲೋಭ, ಮೋಹ, ಮದ. ಮತ್ಸರ.

ಎಂಟು ಹತ್ತು ಮಂದಿ ಬಂಟರು:- The eight and ten bravedos:

(*i*) The *Aṣtamadās*:— ದ್ರವ್ಯ, ಯೌವನ, ಸ್ತ್ರೀ, ವಿದ್ಯಾ, ಕುಲ, ರೂಪ, ಉದ್ಯೋಗ, and ಅನ್ನ.

(*ii*) The ten *Indriyās*:— ಹಸ್ತ, ಪಾದ, ಮುಖ, ಪಾಯು, ಉಪಸ್ಥ, ಶ್ರೋತೃ, ನಯನ, ತ್ವಕ್, ರಸನಾ, and ಘ್ರಾಣ.

ನೋಡಿ ಒಗಿಯೊ:— Take accurate aim. cf. ಬ್ರಹ್ಮ ತಲ್ಲಕ್ಷ್ಯಮುಚ್ಯತೇ।
ಅಪ್ರಮತ್ತೇನ ವೇದ್ಧವ್ಯಮ್॥

ಕೂಡಿ ಭಜಿಸೊ:- Pray to God with one pointed devotion.
cf. ಶರವತ್ ತನ್ಮಯೋ ಭವೇತ್।
cf. ಹ್ಯುಪಾಸನಾ ನಿತಿತಮ್।
ಭಾಗವತೇನ ಜೇತಸಾ॥

ಮೂಲ ಮಂತ್ರ ಪ್ರಣವ:-The foundational *Mantra*.
cf. ಪ್ರಣವೋ ಧನುಃ।

ಬೇಡಿದ ಪದಾರ್ಥ ದೊರಕುವದು:—You will get the highest object upon which your heart has been set.

(೩)

ಮಾಯದ ಮುಳ್ಳ:- Thorn of infatuation or delusion.

ಸ್ವಾದ-ರುಚಿ:- Taste and flavour.

ಬ್ಯಾಲದ ಮುಳ್ಳ:- Thorns of a crooked variety like the twisted thorns of rose bush or the berry tree.

ಹೆಣ್ಣು.. ಹೊನ್ನು.. ಮಣ್ಣು:— cf. ಜರ, ಜಮೀನ, and ಜೋರು in Hindi. ಕಾಮಿನೀ, ಕಾಂಚನ, and ಕೀರ್ತಿ— in Sanskrit, and woman, wealth and wine–in English.

ಡೊಣ್ಣೆ ಮುಳ್ಳ:— Biggest thorns.

ಬೇಕಾಗಿ ಮುರಿಸಿಕೊಂಡಿರಪ್ಪಾ.....ಹಾಯಲಿಲ್ಲ:— Vicarious liability or censure is not justified. You have to censure yourself.

cf. ಜಾನಾಮಿ ಧರ್ಮಂ ನಚ ಮೇ ಪ್ರವೃತ್ತಿಃ
ಜಾನಾಮ್ಯಧರ್ಮಂ ನಚ ಮೇ ನಿವೃತ್ತಿಃ।
ಕೇನಾಪಿ ದೇವೇನ ಹೃದಿ ಸ್ಥಿತೇನ
ಯಥಾ ನಿಯುಕ್ತೋಽಸ್ಮಿ ತಥಾ
ಕರೋಮಿ॥
—ದುರ್ಯೋಧನ.

Note:—

(1) The first thorn of infatuation (ಮಾಯಾ) which is single, affe-

cts the mind and is psycho-metaphysical in character.

(2) The second and the third couple of thorns (ಮಾನಾಪಮಾನ and ಸ್ವಾದ ರುಚಿ) which are dual, affect the ears and the tongue and are physiological in character.

(3) The fourth triad of thorns (ಹೆಣ್ಣು, ಹೊನ್ನು, ಮಣ್ಣು) affect the eye and are social in character.

(೪)

ಮರೆತಿರಲಾರೆನು— cf.

ತೊರೆದು ಜೀವಿಸಬಹುದೆ ಹರಿ ನಿನ್ನ ಚರಣ
ವನು —ಕನಕದಾಸ

ಇಂದುಶಂಕರಾ :- Another reading is ಇಂದುಶೇಖರಾ (ಚಂದ್ರಮೌಳಿ).

ಭಕ್ತಹರಳ ದೋಷಪರಿಹಾರಾ :— Three meanings :—

(1) Oh God! make your diamond devotee-pure remove his sins.

(2) Oh God! the Diamond of Thy devotees!
Make us pure, remove our sins.

(3) Thou art the remover of the sins of those who are the diamonds-(foremost) among the devotees.

Note:— The poem seems to be composed by a disciple of Doddapeti Basava. He finds a similarity between Purandardās and his own spiritual teacher Basava.

In this connection we may also note two songs of Purandardās.

(i) ಜಂಗಮರು ನಾವು ಜಗದೊಳು and (ii) ಶಿವದರುಶನ ನಮಗಾಯಿತು ಕೇಳಿ, wherein he is speaking of himself as a ಜಂಗಮ and as a devotee of ಶಿವ, which might have led the present poet to institute a comparison between him and his own teacher Basava.

(೫)

ಅನ್ಯಾಯ:— Wrong, ತಪ್ಪು, ಅಪರಾಧ.

ಒಪ್ಪಿಸಿಕೊಟ್ಟ:— Handed me over to Fate.

ನ್ಯಾಯ.....ಒಪ್ಪಿತು ದೇವಾ! All right and wrong, merit and demerit belong to you, Oh my spiritual Teacher.

ಎನ್ನ ಮಾಯಾ...ಸಮಯಕ್ಕೆ. cf.

'ನಿನ್ನ ಮಾಯಾ ನಿನಗೇನ ಮಾಡತದ ?
ಅಳಲಿಕ್ಕೆ ಹಚ್ಚತದ!'
—ಶ್ರೀ ಭಾವುಸಾಹೇಬ ಮಹಾರಾಜ.

ಧ್ಯಾನ ಮಾಡೆಂದು ತಿಳಿಸಿ ಹೇಳಿದಿ:—Told me to meditate on God.

cf. Our Father, which art in Heaven
Hallowed be Thy Name.
Lead us not into temptation,
But deliver us from evil:
For Thine is the kingdom,
And the power and the glory for ever! Amen.
—St Mathew. 9-13

ಸುಳವು ಸೂಕ್ಷ್ಮವನು ಕೂಡಿ:—Identifying myself with your subtle moves.

(೬)

ಹಿಂಗಿಸಲಿ ಜನ್ಮದ ಅವತಾರ:— Two meanings :—

(i) How shall I put a stop to process of generation.

(ii) How shall I fulfill my life's ideal.

ನೂತನ ತನು ತೊಡಿಸಿ:— Conferred on me a new birth; made me assume a spiritual form.

Note:—This is a sort of ದ್ವಿಜತ್ವ. Second birth. A ದ್ವಿಜ-twice-born is he who is born in spirit. It does not mean simply a Brahmin.

ಭಯವ ಪರಿಹರಿಸಿ:—cf.

ದ್ವಿತೀಯಾದ್ವೈ ಭಯಂ ಭವತಿ। and
ಆನಂದಂ ಬ್ರಹ್ಮಣೋ ವಿದ್ವಾನ್ ನ
ಬಿಭೇತಿ ಕದಾಚನ।
—ಉಪನಿಷದ್.

ಮುಕುರಾನಂದ ಬೋಧಿಸಲಾಗಿ:–Showed me my full spiritual form as in a mirror. Or you have bestowed on me joy derived from a look in a mirror.

cf, ಜ್ಞಾನದೇವ ಚಕ್ರಪಾಣಿ ಐಸೆ।
ದೋನಿ ಡೋಳಸ ಆರಸೆ।
ಪರಸ್ಪರಾ ಪಾಹತಾ ಕೈಸೆ।
ಮುಕಲೆ ಭೇದಾ ॥
—ಜ್ಞಾನೇಶ್ವರ.

Another reading is ಮುಖರಾನಂದ 'Infinite-resounding joy'-'illimitable joy'.

ಮುಕ್ತಾಂಗಿಯ ಮದುವೆಯಾಗಿ:—Made me marry the maid of liberation.

cf. ತುಕಾ ಮ್ಹಣೆ ಮುಕ್ತಿ ಪರಿಣಿಲಿ
ನೋವರಿ।
ಆತಾ ದಿವಸಾ ಚಾರಿ, ಪೇಳೀ
ಮೇಳೀ ॥
—ತುಕಾರಾಮ.

(೬)

ಮುಕುತಿ :— Liberation as the vision of the Form of God

Note :— The author discusses the question from the point of view of:—

(i) Time (ii) Space and (iii) motion.

ವೇದದ ಮೊದಲಿನ ಮೂಲ:— God has existed from all eternity (Time).

ಹಾದಿ ಹಾದಿಗೆ ಬಿದ್ದಿಹುದು:—God is spread out every where on every path (space).

Another reading is ಬಿತ್ತಿಹುದು—It is sown upon every path.

ಸಂದಿ ಸಂದಿಗೆ ಜಡಿದಿಹುದು:—It fills every nook and cranny of the Universe (space).

ಸುತ್ತುಮುತ್ತಲು ಸುಳಿಯುವದು:— God moves round about us in a circular fashion (Motion).

cf. ಹರಿ ಹಾ ಭೋವೆ ಭೋವತಾಲಾ।
—ತುಕಾರಾಮ.

ಮತ್ತೆ ಮತ್ತೆ ಆಗಿ ಕಾಂಬುವದು:—God reveals Himself through infinite forms.

ಹಿಂದೆ ನೋಡಲು.... ನಿಂದಿಹುದು:—cf.
ಪಾಠೀಲಿಯೆ ಸಾದ್ಯಂತೆ। ನ್ಯಾಹಾಳಿ
ಶ್ರೀ ಮೂರ್ತೀತೆ।

ಆಣಿ ಪುಢತಿ ಮ್ಹಣಿ ನಮಸ್ತೆ ।
ನಮಸ್ತೆ ಪ್ರಭೋ ॥
—ಜ್ಞಾನೇಶ್ವರ

and ವಾಮು ಸವ್ಯ ದೋನ್ಹೀ ಕಡೇ ।
ದಿಸೇ ದೇವಾಚೀ ರೂಪಡೇ ।
ಪಾಲೀ ಪಾಹೇ ಅಥವಾ ವರೀ ।
ಜಿಕಡೇ ಪಹಾವೇ ತಿಕಡೇ ಹರೀ ।
—ಜನಾಬಾಯಿ.

ಪ್ರಕರಣ ವಿಳು

(೧)

ವಾದಿಗಳು:—Disputants.

ಪರತತ್ವವನು. . .ಕರಕೆ ಕೊಟ್ಟದರಿಂದ:—You have brought me into direct contact with God.

ಕಣ್ಣಿಗೆ ತೋರಿದರಿಂದೆ:—You have endowed me with the vision of the spiritual Principle.

ತನ್ನೊಳು ಬೆರಸುತ್ತೆ ಮೋಕ್ಷವಿತ್ತುದರಿಂದ:—You have conferred beatitude on me by not merely making unison between myself and Thyself, but the unison of both with God.

(೨)

ಮತಿಯು...ನಿನ್ನ ಬೆಳಕಿನಲ್ಲಿ:—Let my thoughts, words and deeds, shine under the canopy of Thy illumination.

ನಿನ್ನ ಕರುಣವೆ..ಎನಗಾಗಲಿ:—Let Thy mercy and compassion constitute, my food, my drink as well as my lifebreath.

ಒಡನೆ ಆಡಿದ ಮಾತು:—Thy instinctive speech — unpre-meditated speech.

ಹೃದಯದಾಳದ ನುಡಿಯು:— Deliberate-pre-meditated speech.

(೩)

ವಿಪುಲ ಮತಿಯನಿತ್ತು:—You gave me plenty of wisdom.

ನಿಪುಣನೆಂದೆನಿಸಿದೆ ತಪಸಿಗಳಿಂದಲಿ:—You not only made me one of the greatest of philosophers but one of the greatest of mystics as well.

ಎನ್ನ ಪಾಲಿಸಿದಂದದಿ ಸಕಲ ಪ್ರಪನ್ನರ ಸಲಹೊ ಮೋದದಿ :— Kindly shower your mercy on all those who surrender themselves to you, as you have done in my case.

(೪)

ಗುಲಾಮ:— Slave of my master.

ಸಣ್ಣಾಗಿ ನಡ್ಯಾವಾ :— I shall live with humility.

ಘೂಳ್ಯಾಗಿ ಮೆರ್ಯಾವಾ:— I shall take pride in roaming like 'dedicated bull'.

ಗುರು..ಹಾಡಿ ಹರಸಾವಾ:— The principal object of song would be to set out the glory of my master.

(೫)

ನಂಬಿಗೆಯು ಅಂಬರದಿ ಬಂದಿಹುದೊ:— He has descended upon the earth like Faith, Personified.

ತಪವೆ ಇಳಿದಿಹುದೊ:—or as a luminous Penance, for the spiritual regeneration of the world.

ಕರ್ಪೂರವು..... ಉರಿಯುತಲಿ:—Like camphor he burns himself out in the spiritual flame and yet remains. He immortalises both himself and his master.

cf ರಾಮದಾಸ ಜಳೋನ ಗೇಲಾ ।
—ಜನಾದಾಸಬೋಧ, ಪು. ೫೪.

ಹಿರಿಯ ಆನಂದವನು ಕರೆಯುವ :—He milches the *Kāmdhēnu* and distributes spiritual bliss to the world.

(೩)

ಚಿದ್ಘನಬೋಧಮಂಟಪ :— Canopy of spiritual illumination.

ತೋಯ ತೋಯ ಬೆರಸಿದಂತೆ :—(Self becomes identical with God) as water is mixed with water.

cf. ಯಥಾ ಜಲಂ ಜಲೇ ಸಿಕ್ತಂ ತಾದೃಕ್ ಭವತಿ ಗೌತಮ ।

ಕಂಡು ತತ್ಸುಖ ಉಂಡು:—We must see the form of God and then enjoy His happiness.

ತ್ರಿಕೂಟದಿ ಮುಳುಗಿ ಆಡುವ:—Plunge sportively in the ತ್ರಿಕೂಟ—the central ventrical which has three apertures.

(೭)

ಗುರುತಾ:-'sign' The Greek 'sigma'

ಮೂಲ ಮಂತ್ರ:—The fundamental *mantra.*

ನಾದ ಬಿಂದು ಕಲಾ:—ನಾದ means sound; ಬಿಂದು means form; ಕಲಾ means light. Phonic, Morphic and Photic experiences.

ಭುವನ ಕಂದರವಾಯಿತು:—The world is reduced to the state of a cavern.

ಪ್ರಕರಣ ಎಂಟು

(೧)

ಗುರು ಚರಣ ಕಮಲದಲ್ಲಿ ಭೃಂಗನಾಗು:—Hum like a bee on the lotus feet of your master.

ಪರತತ್ವ ತಿಳಿದು ಸಾಧುರಸಂಗಿಯಾಗು:—This is a reversal of the ordinary position. First reach reality and then come into contact with the saints.

(1) to deepen experience for self and

(2) to diffuse your experience among the people.

ಮುದ್ರೆ:—Any kind of poise of brain and eyes in which we can concentrate our attention.

ಕಪ್ಪಗೊರಳ ಕಾಡಸಿದ್ಧ:- Kadasiddha the blue-necked God, ನೀಲಕಂಠ.

(೨)

ಕುರುಬರೊ..ನಾವು ಕುರಿಮರಿ :-Teacher is the shepherd and the disciples are the sheep.

Note:—(a) Christ called himself a shepherd; the Saint of Nimbargi led the life of a shepherd; Kanakdas called himself Kurubdas; The Saint of

Umadi called himself a Kurub-shepherd.

'Shepherd's is a very innocent and pure profession.'

(b) This poem has three important implications. (i) Physio-psychological, (ii) Socio-political and (iii) Ethico-spiritual.

ಮೂರು-ಆರು-ಹತ್ತು :— ತ್ರಿಗುಣಗಳು, ಷಡ್ವಿಕಾರಗಳು, ದಶೇಂದ್ರಿಯಗಳು.

ಇನ್ನೂರದ ಹದಿನಾರು ನೂರು:— ೨೧೬೦೦ ಶ್ವಾಸೋಚ್ಛ್ವಾಸಗಳು.

(i) Physio-psychological aspect.
Sheep-Breaths
Rams-Bad emotions
Shepherd-*Sādhaka*

(ii) Socio-political aspect
[1] Sheep-Common people
[2] Rams-Bad elements both male and female
[3] Shepherd-Moral teacher

(iii) Ethico-spiritual aspect
[1] Sheep-disciples
[2] Rams-sins
[3] Shepherd-spiritual teacher

Note:— (a) The saints drag the disciples, without being contaminated by their sins, towards the destination.

cf. ಕಲಿ ಕಲುಷಕೃತಾನಿ ಯಾನಿ ಲೋಕೇ ।
ಮಯಿ ನಿಪತಂತು ವಿಮುಚ್ಯತಾಂ ಹಿ ಲೋಕಃ ॥ —ಬುದ್ಧ.

(b) From a life of sin, the saints wanted people to take to a life of devotion.

(೩)

ಮೊದಲ ಮೈಲಿಗಿ.... ಉಡಿಸಿದನ:—He cleaned the disciple of his evil habits and made him a good man.

ಸದರು :–Pedestal. ಅವನಿ, ಶೃಂಗಾಟಕ, ತ್ರಿಕೂಟ. The central ventricle.

ನಲಿನಲಿದಾಡಿಸಿದನ :—Made me nod frequently.

ಕೋಣನಾಗಬ್ಯಾಡ.... ಹೇಳಿದನ :— He advised me not to adopt the stupidity of a buffalo.

Note:— Stupidity here is more intellectual than moral.

(೪)

ಬಾಡಿಗೆತ್ತಿನಂತೆ :—Like a hired bull.

ಕಾಳ ಕತ್ತಲೆ ಮನೆ :— Dark night of the soul.

ಒಂಭತ್ತು.. ಕೀಲಿ ಹಾಕಿದ :- He simultaneously locked on, my different senses—all the nine door ways.

(೫)

ತನ್ನಂತೆ ತಾ ಮಾಡಿದನ :- (i) He made me visualise my form. He made me not merely to see God, but to see myself.

(ii) He made me like himself.

ನಾದಶಬ್ದದಲಿ.. ಮಾಡೀದನೆ : He gave me an insight not merely in the nature of sounds and words, but in the matter of the names of God.

Note:—This is exactly what is said about the fact of ಸಂಭಾಷಣ —conversation in the case of highly developed mystics.

ವಾದಿ ವಿವಾದಿ..ಗೆಲಿಸಿದನ :— He made me win in the debate with intellectuals.

ಈದ ಹುಲಿಯಂಥ .. ಸಾದ ಮಾಡಿದನ :— He brought my mind which was ferocious like the tigress which has given birth to her young ones, under control.

Note :- The saint of Umadi used to say :— 'My ಪರಮಾರ್ಥ has made me mellow. I have no longer remained a ದೇಶಪಾಂಡ್ಯ.'

ಈಶನು ದತ್ತ.....ಮನ ನಿಲಿಸಿದನ :— He made my mind absorbed in sounds and words and endowed me with the audition of a thousand divine names such as ದತ್ತ, ಮಹೇಶ, ದಿಗಂಬರ and so on.

Note :- There are two readings : (i) ಈಶನು and (ii) ಈಶನ. The first refers to ಈಶ as spiritual teacher or God. The second refers to ಈಶ as the author as it would go with ಮನ. viz. ಈಶನ ಮನ.

(೬)

ಬೋಧಿಸೆನ್ನನು (i) ಬೋಧಿಸೆ + ಎನ್ನನು ; ಎನ್ನನ್ನು ಬೋಧಿಸಲಾಗಿ.

(ii) ಬೋಧಿಸು + ಎನ್ನನು : Guru, initiate me.

ನಿರ್ಗುಣವಾದ ನಾದಬ್ರಹ್ಮ :- The ನಿರ್ಗುಣ reality was ನಾದಬ್ರಹ್ಮ itself.

ಹದಿನಾಲ್ಕರ ನಡುವೆ.....ವೇದಿಕೆಯೊಳು ಕುಳಿತು :— We must sit on the throne in the midst of the four ways. This is also called ಶೃಂಗಾಟಕ, ತ್ರಿಕೂಟ, ಅವನಿ. This is the central ventricle.

ಸಾಲಿಟ್ಟು ಸುರಿತಿರ್ಪ ಹಾಲನು ಸವಿದುಂಡು : Made me enjoy the continuous flow of ambrosial juice.

cf. When you perform your spiritual meditation well' ಅಚ್ಚೀರ ಹಾಲ ಕುಡಿದ್ಹಾಂಗ ಆಗತದ
—Saint of Umadi.

ಕುರುಹೇನು ತೋರದೆ..ಏಕವಾಗೆಂದು :— Exhorted me to reach absolute unison with Reality, without the perception of any sign, visual symbol. cf : ಬಯಲಿಗೆ ಬಯಲು.

Note :— Is the Ultimate Reality markless? It is like the question—Is *Nāda Nirguṇa* or *Saguṇa?* It is a very difficult question. Actual experience alone will give a proper answer.

ಪ್ರಕರಣ ಒಂಬತ್ತು

(೧)

ಅಳಿಯದಿರು ಅರಸುತನ :— Eternal royalty.

ಇನಿಸರ:—ಇನಿದಾದ ಸ್ವರ-ಮಧುರ ಸಂಗೀತ.

ಮೂರಾರು:— ಹದಿನೆಂಟು.

ಐಸಿರಿಗೆ ಸೋತು:— ಐಶ್ವರ್ಯಕ್ಕೆ ವಶನಾಗಿ

ಊಳಿಗ:—Service.

ಹರಿಯು ಸಖ ತಾನೆಂದು:— cf.
ಸಖೇತಿ ಮತ್ವಾ ಪ್ರಸಭಂ ಯದುಕ್ತಂ
ಹೇ ಕೃಷ್ಣ ಹೇ ಯಾದವ ಹೇ ಸಖೇತಿ ।

ಅಜಾನತಾ ಮಹಿಮಾನಂ ತವೇದಂ
ಮಯಾ ಪ್ರಮಾದಾತ್ಪ್ರಣಯೇನ ವಾಪಿ ॥
—ಗೀತಾ. ೬, ೧೧-೪೧.

ಮತಿಮಹಿಮೆಯನೆ ಮೆರೆಸುತಿಹ:—cf.

ಪ್ರಜ್ಞಾವಾದಾಂಶ್ಚ ಭಾಷಸೇ ।
—ಗೀತಾ. ೬, ೨ ೧೧.

Note:—Uddhava also is a perfect type of devotee and philosopher and great self-sacrificer and great lover of God. So Uddhava also stands very high.

(೨)

ಸಂಜೀವರಾಯ:—ಪ್ರಾಣದೇವ or ವಾಯು ದೇವ Three Avatars of ಸಂಜೀವ ರಾಯ :—

(i) ಹನುಮಾನ್, (ii) ಭೀಮ and (iii) ಮಧ್ವಾಚಾರ್ಯ.

Note:—

ಪ್ರಥಮೋ ಹನುಮನ್ನಾಮ ।
ದ್ವಿತೀಯೋ ಭೀಮ ಏವಚ ॥
ಪೂರ್ಣಪ್ರಜ್ಞಸ್ತೃತೀಯಸ್ತು ।
ಭಗವತ್ ಕಾರ್ಯಸಾಧಕಾಃ ॥

ಸಂಜೀವರಾಯನ ನೆನೆದರೆ 'ಅಂಜಿಕೆ', ಹನುಮನ ನೆನೆದರೆ 'ಪಾಪ', ಭೀಮನ ನೆನೆದರೆ 'ತಾಪ', ಮಧ್ವರಾಯರ ನೆನೆದರೆ ಅಂಜಿಕೆ-ಪಾಪ-ತಾಪ (ಮೂರೂ) ಹೋಗುವವು. ಇದಕ್ಕೆ 'ಅರ್ಥಸಮುಚ್ಚಯ ಅಲಂಕಾರ' ಎಂದು ಕರೆಯಬಹುದು.

cf. ಗಂಗಾ ಪಾಪಂ ಶಶೀ ತಾಪಂ
ದೈನ್ಯಂ ಕಲ್ಪತರುಸ್ತಥಾ ।
ಪಾಪಂ ತಾಪಂ ಚ ದೈನ್ಯಂ ಚ
ಘ್ನಂತಿ ಸಂತಾ ಮಹಾಶಯಾಃ ॥

Also cf:—ಪಾಪ ತಾಪ ದೈನ್ಯ ಜಾಯ
ಉಠಾ ಉಠೀ ।
—ತುಕಾರಾಮ.

ರೋಮರೋಮಕೆ ಕೋಟಿಲಿಂಗ
ಉದುರಿಸಿದ :— cf.

(i) ರೋಮ ರೋಮ ದೀಪಕ ಭಯಾ ।
(ii) ರೋಮುಂಗಳೆಲ್ಲ ಕಂಗಳಾಗಿ ನೋಡುತ್ತಿರುವವು. —ಬಸವಣ್ಣ.

ಪುರಂದರವಿಠಲನ ಪಾದಪೂಜೆಯ ಮಾಳ್ಪ :— According to *Purandardas*, ಮಧ್ವಾಚಾರ್ಯ was a Vithal bhakta. Deity, Vithal belongs to the 5th or the 11th century and hence older than ಮಧ್ವಾಚಾರ್ಯ (12th century).

(೩)

ನಾಮತ್ರಯ:-ಅಚ್ಯುತ-ಅನಂತ-ಗೋವಿಂದ.

cf. ಅಚ್ಯುತಾನಂತಗೋವಿಂದ ನಾಮೋಚ್ಚಾರಣ ಭೇಷಜಾತ್ ।
ನಶ್ಯಂತಿ ಸಕಲಾ ರೋಗಾಃ ಸತ್ಯಂ ಸತ್ಯಂ ವದಾಮ್ಯಹಂ ॥

These are greater than ಕಾಮಧೇನು, ಕಲ್ಪವೃಕ್ಷ, and ಚಿಂತಾಮಣಿ.

ಧೂಮಕೇತು :— Fire. Like fire he consumes both pure and impure things.

ಎಲ್ಲರೊಳಿಪ್ಪನು :- God is immanent in all things.

Note :- ಜಗನ್ನಾಥದಾಸ regards God as ಅಂತರ್ಯಾಮಿನ್, while ತುಲಸೀದಾಸ regards God as ಬಹಿರ್ಯಾಮಿನ್. To ಜಗನ್ನಾಥದಾಸ, ಅಂತರ್ಯಾಮಿನ್ was superior to ಬಹಿರ್ಯಾಮಿನ್. Exactly opposite is the case with ತುಲಸೀದಾಸ.

cf. ಅಂತರ್ಜಾಮಿ ಹುಂ ತೇ ಬಡ ಬಹಿರ್ಜಾಮಿಹೈ !
ರಾಮು, ಜೇ ನಾಮು ಲಿಏತೆ ।
ಪೈಜ ಪರೆ ಪ್ರಹಲಾದಹೊ ಕೊ ಪ್ರಗಟೇ
ಪ್ರಭು ಪಾಹನ ತೆ, ನ ಹ್ರಿಯೆತೆ ॥

ಬಲ್ಲಿದರಿಗೆ ಬಲ್ಲಿದ :- Wiser than the wise, or stronger than the strong.

(೪)

ಹೆಬ್ಬುಲಿಯ ಕೂಡ ಸರಸ :- Cutting jokes with a big tiger.

ಚಿತ್ತಜನಯ್ಯ–ಮನ್ಮಥನ ತಂದೆ–ಕೃಷ್ಣ cf. ಕಂತುಪಿತ.

(೫)

ಮಂಡೆಯ ಸಿಕ್ಕ ಬಿಡಿಸಿಕೊಂಬಂತೆ :- To unloose the matted hair.

ಮಡಿಲಲ್ಲಿ-ಉಡಿಯಲ್ಲಿ.

(೬)

ಯಬ್ಬಡತಬ್ಬಡ :- Irrelevant talk.

ಉಣ್ಣದೆ ಹೊಟ್ಟೆ ತುಂಬಿರಬೇಕು– cf.

'ನೇಮ ಆದವ್ಯಾಲೆ ಅರ್ಧಾ ಸೇರ ಹಾಲು ಕುಡಧಾಂಗ ಆಗತದ'—

—ಶ್ರೀ ಭಾವುಸಾಹೇಬ ಮಹಾರಾಜ.

ಎಚ್ಚರದೊಳಗೆ ನಿದ್ದೆ–ಸಮಾಧಿ.

ಹುಚ್ಚನ್ಹಾಂಗ ಕಾಣಿಸಬೇಕು :- cf. ಜಡ-ಮೂಢ ಪಿಶಾಚವತ್। —ಭಾಗವತ.

(೭)

ವೇದಾಂತಿ :- A philosopher

ಸಿದ್ಧಾಂತಿ :- One who has attained the ideal.

ಇಳೆಯಾಣ್ಮ – ಭೂಮಿಯನ್ನು ಆಳುವವ, ಅರಸ.

ಭಂಡ :- Buffoon.

ತಿರಿದುಣ್ಣು–ಭಿಕ್ಷೆ ಬೇಡಿ ಜೀವಿಸು.

ಕರೆದಿಕ್ಕು–ಕರೆದು ದಾನ ಮಾಡು.

(೮)

According to ಜಗನ್ನಾಥದಾಸ there are three types of men :

(1) ಉತ್ತಮ :- Those who say all human actions are due to the will of God.

(2) ಮಧ್ಯಮ:- Those who say good actions are due to God and bad actions are due to us.

(3) ಅಧಮ :- Those who say all good and bad actions are due to us.

There is a fourth alternative which ಜಗನ್ನಾಥದಾಸ does not mention :- There are people who say :- ' I am doing good actions and God is doing bad actions.'

cf. ಕೇನಾಪಿ ದೇವೇನ ಹೃದಿ ಸ್ಥಿತೇನ।
ಯಥಾ ನಿಯುಕ್ತೋಽಸ್ಮಿ ತಥಾ
ಕರೋಮಿ ॥

ಪ್ರಕರಣ ಹತ್ತು

(೧)

ನೀನು ಜಗಕೆ ಬಲ್ಲಿದನು :—cf.

'ಬಲ್ಲಿದರಿಗೆ ಬಲ್ಲಿದ ಜಗನ್ನಾಥವಿಠಲ'.

–ಜಗನ್ನಾಥದಾಸ.

ಕರಿಯು ಕನ್ನಡಿಯೊಳಗಡಗಿದಂತೆ :— Three points of view regarding the relation between the image and the original :

(ಅ) ಅಂಗಾಂಗಿ ಭಾವ :— Part and whole.

(ಆ) ಬಿಂಬ ಪ್ರತಿಬಿಂಬ ಭಾವ :— Reflection and the original.

(ಇ) ತಾದಾತ್ಮ್ಯ ಭಾವ :— Both identical.

The elephant is partially pictured in a mirror. So according to Basaveshwara, God appears to be partially immanent.

Doctrine of partial manifestation.

(೨)

ಬಕ್ಕು-ಬರುವದು.

ಹೆದ್ದೊರೆ-ಹಿರಿದಾದ ಹಳ್ಳ.

ಕೈವಾರ-(i) ಮರ್ಯಾದೆ-ಹೊಗಳಿಕೆ-Honour.

(ii) ನೆರವು-Help.

ಕಲ್ಲು ಕೊಂಡಂತೆ :- Broken by dashing against a stone.

(೩)

ಗಾಡಿಕಾರ :— Miracle performer.

ದಾರಿ ತಪ್ಪಿ ನಡೆದೆ...ಕುಜನರ :— I have trodden the wrong path and have taken to the company of the wicked.

(೪)

ನೀ ಮರೆಯಾಗೆ ಹುಂಕರಿಸಿ ಒದರಲು :— When you had hidden yourself from their sight the cows bellowed.

ಮೊರೆಯಿಡು :— To resign oneself to the will of.

ಚಾಲವರಿ :— To entreat.

(೫)

ಫಾಸಿ ಹಾಕಿದಿ : - Caught me in the net of existence.

ಖುಳ್ಳ :— mean, paralytic.

ಕಕವಾಕಕವಿ :— (Marathi word) Deceit.

ಶಿವನ ಇಚ್ಛೆ ನಡೆಸುವುದೆಲ್ಲ :—cf. Thy will be done. —Christ.

ದೇವಾಚ್ಯಾ ಇಚ್ಛೇನೇ ವರ್ತಾವೇ ।
—ರಾಮದಾಸ.

ಭುಲವಿ :-(Marathi word) Artifice

(೬)

ಜನಿಸಲಾರೆನು ಎನೆ :- I was unwilling to come out of my mother's womb.

Śuka, *Vâmadev*, and *Parîkṣit* stayed in the womb for a long time.

Vâmadev says he became Manu and *Sûrya*.

Parîkṣit was so called because he saw the form of God all round about him in his mother's womb. (*Pari-îkṣit*)

ಮುಂದಾಡಿ..ಮುಂದಾಳು :— Leader.

ಹಿಂದಾಡಬೇಡ :-Two meanings :—

(i) Do not play behind me.

(ii) Do not censure me behind my back.

ಕ್ಷೀರದೊಳಿದ್ದು ನೀರದೊಳಿದ್ದು :—Place me in any circumstance–good or bad.

ಹೇರನೊಪ್ಪಿಸಿದ ಮೇಲೆ ಸುಂಕವೇತರ-ದಯ್ಯ :—

How can there be any toll when the goods are surrendered ?

(೭)

ಗುರು ಲಿಂಗ ಜಂಗಮ...ನಾನೂ ನೀನೆ:— There is triarch unity of God, Guru and disciple.

(೮)

In this poem Vijaya Vithal equals God with the *Anahat* sound, *Jnâna* with a canopy

of illumination, and *Bhakti* with a brilliant tray should with pearls and rubbies.

ಬಿಡಲು ಸಲ್ಲ:— It doesn't behave you to forsake me.

ಸೊಲ್ಲ:- ಮಾತು, ಸಲಹೆ.

ಪ್ರಕರಣ ಹನ್ನೊಂದು

(೧)

ಅಂತರಂಗದ ಕದ :- The door of the heart.

ಸೂಸಿರ್ದ ತಮಸು :- Blinding darkness spreading everywhere.

ತತ್ವಚಿಂತನೆಯೆಂಬ ದೀಪ :- The torch of Divine Meditation.

ಕೋಟಿರವಿಯಂಥ (ದೇವರು) :- He had the illumination of thousand suns.

ರ ಮೆ ಯೊ ಡೆ ಯ :— Personalistic standpoint.

ಸ್ವಮೂರ್ತಿಗಣಮಧ್ಯ :- Pluralistic standpoint.

ಸಚ್ಚಿದಾನಂದ:- Absolutistic.
A combination of all the three standpoints.

ಸ್ವಮೂರ್ತಿಗಣ :-All the attendants of God had the form of God.

cf. ವಸಂತಿ ಯತ್ರ ಪುರುಷಾಃ ಸರ್ವೇ ವೈಕುಂಠಮೂರ್ತಯಃ। -ಭಾಗವತ ೩-೧೫

(೨)

Three stages of Purandaradāsa's spiritual experience of God.

In the present poem ಕೃಷ್ಣಮೂರ್ತಿ ..... ನಿಂತಿರುತ್ತದೆ :- Personalistic standpoint.

In the 4th poem ಕೂಸನು ಕಂಡಿರಾ:- Personal-impersonal standpoint.

In the 6th poem ಬ್ರಹ್ಮಾಂಡದ ಸಭೆಯೊಳಗಲ್ಲಿ :- Impersonalistic stand-point.

ನಿಂತಿರುತ್ತದೆ:- Another reading ನಿಂತಿರುತ್ತಿದೆ.
I suggested a better reading. viz., ನಿಂತಿರುತ್ತದೆ, instead of ನಿಂತಿದಂತಿದೆ as if standing.

(೩)

Any dream in which a God-realiser makes his appearance must come out true.

ಕೃಷ್ಣದರ್ಶನ — ಚತುರ್ಭುಜನಿರುವ ತುಂಗಭದ್ರದಿ-ಕಾಳಿಂಗನ ಹೆಡೆಯ ಮೇಲೆ ಕುಣಿಯುತಿರುವ.

ಅಂದುಗೆ-ಅಂದುಕ,-ನೂಪುರ: Anklet.

(೪)

ಕೂಸನು ಕಂಡಿರಾ :-cf.
'ತೂ ಕೃಪಾಳು' ಮಾವುಲಿ।
ಬಾಲ ವೇಷೇ ಆಲಿ ಜವಳಿ।
—ತುಕಾರಾಮ.

Also cf.
'ಮಗಾ ಹುಟ್ಟಿದವ್ವಾ ಎನಗೊಬ್ಬ'
—ಶಿವಲಿಂಗವ್ವಾ.

ಜ್ಞಾನಿಗಳ ಹೃದಯದಿ ಮಿನುಗುವ ಕೂಸು.
cf.
ಆನೆ ಕನ್ನಡಿಯಲ್ಲಿ ತಾನಡಗಿ ಇಪ್ಪಂತೆ।
ಜ್ಞಾನವುಳ್ಳರ ಹೃದಯದಿ ಪರಶಿವನು।
ತಾನಡಗಿ ಇಹನು ಸರ್ವಜ್ಞ ॥
ಶರಣರ ಹೃದಯದಿ ನೆಲಸಿಹನು ಶಿವನು.
—ಸರ್ವಜ್ಞ।

ಸದಾ ಎನ್ನ ಹೃದಯದಲ್ಲಿ
ವಾಸಮಾಡೊ ಶ್ರೀಹರಿ। -ವಿಜಯದಾಸ.

ತಾನೆ ಬಲ್ಲದು ತನ್ನ ಮಹಿಮೆಯನು :— Its real nature is known to itself.

ಆಕಾರವಿದ್ದು ನಿರಾಕಾರ :- It has got a form, yet it is formless. Purandaradas saw the form, yet it was formless.

(ಜ)

ಈರೇಳು :- ಹದಿನಾಲ್ಕು

ಕಂಗಳ ಬರ ಹಿಂಗಿತ್ತು :- The famine of my eyes has vanished.

cf. ಡೋಳ್ಯಾಚೀ ಭೂಕ ನ ಜಾಯ
ಮಾಝೀ। -ತುಕಾರಾಮ.

ಜಗದಾದಿ ಶಕ್ತಿಯೊಳು ಬೆರಸಿಯೊಡ ನಾಡುವ. ಪರಮಗುರು...ನಿಲವ ಕಂಡು ಬದುಕಿದೆನು :— There are three things here:

(i) Primeval Power.

(ii) Spiritual Guru not only enjoying unison with it but also playing with it.

(iii) Mahādeviakka lives on the contemplation of his height (ನಿಲವ) or bliss (ನಲಿವ). For ನಿಲವ, another reading ನಲಿವ is suggested which means 'bliss'.

(ಟ)

ಬ್ರಹ್ಮಾನಂದದ ಸಭೆ :- Assembly of saints enjoying Divine Bliss.

cf. ಮದ್ಭಕ್ತಾ ಯತ್ರ ಗಾಯಂತಿ।
ತತ್ರ ತಿಷ್ಠಾಮಿ ನಾರದ। -ಭಾಗವತ.

ನಿಲ್ಲದು ನಿಲುಕದು :-cf.
ಧರೂ ಜಾತಾ ಧರತಾ ನಯೇ।
-ರಾಮದಾಸ.

ಕಡೆ ಮೊದಲಿಲ್ಲದ ಒಡಲು :- It has neither beginning nor end.

ಬಲ್ಲಿದ ನಮ್ಮ.....ತಿಳಿಯದು :- Two meanings :

(i) God knows Himself.

(ii) Purandardās as a saint knows Him also.

There is a play upon the word 'Purandar Vithal'.

For the first meaning cf.

'ತಾನೆ ಬಲ್ಲುದು ತನ್ನ ಮಹಿಮೆಯ'.
-ಪುರಂದರದಾಸ.

For the second meaning cf.

ತದಾ ದ್ರಷ್ಟುಃ ಸ್ವರೂಪೇ ಅವಸ್ಥಾನಮ್।
—ಪತಂಜಲಿ.

(ಠ)

ಚುಳುಕಾದಿರಯ್ಯ :- Assumed a subtle form.

cf. ಅಣೋರಣೀಯಾನ್ ಮಹತೋ
ಮಹೀಯಾನ್।

Also cf. ಖಾಲತಾ ಸಪ್ತಹೀ ಪಾತಾಳಾ !
ವರತಾ ಸ್ವರ್ಗಾಹೂನ ಧಿಸಾಳಾ ॥
ಹೊಈ ಮಜಿ ಪೈಸಾ।
ಸಾನಾ ಸುಕುಮಾರ ಹೃಷೀಕೇಶಾ ॥
—ತುಕಾರಾಮ.

(ಡ)

ಮುಟ್ಟಿಕೊಟ್ಟ ಗುರುರಾಯ :- Guru touched God and handed Him over to me.

Note :- The great terminology in mystical literature is :- ದರ್ಶನ, ಸ್ಪರ್ಶನ, and ಸಂಭಾಷಣ. Here ಸ್ಪರ್ಶನ is attended to.

(ಢ)

ಕಾಲಿಲ್ಲದೆ ನಡೆವುದು, ಕರವಿಲ್ಲದೆ ಹಿಡಿವುದು:
cf. ಅಪಾಣಿಪಾದೋ ಜವನೋ
ಗೃಹೀತಾ। -ಉಪನಿಷತ್.

ಕಿವಿಯಿಲ್ಲದೆ ಕೇಳುವದು, ನಯನವಿಲ್ಲದೆ ನೋಡುವದು :-cf.

ಪಶ್ಯತ್ಯಚಕ್ಷುಃ ಸ ಶೃಣೋತ್ಯಕರ್ಣಃ ।
-ಉಪನಿಷತ್.

Also cf. ಬಿನು ಪಗ ಚಲೈ. ಸುನೈ ಬಿನು ಕಾನಾ ।
—ತುಲಸೀದಾಸ.

ಬೆಲೆಯಿಲ್ಲದ ವಸ್ತು :- Made a free gift or a priceless gift.'

ಬಾಧೆ ತಕ್ಕೊಂಡ :— He took over to himself all our calamities.
cf. Buddha's saying :
ಕಲಿ ಕಲುಷಕೃತಾನಿ ಯಾ ಲೋಕೇ ।
ಮಯಿ ನಿಪತಂತು ವಿಮುಚ್ಯತಾಂ ಹಿ ಲೋಕಃ ॥

ಪ್ರಕರಣ ಹನ್ನೆರಡು

(೧)

ಇದೇ ಬ್ರಹ್ಮಜ್ಞಾನ:— Definition of ಬ್ರಹ್ಮಜ್ಞಾನ.

(i) Vedantic and (ii) Mystical

(ii) *Vedāntic* :— ಸದಾನಂದ..... ಬೋಧಮಯ :— Combination of Bliss (ಆನಂದ) and knowledge (ಬೋಧ).

(iii) *Mystical*:- (a) *Visual*-ನಿದಾನದೊಳು.....ಗುರುಪಾದವ ಕಾಣಲು Man should be able to see the feet of the Lord inside his heart.

cf. ಪಾಯಾವರಿ ಶಿರ ಠೇವುನೀಯಾ ।
ತುಕಾ ಮ್ಹಣೇ ಕಾಯ ಫಡಿಯಂತೇ ವಾಗಾ ॥ — ತುಕಾರಾಮ

ನಿದಾನದೊಳು :- Three meanings:
(i) Mental equipoise (ii) Continuous efforts (iii) Termination of effort.

(b) *Vocal* :- ನಿಜರಾಗವ ನುಡಿಯಲು:- ನಿಜರಾಗ is the tune which issues from the depths of the presence of the spirit inside us. That ರಾಗ must issue from the depths of the recesses of our own being.

(c) *Devotional* :—ಹೆಸರು ಪೊಗಳಿ, another reading ಹೆಸರು ಬೊಗಳಿ. It is not very difficult to praise God; but it is very difficult to bark out His name reflexly or automatically.

cf. ಪಹಾ ತುಕೇ ಭುಂಕವಿಲೇ
—ತುಕಾರಾಮ

Note:- When we bark out the name of God reflexly, automatically, unconsciously, we might be called the dogs of God.

(೨)

ಒಯ್ಯಾರದಿ :— With joyful grace.
ದೇಹದ ಧ್ಯಾಸ:- ದೇಹಭಾವ:- Identification with the body.
ತಾಯಿ ಒಡಲು :— ಮೂಲ :— Origin, Source, Womb.

(೩)

ಭೇದ :— ಅರ್ಥ :— Meaning. Distinction.

ರಹಸ್ಯ :— Secret.

ಈರೇಳು-ಎರಡು ಏಳು :-ಹದಿನಾಲ್ಕು.

(೪)

ಘನಪದ :—ಶ್ರೇಷ್ಠ ಸ್ಥಾನ.

ಆಕ್ಕು :—ಆಗುವದು.

ಮಾಯಾಬ್ಧಿ :—ಮಾಯೆಯ ಸಮುದ್ರ.

(೫)

ರಾಗದಿ : ಭಕ್ತಿಯಿಂದ :— In full devotion.

ಮಾಜದ :—Indelible....ಮಾಜು :— To conceal.

ದುರಿತ :— Sin.

ನೀಗು : ಇಲ್ಲದಂತಾಗು :- To disappear

ಅಹುದೆನಿಸುವದು :- ಧನ್ಯ ಧನ್ಯ ಆಗುವಿರಿ.

cf. ಹೌದ ಹೌದ ಆಗಶದ ।

—ಶ್ರೀ ಭಾವುಸಾಹೇಬ ಮಹಾರಾಜ.

(೬)

ಉಬ್ಬಸರೋಗ :— A disease where there is cessation of breath.

ಬಿಸಜಾಕ್ಷಿ :—ಕಮಲದಂಥ ಕಣ್ಣುಳ್ಳವಳು.

ಒಸೆದು :—ಆನಂದದಿಂದ.

ಸುಲಿಯುವ : ಕದಿಯುವ :- Plundering

(೭)

ಅನುಮಾನಿಸ ಬ್ಯಾಡೊ :- Don't entertain any doubt.

ಮರವು :—Self-oblivience. ಅಜ್ಞಾನ.

ಮೈಕೊಡು :— ಒಳಗಾಗು.

ಗರಿಗಟ್ಟಿ :— Tipping a plumage in your turban.

There are three meanings of this phrase.

(1) With a feather in your cap, being proud of the discipleship of a great saint.

(2) Having become conscious of the up-springing of new feathers.

(3) Spreading your plumage like a peacock (in great joy).

ಪ್ರಕರಣ ಹದಿಮೂರು

(೧)

ತರುಳ—ತರಳ—ಬಾಲ

ವಿಜಯನ ಸತಿ :—ಅರ್ಜುನನ ಹೆಂಡತಿ-ದ್ರೌಪದಿ.

ದೊರೆ ಹಣ್ಣು :-Semi-ripe condition.

(೨)

ದಿವ್ಯನಾಮ :—Divine Name.

ಪರವಶವಾಗು-ಮುಳುಗು-ಒಂದಾಗು.

ಬಚ್ಚಿಡು :-To keep a thing secret.

(೩)

ಹಂಗು :- Obligation.

ಮುಕರ :- ಮೊಸಳೆ.

ಬಾಲೆ :- ದ್ರೌಪದಿ.

ಹಸುಳೆ :- ಚಿಕ್ಕ ಮಗು.

ಆ ಮರಾ ಈ ಮರಾ :- That tree, this tree inverted name of Rāma.

(೪)

ಮನಸು-ತೃಪ್ತಿ-ಆಗದು :—Our thirst becomes unquenchable. The more we taste of it, the more our desire grows.

ಸಾರ್ವ-ಸಾರುವ :— Proclaims.

ಬಿರುದ-ವಿರುದ :- Praise, Distinction (ಬ್ರೀದ :- in marathi).

(೫)

ಕರದುಣ್ಣಲಿಲ್ಲ :—ಹಾಲನ್ನು ಹಿಂಡಿ ಕುಡಿಯಲಿಲ್ಲ.

ಪಾಠಭೇದ :—ಕರೆಯದಲೆ ಬಂದಿಹುದು ಹರಿನಾಮ ಕಾಮುಧೇನು :—She has come to you of her own accord.

ಹೊರಿಯಲು :—ಪೊರೆಯಲು.

ಮುರವು :—Fodder.

ತೊರೆ :—To become full, ready for discharge.

ನಿಜಾನಂದ-ಸಿರಿಸುಖ :— Great bliss and glory.

(೬)

ಗ್ರಾಸ :–ಒಂದು ತುತ್ತು ಅನ್ನ.

ಯಾಯವಾರ :—ಯಾಯಾವರದ ಶಬ್ದವ.

ಭಿಕ್ಷುಕ :-also ಭಿಕ್ಷೆ Alms.

ಕೂಟಜನ :—Multitudes of people. ನೆರೆದ ಜನ.

ತೋಟಿಕ :—ಬಡಿದಾಟಿ.

ಪೂತಾತ್ಮ :— ಪುಣ್ಯಪುರುಷ.

ದಾಸನೆಂದರೆ ಪುರಂದರದಾಸನು :—He is the only Dasa.

cf.–ಭಕ್ತನೆಂದರೆ ಬಸವಣ್ಣ.

Note:–At the *Anubhava Mantapa* at Kalyan, Basaveshwara once described himself as the only *Bhakta* whereupon men in the Assembly rose to their feet and began to question him about the statement. Then Basaveshwara said in reply that all others were *Jangamās* whereas he was the *Bhakta*.

There is a play upon the word *Bhakta*:

(i) Devotee of God. (ii) Lowest category in the ಷಟ್‌ಸ್ಥಲ.

(೭)

ನಂಬಲಾರ :—ಪ್ರೀತಿಸಲಾರ.

ಅಡಿಗಡಿಗಾನಂದ.....ಎನ್ನುತಲಿ.

If tears of joy fall down from your eyes at every step that you take, if you become horripulated, if you remember the name or God with every word that you speak.....

ಪ್ರಕರಣ ಹದಿನಾಲ್ಕು

(೧)

ಬಿಲ್ವಪತ್ರಿ :–Three petalled leaf. The two eyes and the nose constitute the ಬಿಲ್ವಪತ್ರಿ, involving the fixing of the gaze upon the tip of the nose.

ಸೊಲ್ಲಿನಲ್ಲಿ ಇರುವ ಶಿವನ :— Shiva in the form of sound.

ಮೆಲ್ಲನಾಗಿ ನೋಡಬೇಕು :- We should look at Him gently and continuously.

ಭೋರನೆಂಬುವ ನಾದದಲ್ಲಿ - ನಿಲ್ಲಬೇಕು :— Live courageously in the tempestuous by Anahat sound.

Note :– The Name that is used in meditation will be the carrier both of the light and sound as well as the form of God.

ಮತ್ಕರ್ದೊಳು-ನಿರ್ಮಲನಾಗಬೇಕು :- You will be an embodiment of eternal purity and a great moving purifier yourself.

ಉರಗಗಿರಿನಿಲಯ :—One who resides in ಉರಗಗಿರಿ. The three mountains ವೆಂಕಟಗಿರಿ, ಅಹೋಬಲ and ಶ್ರೀಶೈಲ together exhibit a zigzag shape like that of a serpent. Hence the whole range is called ಉರಗಗಿರಿ. Here ಶಿವ and ವಿಷ್ಣು come together.

(೨)

ಗುರಿಯಾ ಒಗೆದೆನೊ ಬ್ರಹ್ಮಕೆ :-I have aimed at the target of ಬ್ರಹ್ಮನ್.

cf. ಬ್ರಹ್ಮ ತಲ್ಲಕ್ಷ್ಯಮುಚ್ಯತೇ ।
ಅಪ್ರಮತ್ತೇನ ವೇದ್ಧವ್ಯಮ್ ॥
—ಉಪನಿಷತ್.

Note :—A similar experience is narrated in ಶಿವಗೀತಾ chapter 3-4-5 where Rama shoots at Shiva and becomes unconscious.

ಶರೀರವ ಮರೆತು :-Unconscious of bodily existence.

ಮುಚ್ಚಳ :— Lips. ಜಾತಿ – Superior quality.

Note :— *Implications of the allegory.*

